ಭಾರತೀಯ ಗ್ರಾಮೀಣ ಯುವಕ ರೈತ ಸಂಘಗಳ ಸಂಘಟನೆ

ಪಿ ಹನುಮಪ್ಪ

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-24

ಪ್ರಕಟಣೆ 53

ಭಾರತೀಯ ಗ್ರಾಮೀಣ ಯುವಕ ರೈತ ಸಂಘಗಳ ಸಂಘಟನೆ

ಓ. ಹನುಮಪ್ಪ

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು-560024

ಪ್ರಕಟಣೆ 42

ಭಾರತೀಯ ಗ್ರಾಮೀಣ ಯುವಕ ರೈತ ಸಂಘಗಳ ಸಂಘಟನೆ

ಪಿ. ಹನುಮಪ್ಪ
ವಿಸ್ತರಣ ಮುಂದಾಳು
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

1977

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560024

ಗ್ರಾಮೀಣ ಯುವಕ ರೈತ ಸಂಘಗಳ ಸಂಘಟನೆ—(ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಿಂದ ಸಿದ್ಧಗೊಂಡು ಸಂವಹನ ಸಮಿತಿ ಪ್ರಕಾಶಿತ)
ಪ್ರಥಮ ಸಂಪುಟ 1977, ಪುಟ xii + 84   ಬೆಲೆ: ಸಾದಾಪ್ರತಿ ರೂ. 6-50
ಕ್ಯಾಲಿಕೋ ಪ್ರತಿ ರೂ. 10-50

ಪರಿಷ್ಕೃತ ಬೆಲೆ

ಸಾದಾಪ್ರತಿ ರೂ. 8-25

ಕ್ಯಾಲಿಕೊಪ್ರತಿ ರೂ. 13-25 ರೂ. 13-25

ಪ್ರಧಾನ ಸಂಪಾದನೆ

ವೀ. ಚ. ಹಿತ್ತಲಮನಿ

ಕನ್ನಡ ಪ್ರಾಧ್ಯಾಪಕರು

ತಾಂತ್ರಿಕ ಪರಿಶೀಲನೆ

ಜೆ. ಶ್ರೀನಿವಾಸಮೂರ್ತಿ

ಕೃಷಿ ವಿಸ್ತರಣ ಪ್ರಾಧ್ಯಾಪಕರು

ಮುದ್ರಣ

ಕೃಷಿ ವಿಶ್ವವಿದ್ಯಾನಿಲಯದ ಅಚ್ಚುಕೂಟ

ಬೆಂಗಳೂರು-560024

ಕುಲಪತಿಗಳ ಹಾರೈಕೆ

ಇಂದಿನ ವಿಶ್ವದಲ್ಲಿನ ಹಲವಾರು ಸಮಸ್ಯೆಗಳಿಗೆ ಕೃಷಿ ಉತ್ಪಾದನೆಯ ಹೆಚ್ಚಳವೇ ಬಹುಮಟ್ಟಿಗೆ ಪರಿಹಾರ ಒದಗಿಸಲು ಸಾಧ್ಯ. ಕೃಷಿ ಉತ್ಪಾದನೆಯ ಹೆಚ್ಚಳವು ಕೃಷಿ ಸಂಶೋಧನೆಗಳ ಫಲಿತಾಂಶಗಳನ್ನಳವಡಿಸುವಿಕೆಯನ್ನು ಅವಲಂಬಿಸಿದೆ. ಕಳೆದ ಒಂದು ದಶಕದಲ್ಲಿ ಕೃಷಿ ಸಂಶೋಧನೆಯು ನಾನಾಮುಖವಾಗಿ ಬೆಳೆದಿದೆ. ಅದರ ಪ್ರಯೋಜನವನ್ನು ಕೆಲವು ರೈತರು ಪಡೆದಿದ್ದಾರೆ. ಅದರಲ್ಲಿ ಕೆಲವರು ಹೆಚ್ಚಿನ ಪ್ರಗತಿಯನ್ನು ಸಾಧಿಸಿ, ಜಾಗತಿಕ ಗರಿಷ್ಠ ಸಾಧನೆಯನ್ನು ನಾವೂ ಸಾಧಿಸಲು ಸಾಧ್ಯವೆಂಬ ಭರವಸೆಯ ದೃಷ್ಟಾಂತವೆನಿಸಿದ್ದಾರೆ. ಈ ಅಳವಡಿಕೆ ಹಾಗೂ ಸಾಧನೆಗಳು ಕೆಲವರ ಸ್ವತ್ತಾಗಿ ಉಳಿಯದೆ ಸಾರ್ವತ್ರಿಕವಾಗಬೇಕು. ಆಗ ರಾಷ್ಟ್ರದಲ್ಲಿ ನಿಜವಾದ ಕೃಷಿ ಪ್ರಗತಿ ಹಾಗೂ ಸಾಮಾಜಿಕ ಕಲ್ಯಾಣ ಮೂಡಿ ಬರುತ್ತದೆ. ಈ ಕಾರ್ಯಸಾಧನೆಯಲ್ಲಿ ಕೃಷಿ ವಿಜ್ಞಾನ ಸಾಹಿತ್ಯ ರಚನೆಯು ಮಹತ್ವದ ಅಂಶವಾಗಿದೆ. ಈ ದೃಷ್ಟಿಯಲ್ಲಿ ಕೃಷಿ ವಿಜ್ಞಾನ ಪುಸ್ತಕಗಳು ಪ್ರಾದೇಶಿಕ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಔಚಿತ್ಯಪೂರ್ಣವಾಗಿದೆ.

ಸ್ವಾತಂತ್ರ್ಯಾನಂತರದ ಅಭ್ಯುದಯದ ಹಲವಾರು ಯತ್ನಗಳಲ್ಲಿ ರಾಷ್ಟ್ರೀಯ ಭಾಷೆಗಳ ಅಭಿವೃದ್ಧಿಯೂ ಒಂದು. ಹಿಂದಿ ಭಾಷೆಯೊಂದಿಗೇನೇ ಇತರ ಎಲ್ಲ ಪ್ರಾದೇಶಿಕ ಭಾಷೆಗಳ ಬೆಳವಣಿಗೆ ನಡೆಯಬೇಕೆಂದು ಸಂಸತ್ತು ನಿರ್ಧರಿಸಿದೆ. ಹಲವಾರು ಭಾಷೆಗಳು ಬಳಕೆಯಲ್ಲಿರುವ ನಮ್ಮ ರಾಷ್ಟ್ರದಲ್ಲಿ ಎಲ್ಲ ಭಾಷೆಗಳೂ ಸಮತೂಕವಾಗಿ ಬೆಳೆದು ಬಂದಾಗಲೇ ರಾಷ್ಟ್ರದ ಸಮಗ್ರತೆ ಬೆಳೆದುಬರುತ್ತದೆ. ಈ ಭಾಷೆಗಳು ಸಾಕಷ್ಟು ಅಭಿವೃದ್ಧಿ ಹೊಂದಿದಾಗ ಶಿಕ್ಷಣಮಾಧ್ಯಮಗಳಾಗಲು ಸಮರ್ಥವಾಗುತ್ತವೆ. ನಾಡಿನ ಭಾಷೆಗಳೆಲ್ಲವನ್ನೂ ಶಿಕ್ಷಣಮಾಧ್ಯಮಗಳಾಗುವಂತೆ ಬಲಗೊಳಿಸುವ ಹೊಣೆ ವಿವಿಧ ವಿಶ್ವವಿದ್ಯಾನಿಲಯಗಳದ್ದು. ಅದಕ್ಕನುಗುಣವಾಗಿ ಪ್ರಾದೇಶಿಕ ಭಾಷೆಗಳು, ಕೃಷಿ ಶಿಕ್ಷಣಮಾಧ್ಯಮಗಳಾಗುವಂತೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾದ್ದು ಕೃಷಿ ವಿಶ್ವವಿದ್ಯಾನಿಲಯಗಳ ಕೆಲಸವಾಗಿದೆ. ನಮ್ಮ ಕೃಷಿ ವಿಶ್ವವಿದ್ಯಾನಿಲಯವು ಈ ಕಾರ್ಯಸಾಧನೆಗೋಸುಗ ಕನ್ನಡದಲ್ಲಿ ಕೃಷಿ ಸಾಹಿತ್ಯ ನಿರ್ಮಾಣ ಕೈಗೆತ್ತಿಕೊಂಡಿದೆ. ಇಷ್ಟು ದಿನ ಇಂಗ್ಲಿಷ್ ಭಾಷೆಯಲ್ಲಿಯೇ ಶಿಕ್ಷಣ ಪಡೆದು, ಬಳಕೆ ನಡೆಯಿಸಿದ ಶಿಕ್ಷಕ ಹಾಗೂ ವಿಜ್ಞಾನಿಗಳಿಗೆ ಒಮ್ಮೆಲೇ ಪ್ರಾದೇಶಿಕ ಭಾಷೆಗಳಲ್ಲಿ ಗ್ರಂಥ ರಚನೆ ಮಾಡುವುದು ಸುಲಭ ಕಾರ್ಯವೇನಲ್ಲ. ಇಂಥದರಲ್ಲಿ ಈ ಕೆಲಸ ಪ್ರಾರಂಭವಾದ ಅಲ್ಪಾವಧಿಯಲ್ಲಿ ಅರ್ಧಶತ ಗ್ರಂಥಗಳು ಪ್ರಕಟಗೊಂಡು ಜನಪ್ರಿಯವಾದುದು ಅತ್ಯಂತ ಹೆಮ್ಮೆಯ ಸಾಧನೆ.

ಉಪಯುಕ್ತ ಸಂಶೋಧನಾಧಾರಿತ ಆಳ ಅಭ್ಯಾಸದ ಫಲವಾಗಿ ಸೃಷ್ಟಿಗೊಂಡ ಕೃಷಿ ವಿಜ್ಞಾನ ಗ್ರಂಥಗಳು ನಮ್ಮ ರಾಜ್ಯದ ಕೃಷಿ ವಿದ್ಯಾರ್ಥಿ ಹಾಗೂ ಕೃಷಿಕರಿಗೆ ಅಮೂಲ್ಯ ಕೊಡುಗೆಗಳಾಗುವುದರಲ್ಲಿ ಸಂದೇಹವಿಲ್ಲ. ಈ ಕಾರ್ಯ ಮಿಂಚಿನ! ವೇಗ ದಿಂದ ನಡೆಯಲೆಂದು ನಾನು ಹಾರೈಸುತ್ತೇನೆ.

ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು
ತಾ॥ 1-1-1977

ಹ. ರಾ. ಅರಕೇರಿ
ಕುಲಪತಿಗಳು

ಸಂಪಾದಕರ ಮಾತು

ಯುವಕರು ರಾಷ್ಟ್ರದ ದೊಡ್ಡ ಆಸ್ತಿ; ಬಹು ದೊಡ್ಡ ಶಕ್ತಿ; ಭಾರತ ವ್ಯವಸಾಯ ಪ್ರಾಧಾನ್ಯ ದೇಶ. ಇಂದು ನಾಡಿನ ವ್ಯವಸಾಯದಲ್ಲಿ ಭಾರೀ ಬದಲಾವಣೆ ಕಂಡು ಬರುತ್ತಿದೆ. ವ್ಯವಸಾಯದ ಸಂಶೋಧನೆಯಲ್ಲಿ ಒಂದು ಸ್ಫೋಟ ನಡೆದಿದೆಯೋ ಎನ್ನುವಷ್ಟರ ಮಟ್ಟಿಗೆ ಪ್ರಗತಿ ತಲೆದೋರಿದೆ. ಅದರ ಪ್ರಯೋಜನ ವ್ಯವಸಾಯಗಾರರೆಲ್ಲ ಪಡೆಯಬೇಕಾಗಿದೆ. ಅವರು ತರುಣರಿದ್ದಷ್ಟು ಬಹು ಬೇಗ ಈ ಬದಲಾವಣೆಗೆ ಅಂಟಿಕೊಳ್ಳುವರು. ಚಿಕ್ಕ ವಯಸ್ಸಿನಲ್ಲಿಯೇ ವ್ಯವಸಾಯಗಾರರಾಗುವ ಯುವಕ ರೈತರು ವೈಜ್ಞಾನಿಕ ವ್ಯವಸಾಯ ಪರಿಚಯ ಮಾಡಿಕೊಳ್ಳುವುದು ಅವಶ್ಯವಿದೆ. ನಾಳಿನ ನಾಗರಿಕರಾಗಲಿರುವ ಇಂದಿನ ಯುವಕರು ಶಿಸ್ತು, ಪ್ರಜಾಪ್ರಭುತ್ವ ಪದ್ಧತಿ ನಡವಳಿಕೆ, ಮುಂದಾಳುತನ ಹೊಂದಬೇಕಾಗಿದೆ. ಇವುಗಳನ್ನೆಲ್ಲ ಪಡೆಯುವ ಅವಕಾಶ ಯುವ ಸಂಘಟನೆಯಲ್ಲಿದೆ.

ಯುವಸಂಘಟನೆಯನ್ನು ಒಂದು ದಶಕ ಕಾಲ ಮುನ್ನಡೆಸಿ, ಸಂಘಟಕರಿಗೆ ಮಾರ್ಗದರ್ಶನಗೈದು ಅಪಾರ ಅನುಭವ ಪಡೆದ ಶ್ರೀ ಪಿ. ಹನುಮಪ್ಪ ಅವರು ಯುವಕ ರೈತರ ಸಂಘಟನೆಯ ಬಗೆಗಿನ ಈ ಗ್ರಂಥದಲ್ಲಿ ಗ್ರಾಮೀಣ ಯುವಕರು, ಅವರ ಮನೋಬಯಕೆ, ಸದ್ಯದ ಭಾರತದ ಯುವಕ ಸಂಸ್ಥೆಗಳು, ವಿದೇಶಗಳಲ್ಲಿನ ಯುವ ಸಂಸ್ಥೆಗಳು, ಅವುಗಳಿಂದ ನಾವು ಕಲಿಯತಕ್ಕ ಪಾಠ, ಗ್ರಾಮಗಳಲ್ಲಿ ಯುವಕ ಸಂಘ ಸ್ಥಾಪಿಸಿ, ಅವುಗಳ ಕಾರ್ಯಚಟುವಟಿಕೆ ಬೆಳೆಯಿಸಿಕೊಂಡು ಹೋಗುವ ಬಗೆ, ಅವುಗಳಿಗೆ ಉತ್ತೇಜನ ಹಾಗೂ ಮಾನ್ಯತೆ, ಸ್ಥಳೀಯ ಸಂಘ ಸಂಸ್ಥೆಗಳ ನೆರವು, ಮೌಲ್ಯಮಾಪನ ಮತ್ತು ನಮ್ಮ ರಾಜ್ಯದಲ್ಲಿ ಈ ದಿಶೆಯಲ್ಲಿ ಸರಕಾರದ ಯತ್ನ, ಈ ವಿಷಯವನ್ನು ಚರ್ಚಿಸಿದ್ದಾರೆ. ಕೃಷಿ ವಿಶ್ವವಿದ್ಯಾನಿಲಯದ ಕೃಷಿ ವಿಸ್ತರಣ ವಿದ್ಯಾರ್ಥಿಗಳೂ, ಗ್ರಾಮಸೇವಕ ಅಭ್ಯರ್ಥಿಗಳೂ, ಯುವಕ ರೈತ ಸಂಘಗಳೂ ಅವುಗಳ ಸಂಘಟನೆಯನ್ನು ಹೊತ್ತ

ಗ್ರಾಮಸೇವಕರು, ಸಮಾಜ ಶಿಕ್ಷಣ ಸಂಘಟಕರು ವಿಸ್ತರಣಾಧಿಕಾರಿಗಳು ಹಾಗೂ ಅಭಿವೃದ್ಧಿ ಅಧಿಕಾರಿಗಳೂ ಮತ್ತು ಇತರ ಗ್ರಾಮೀಣ ಯುವಸಂಘಟನೆಯಲ್ಲಿ ಆಸ್ಥೆ ವಹಿಸಿದ ಸಾರ್ವಜನಿಕರೂ ಈ ಪುಸ್ತಕದಿಂದ ತುಂಬ ಪ್ರಯೋಜನ ಪಡೆಯಬಹುದಾಗಿದೆ.

ಫಾಲ್ಗುಣ ಮಾಸ, ನಳನಾಮ ಸಂವತ್ಸರ
ಶಾಲಿವಾಹನ ಶಕೆ 1898
ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ವೀ. ಚ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು
ಹಾಗೂ
ಕನ್ನಡ ಅಭಿವೃದ್ಧಿ ಸಮಿತಿ
ಕಾರ್ಯದರ್ಶಿಗಳು

ಲೇಖಕರ ನುಡಿ

ಭಾರತದ ಜನಸಂಖ್ಯೆಯಲ್ಲಿ ಬಹುತೇಕ ಭಾಗ ಜನರು ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ಈ ಹಳ್ಳಿಗಳಲ್ಲಿರುವ ಜನಸಂಖ್ಯೆಯ ಮುಖ್ಯವಾದ ಭಾಗ, ಗ್ರಾಮೀಣ ಯುವಕರು ಹಾಗೂ ಯುವತಿಯರು. ಇವರಲ್ಲಿ ಬಹುಭಾಗ ಭಾವೀ ರೈತರು ಹಾಗೂ ಮಹಿಳೆಯರಾಗುತ್ತಾರೆ. ಈ ವರ್ಗದ ಯುವಕರನ್ನು ವ್ಯವಸ್ಥಿತ ರೀತಿಯಲ್ಲಿ ಸಂಘಟಿಸಲು ಹಲವಾರು ಕಾರ್ಯಕ್ರಮಗಳು ಬಳಕೆಯಲ್ಲಿವೆ. ಅವುಗಳಲ್ಲಿ ಮುಖ್ಯವಾದದ್ದು ಸಮಾಜ ಅಭಿವೃದ್ಧಿ ಕಾರ್ಯಕ್ರಮ. ಈ ಕಾರ್ಯಕ್ರಮದ ಪ್ರಕಾರ 1952ನೇ ಇಸವಿಯಿಂದ ಗ್ರಾಮೀಣ ಯುವಕರ ಸಂಘಟನೆ ನಡೆದಿದೆ. ಆದರೆ ಈ ದಿಶೆಯಲ್ಲಿ ಬಯಸಿದ ಪ್ರಗತಿ ಕಾಣಬರುತ್ತಿಲ್ಲ.

ವಿದೇಶಗಳಲ್ಲಿ ಆದರಲ್ಲೂ ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಕಳೆದ 75 ವರ್ಷಗಳಿಂದ ಗ್ರಾಮೀಣ ಯುವಕರನ್ನು ಸಂಘಟಿಸಿ, ತರಬೇತಿ ನೀಡಿ ಮಾರ್ಗದರ್ಶನ ಮಾಡುವ ಕಾರ್ಯ ಯಶಸ್ವಿಯಾಗಿ ಸಾಗಿಬಂದಿದೆ. ಇತರ ಹಲವಾರು ದೇಶಗಳಲ್ಲಿಯೂ ಈ ಕಾರ್ಯಕ್ರಮ ಯಶಸ್ವಿಯಾಗಿರುವ ನಿದರ್ಶನಗಳಿವೆ. ಇಂತಹ ಕಾರ್ಯಕ್ರಮವನ್ನು ಭಾರತವೇಕೆ ಯಶಸ್ವಿಯಾಗಿ ನಡೆಸಬಾರದು ಎಂಬುದೇ ನನ್ನ ಪ್ರಶ್ನೆ. ಪ್ರತ್ಯಕ್ಷವಾಗಿಯೂ ಹಾಗೂ ಪರೋಕ್ಷವಾಗಿಯೂ ಯುವಕ ರೈತರ ಕಾರ್ಯಕ್ರಮಗಳಲ್ಲಿ 1952 ರಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಕೆಲಸಮಾಡಿದ್ದೇನೆ. 1961–62 ನೇ ಸಾಲಿನಲ್ಲಿ ಅಮೆರಿಕಾದಲ್ಲಿನ ಈ ಯುವಕ ರೈತ ಕಾರ್ಯಕ್ರಮಗಳ ಅಧ್ಯಯನ ಮಾಡುವ ಅವಕಾಶವೂ ದೊರೆತಿತ್ತು. ಈ ಎರಡು ಅನುಭವಗಳನ್ನು ಸೇರಿಸಿ ಈ ಕಿರುಹೊತ್ತಗೆಯನ್ನು ಬರೆದಿದ್ದೇನೆ.

ಈ ಕಿರುಹೊತ್ತಗೆಯನ್ನು ಬರೆಯಲು ಬಹಳ ಹಿಂದಿನಿಂದಲೂ ಪ್ರೇರೇಪಿಸಿ ಸ್ಫೂರ್ತಿ ತುಂಬಿದವರು ಪ್ರಾರಂಭದಿಂದಲೂ ಕೃಷಿ ವಿಶ್ವವಿದ್ಯಾನಿಲಯದ ವಿಸ್ತರಣ ವಿಭಾಗದ ಮುಖ್ಯಸ್ಥರಾಗಿದ್ದು ಇಂದು ಕರ್ನಾಟಕ ರಾಜ್ಯದ ಕೃಷಿ ಇಲಾಖೆಯ ನಿರ್ದೇಶಕರಾಗಿರುವ ಡಾ॥ ಆರ್. ದ್ವಾರಕೀನಾಥ್ ಅವರು. ಅವರಿಗೆ ನಾನು ಚಿರಋಣಿ. ಇದನ್ನು ಕೂಲಂಕುಶವಾಗಿ ಪರಿಶೀಲಿಸಿ ಸೂಕ್ತ ಸಲಹೆಗಳನ್ನು ನೀಡಿದವರು ನನ್ನ ಮಿತ್ರರಾದ ಪ್ರಾ॥ ಜಡೆ ಶ್ರೀನಿವಾಸಮೂರ್ತಿ ಮತ್ತು ಪ್ರಾ॥ ವೀ.ಸಿ. ಹಿತ್ತಲಮನಿ ಅವರು.

ಅವರಿಗೆ ನನ್ನ ಅಭಿನಂದನೆಗಳು. ಇದನ್ನು ಕನ್ನಡದಲ್ಲಿ ಬರೆಯಲು ನನ್ನ ಜೊತೆಯಲ್ಲಿ ಶ್ರಮಿಸಿದ ಆಪ್ತ ಮಿತ್ರರಾದ ನಮ್ಮ ಊರಿನ ಎಸ್. ಡಿ. ಚಂದ್ರಯ್ಯನವರಿಗೆ ನಾನು ಆಭಾರಿಯಾಗಿದ್ದೇನೆ.

ವಿಸ್ತರಣ ವಿಭಾಗ,
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು–24
ದಿನಾಂಕ 1–3–1977

ಪಿ. ಹನುಮಪ್ಪ

ಪರಿವಿಡಿ

ಭಾರತೀಯ ಗ್ರಾಮೀಣ ಯುವಕ ರೈತ ಸಂಘಗಳ ಸಂಘಟನೆ

1. ಭಾರತದ ಗ್ರಾಮೀಣ ಯುವಕರು

ಭಾರತವು ಹಳ್ಳಿಗಳ ನಾಡು ; ವ್ಯವಸಾಯುವೇ ಪ್ರಧಾನವಾದ ದೇಶ. ಶೇ. 82 ರಷ್ಟು ಜನರು ಹಳ್ಳಿಗಳಲ್ಲಿ ವಾಸಮಾಡುತ್ತಾರೆ. ವ್ಯವಸಾಯ, ಪಶುಪಾಲನೆ ಮತ್ತು ಸ್ವಲ್ಪಮಟ್ಟಿಗೆ ಗೃಹ ಕೈಗಾರಿಕೆಗಳು ಹಳ್ಳಿಗರ ಉದ್ಯೋಗಗಳು. ಈ ಅಪಾರ ಪ್ರಜಾಸಂಖ್ಯೆಯಲ್ಲಿ ಮಹತ್ವಾಕಾಂಕ್ಷಿಗಳಾದ ಉತ್ಸಾಹಪೂರಿತ ಯುವಕರ ಸಂಖ್ಯೆ ಗಣನೀಯವಾಗಿದೆ: ಅದು ಒಂದು ಕಾಲುಭಾಗವೆಂದು ಅಂದಾಜುಮಾಡಲಾಗಿದೆ. ಇಂದಿನ ಈ ಗ್ರಾಮೀಣ ಯುವಕರೇ ನಾಳಿನ ರೈತರಾಗುತ್ತಾರೆ; ಗಣ್ಯ ನಾಗರಿಕರಾಗುತ್ತಾರೆ. ವಿಶಾಲ ರಾಷ್ಟ್ರದ ಭದ್ರತೆ, ಸಂಪತ್ತು, ಸುಖ ಅವರನ್ನೇ ಅವಲಂಬಿಸಿದೆ. ಈ ಅಪಾರ ಸಂಖ್ಯೆಯಲ್ಲಿರುವ ಗ್ರಾಮೀಣ ಯುವಕರು ಸಂಘಟಿತರಾಗಿಲ್ಲ. ಅವರಿಗೆ ಮಾರ್ಗದರ್ಶನ ಕೊಡುವ ಯಾವ ಪರಿಣಾಮಕಾರಿ ವ್ಯವಸ್ಥೆಯೂ ಇಂದು ನಮ್ಮಲ್ಲಿಲ್ಲ.

ಇಂದಿನ ನಮ್ಮ ಹಳ್ಳಿಗಳ ಸ್ಥಿತಿ ಹಾಗೂ ಅಲ್ಲಿಯ ಯುವಕರ ಬಗೆಗೆ ಕೆಳಗಿನ ಕೆಲವು ಮಾತುಗಳನ್ನು ಹೇಳಬಹುದು :

(1) ಎಕರೆವಾರು ಮತ್ತು ಪ್ರತಿ ರೈತನ ವ್ಯವಸಾಯ ಉತ್ಪಾದನೆಗಳು ಬಹಳ ಕಡಮೆ ಮಟ್ಟದಲ್ಲಿವೆ.

(2) ಅಭಿವೃದ್ಧಿಹೊಂದಿರುವ ದೇಶಗಳೊಡನೆ ಹೋಲಿಸುವುದಾದರೆ ಗ್ರಾಮೀಣ ಆರ್ಥಿಕ, ಆರೋಗ್ಯ ಮತ್ತು ವಿದ್ಯಾಭ್ಯಾಸಗಳ ಮಟ್ಟಗಳು ತೀರ ಕೆಳಮಟ್ಟದಲ್ಲಿವೆ.

(3) ಗ್ರಾಮೀಣ ಯುವಕರು ಈಗಲೂ ಪುರಾತನ ಕಂದಾಚಾರ ಮಾರ್ಗಗಳನ್ನೇ ಅವಲಂಬಿಸಿದ್ದಾರೆ.

(4) ಗ್ರಾಮೀಣ ಯುವಕರ ಶಕ್ತಿಯನ್ನು ಆರ್ಥಿಕ ವ್ಯವಸಾಯೋತ್ಪನ್ನದ ಕಡೆಗೆ ಸೆಳೆಯಲಾದ ಯಾವ ಕಾರ್ಯಕ್ರಮಗಳೂ ಗ್ರಾಮಗಳಲ್ಲಿ ಇಲ್ಲ.

(5) ಸಮಾಜಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಎಲ್ಲ ಗ್ರಾಮೀಣ ಯುವಕರನ್ನು ಇಂದು ಅಳವಡಿಸಿಕೊಂಡಿಲ್ಲ.

(6) ಸದ್ಯ ಇರುವ ಭಾರತ ಬಾಲ ಚಮೂದಳ, ಭಾರತ ಸೇವಕ ಸಮಾಜ, ಭಾರತ ಸೇವಾದಳ, ಎನ್.ಸಿ.ಸಿ., ಎ.ಸಿ.ಸಿ., ವೈ.ಎಂ.ಸಿ.ಎ. ಇತ್ಯಾದಿ ಸಂಸ್ಥೆಗಳು ಗ್ರಾಮೀಣ ಯುವಕರ ಸಂಪರ್ಕ ಪಡೆದಿಲ್ಲ.

(7) ಯುವಕ ರೈತರಿಗೆ ಸುಧಾರಿತ ವ್ಯವಸಾಯ ಮತ್ತು ಗ್ರಾಮೋದ್ಯೋಗ ವಿಧಾನಗಳ ತರಬೇತಿ ಅಷ್ಟಾಗಿ ಇರುವುದಿಲ್ಲ.

(8) ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳ ಬೆಳವಣಿಗೆಗೆ ಸಂಘಟನೆ ಪರಿಣಾಮಕಾರಿ ಎಂಬುದು ಗ್ರಾಮೀಣ ಯುವಕರಿಗೆ ಅಷ್ಟಾಗಿ ತಿಳಿದಿಲ್ಲ.

(9) ಗ್ರಾಮೀಣ ಯುವಕರಲ್ಲಿ ಮುಂದಾಳುತನಕ್ಕೆ ಬೇಕಾದ ಗುಣಗಳನ್ನು ಬೆಳೆಸಿಕೊಳ್ಳಲು ಅವಕಾಶಗಳ ಕೊರತೆ ಇದೆ.

(10) ಅಲ್ಪ ವಿದ್ಯಾವಂತ ಗ್ರಾಮೀಣ ಯುವಕರಲ್ಲಿ ಕರ್ತವ್ಯನಿಷ್ಠತೆ ಇಲ್ಲ ಮತ್ತು ದೈಹಿಕ ದುಡಿಮೆಯ ಬಗೆಗೆ ಅವರಿಗೆ ಅಗೌರವವಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಮೇಲೆ ಹೇಳಿರುವ ಪರಿಸ್ಥಿತಿಗಳನ್ನು ಸುಧಾರಿಸುವ ಯುವಕರ ಸಂಘಟನೆ ಅವಶ್ಯವಿದೆ. ಪ್ರಸಕ್ತ ವಾತಾವರಣಗಳು ಉತ್ತಮವಾಗಬೇಕು. ಈ ಸುಧಾರಣೆಗೆ ಯುವಕರು ಭಾಗಿಯಾಗಬೇಕು. ಹಳೆ ಪೀಳಿಗೆ ಮತ್ತು ನವಪೀಳಿಗೆಗಳ ಮನೋಭಾವ ಮತ್ತು ಕುಶಲತೆಗಳನ್ನು ಬದಲಾಯಿಸಬೇಕಾದರೆ ಗ್ರಾಮೀಣ ಯುವಕರು ಅತ್ಯಾವಶ್ಯಕವಾಗಿ ಮತ್ತು ಪರಿಣಾಮಕಾರಿಯಾಗಿ ಸಂಘಟಿತರಾಗಬೇಕು. ಅಮೆರಿಕ ಸಂಯುಕ್ತ ಸಂಸ್ಥಾನಗಳು, ಜಪಾನ್. ಫಿಲಿಪೈನ್ಸ್, ಡೆನ್‌ಮಾರ್ಕ್ ಮೊದಲಾದ ದೇಶಗಳಲ್ಲಿ ಯುವಕರಿಗೆ ಉತ್ತಮ ತರಬೇತಿ ಮತ್ತು ಮಾರ್ಗದರ್ಶನಗಳು ದೊರೆಯುತ್ತವೆ. ಪರಿಣಾಮವಾಗಿ ಆ ದೇಶಗಳಲ್ಲಿ ಹೆಚ್ಚು ಫಲಪ್ರದಕಾರ್ಯ ಕೈಗೂಡಿಬರುತ್ತವೆ. ವ್ಯವಸಾಯೋತ್ಪನ್ನ ಅಧಿಕಪಡಿಸುವಂತಹ ಸುಧೀರ್ಘವಾದ ಗ್ರಾಮೀಣ ಯುವಕರ ತರಬೇತಿ ಕಾರ್ಯಕ್ರಮದ ನೀತಿಯೊಂದು ನಮ್ಮ ದೇಶದಲ್ಲಿ ಇರುವುದು ಅವಶ್ಯಕ. ಈ ದಿಶೆಯಲ್ಲಿ ಗ್ರಾಮೀಣ ಯುವಕರ ತರಬೇತಿ ಹಾಗೂ ಮಾರ್ಗದರ್ಶನ ಮಾಡಲು ಪರಿಣಾಮಕಾರಿ ಗ್ರಾಮೀಣ ಯುವಕ ಸಂಸ್ಥೆಗಳ ಸ್ಥಾಪನೆ ಅತ್ಯಾವಶ್ಯಕವಾಗಿದೆ.

ಭಾರತದಲ್ಲಿ ಇಂದು ಅತ್ಯಲ್ಪ ಸಂಖ್ಯೆಯಲ್ಲಿರುವ ಗ್ರಾಮೀಣ ಯುವಕ ಸಂಸ್ಥೆಗಳು 'ಯುವಕ ರೈತರ ಸಂಘ', 'ಯುವಕ ಮಂಡಳಿ', 'ನಾರಿ ಮಂಡಳಿ' ಮುಂತಾದ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತವೆ. ಇವು ಭಾರತ ಯುವಕ ರೈತ ಸಮಾಜ ಮತ್ತು ಅದರ ರಾಜ್ಯ ಶಾಖೆ ಹಾಗೂ ಕ್ಷೇತ್ರಾಭಿವೃದ್ಧಿ ಯೋಜನೆಗಳ ಆಡಳಿತಾಶ್ರಯದಲ್ಲಿ ಬೆಳೆಯುತ್ತಿರುತ್ತವೆ.

2. ಗ್ರಾಮೀಣ ಯುವಕ ಸಂಸ್ಥೆಗಳು ಹಾಗೂ ವ್ಯವಸಾಯಾಭಿವೃದ್ಧಿ

ಇಂದಿನ ಯುವಕರೇ ಮುಂದಿನ ಭಾರತದ ಪ್ರಗತಿಪರ ರೈತರು.

ದೇಶದ ವ್ಯವಸಾಯಾಭಿವೃದ್ಧಿ ಗ್ರಾಮಾಂತರದ ಯುವಕ ರೈತರನ್ನು ಹೆಚ್ಚಾಗಿ ಅವಲಂಬಿಸಿದೆ. ಗ್ರಾಮೀಣ ಏಳಿಗೆ ಆಗಬೇಕಾದಲ್ಲಿ ಯುವಕ ರೈತರು ಉತ್ತಮ ಪೌರರಾಗಿ ಪ್ರಗತಿಪರ ವ್ಯಕ್ತಿತ್ವ ಬೆಳೆಯಿಸಿಕೊಂಡು ಸಂಘಟಿತರಾಗಿ ಕಾರ್ಯಪ್ರವೃತ್ತರಾಗಬೇಕು. ಮುಂದಿನ ಜನಾಂಗದ ಭವ್ಯ ಭವಿಷ್ಯವನ್ನು ರೂಪಿಸಲು, ಅಭಿವೃದ್ಧಿ ಅರಿವನ್ನು ಜನರಲ್ಲಿ ಬೇರೂರಿಸುವ ಪೂರ್ಣ ಜವಾಬ್ದಾರಿಯು ಯುವಕರದಾಗಿರುತ್ತದೆ. ಗ್ರಾಮೀಣ ಜನಜೀವನವನ್ನು ಉತ್ತಮಪಡಿಸುವುದಲ್ಲದೆ ತಮ್ಮ ಪ್ರಗತಿಯನ್ನೂ ಯುವಕರು ಸಾಧಿಸಬೇಕಾಗಿದೆ.

ಭಾರತದಲ್ಲಿ ಗ್ರಾಮೀಣ ಯುವಕರ ಕಾರ್ಯಕ್ರಮಗಳು ಬಾಲ್ಯಾವಸ್ಥೆಯಲ್ಲಿವೆ. ರಾಷ್ಟ್ರಾಭಿವೃದ್ಧಿ ಅದರಲ್ಲೂ ವ್ಯವಸಾಯೋತ್ಪನ್ನ ಅಧಿಕಗೊಳಿಸಲು ಯುವಕರ ಪಾತ್ರದ ಮಹತ್ವವನ್ನರಿತು, ಕೇಂದ್ರ ಮತ್ತು ರಾಜ್ಯಸರಕಾರಗಳು ಗ್ರಾಮಗಳಲ್ಲಿ ಯುವಕ ರೈತ ಸಂಘಗಳ ಬೆಳವಣಿಗೆಗೆ ಸಾಕಷ್ಟು ಪ್ರೋತ್ಸಾಹ ಕೊಡುತ್ತಿದ್ದಾರೆ. ಈ ಯುವಕರು ಬಡತನದ ವಿರುದ್ಧ ಹೋರಾಡಬೇಕಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಸುವ್ಯವಸ್ಥಿತ ಗ್ರಾಮೀಣ ಯುವಕ ಸಂಸ್ಥೆ ಇಲ್ಲದೆ ಹೋದಲ್ಲಿ ಯುವಕರಸಾಧನೆಗೆ ಚೇತನ ಬರಲಾರದು. ಅವರು ಒಂದಾಗಿ, ಸರಿಯಾದ ಮಾರ್ಗದಲ್ಲಿ ಮುನ್ನಡೆದು, ಗ್ರಾಮೀಣ ಅಭಿವೃದ್ಧಿ ಕಾರ್ಯದಲ್ಲಿ ಮಹತ್ತರ ಪಾತ್ರ ವಹಿಸುವಂತೆ ಮಾಡಬೇಕಾಗುವುದಕ್ಕೆ ಅವರವೇ ಆದ ಸಂಘಟನೆ ಇರುವುದು ಅವಶ್ಯವಿದೆ.

ಭಾರತ, ಪ್ರಪಂಚದಲ್ಲಿ ಅಭಿವೃದ್ಧಿಯಾಗುತ್ತಿರುವ ದೇಶಗಳಲ್ಲಿ ಒಂದು. ಇಲ್ಲಿನ ಗ್ರಾಮೀಣ ಜನಾಂಗದ ಜೀವನದಲ್ಲಿ ಮಹತ್ತರ ಬದಲಾವಣೆ ಆಗಬೇಕಾಗಿದೆ. ಈ ಬದಲಾವಣೆ ಮುಖ್ಯವಾಗಿ ಕೆಳಗಿನ ಐದು ಅಂಶಗಳಲ್ಲಿ ನಡೆಯಬೇಕಾಗಿದೆ :

(1) ಹೊಲ - ಉತ್ಪಾದನೆ ಪ್ರಮುಖ ಘಟಕವಾಗಿ ಬೆಳೆಯಬೇಕು.


(2) ಮನೆ–ವಿಶ್ರಾಂತಿ ಮತ್ತು ಕುಟುಂಬ ಚಟುವಟಿಕೆಯ ಕೇಂದ್ರವಾಗಬೇಕು.

(3) ಸೇವಾಸಂಸ್ಥೆಗಳು – ವ್ಯವಸಾಯ ಮತ್ತು ಕುಟುಂಬ ಅವಶ್ಯಕತೆಗಳನ್ನು ಪೂರೈಸುವ ಸಾಧನಗಳಾಗಬೇಕು.

(4) ಸಮಾಜ – ಆರ್ಥಿಕ ಹಾಗೂ ಸಾಮಾಜಿಕ ಸೇವಾ ಚಟುವಟಿಕೆಯ ಆಗರ ವಾಗಬೇಕು.

(5) ವ್ಯಕ್ತಿ – ಸರ್ವತೋಮುಖ ಅಭಿವೃದ್ಧಿ ಮತ್ತು ದುಡಿಮೆಗೆ ತಕ್ಕ ಪ್ರತಿ ಫಲ ಪಡೆಯುವ ಉದ್ದೇಶ ಹೊಂದಬೇಕು.

ಇದನ್ನೇ ಅಮೆರಿಕೆಯ ಕಾರ್ನೆಲ್ ವಿಶ್ವವಿದ್ಯಾನಿಲಯದ ಡಾ। ಪಾಲ್ ಜೆ. ಲೀಗನ್‌ರು ಈ ಕೆಳಗಿನಂತೆ ನಕ್ಷಾರೂಪದಲ್ಲಿ ವಿವರಿಸಿದ್ದಾರೆ :



ರೇಖಾನಕ್ಷೆಯಲ್ಲಿ, ಮೇಲ್ಭಾಗದಲ್ಲಿ ಸುಧಾರಣೆಯ ಘಟಕಗಳಿವೆ. ಈ ಮೂಲಾಧಾರಗಳು ಒಂದಕ್ಕೊಂದು ಪರಸ್ಪರ ಸಂಬಂಧವಾಗಿರುವುದನ್ನು ಬಾಣಗಳಿಂದ ತೋರಿಸಲಾಗಿದೆ. ಅವುಗಳ ಕೆಳಗೆ ಸುಧಾರಣೆಯಾಗಬೇಕಾದ ಅಂಶಗಳಿವೆ. ಕೆಳಗಡೆಯಲ್ಲಿ ಅಭಿವೃದ್ಧಿ ಸಾಧಕರ ವಿವರಗಳಿವೆ.

ಗ್ರಾಮೀಣ ವ್ಯಕ್ತಿ ಅಂದರೆ ರೈತ. 'ರೈತ' ಗುಂಪಿನಲ್ಲಿ ರೈತನ ಹೆಂಡತಿ ಮತ್ತು ರೈತ ಮಕ್ಕಳು ಇವರೆಲ್ಲರೂ ಸೇರುತ್ತಾರೆ. ರೈತರ ಮನೋಭಾವದಲ್ಲಿ ಮೊದಲಿಗೆ ಬದಲಾವಣೆಯಾದರೆ, ಭೂಮಿ, ಮನೆ ಮತ್ತು ಸೇವಾ ಸಂಸ್ಥೆಗಳಲ್ಲಿ ಅದೇ ಬದಲಾವಣೆಯನ್ನು ಕಾಣಬಹುದು. ಅಂತೆಯೇ ವ್ಯಕ್ತಿಯ ಮನೋಭಾವನೆ ಬದಲಾವಣೆ ಎಲ್ಲದಕ್ಕಿಂತ ಮೊದಲಾಗಬೇಕಾದುದು ಅತಿ ಮುಖ್ಯ.

3. ಭಾರತದ ಯುವಕ ಸಂಘಗಳು

ಭಾರತದ ಗ್ರಾಮೀಣ ಯುವಕರಲ್ಲಿ ವ್ಯವಸ್ಥಿತ ಸಂಘಟನೆ ಕಡಮೆ. ಕೆಲವೇ ಸಂಸ್ಥೆಗಳು ಯುವಕರ ಸಂಘಟನೆಯಲ್ಲಿ ತೊಡಗಿವೆ. ಅವುಗಳ ವಿವರ ಕೆಳಗೆ ಕೊಡಲಾಗಿದೆ.

1. ಭಾರತ ಯುವಕರೈತ ಸಮಾಜ

ಭಾರತದ ಗ್ರಾಮೀಣ ಯುವಕರನ್ನು ಸಂಘಟಿಸಲು ವ್ಯವಸಾಯದ ಇಲಾಖೆ ಹಾಗೂ ರಾಷ್ಟ್ರೀಯ ವಿಸ್ತರಣ ಯೋಜನೆಗಳ ಪ್ರಯತ್ನಗಳಿಂದ 1952ರಿಂದೀಚೆಗೆ ಕೆಲ ಕಾರ್ಯ ನಡೆದಿರುತ್ತದೆ. ಭಾರತ ಕೃಷಿಕ ಸಮಾಜವು 1955 ರಲ್ಲಿ ನಡೆದ ರೈತರ ಅಧಿವೇಶನದಲ್ಲಿ ಅಂತರರಾಷ್ಟ್ರೀಯ ಯುವಕ ವಿನಿಮಯದ ಸೇವೆಯನ್ನು ಸದುಪಯೋಗ ಪಡಿಸಿಕೊಳ್ಳಲು ಒಂದು ಸಂಸ್ಥೆ ಅಗತ್ಯವೆಂದು ತೀರ್ಮಾನಿಸಿ 'ಭಾರತ ಯುವಕ ರೈತ ಸಮಾಜ' ಎಂಬ ಅಂಗಸಂಸ್ಥೆಯನ್ನು ಪ್ರಾರಂಭಿಸಿತು. ಅದರ ಉದ್ದೇಶ, ಚಟುವಟಿಕೆ ಹಾಗೂ ಸದಸ್ಯತ್ವ ಕೆಳಗಿನಂತಿವೆ:

ಉದ್ದೇಶಗಳು

(1) ಸಮಾಜ ಜೀವನ ಮತ್ತು ವ್ಯವಸಾಯ ಸುಧಾರಣೆಗಳಿಗೆ ಗ್ರಾಮೀಣ ಯುವಕರ ಸೃಜನಾತ್ಮಕ ಶಕ್ತಿಗಳನ್ನು ಸಮನ್ವಯಗೊಳಿಸಿ ಉಪಯೋಗ ಮಾಡಿಕೊಳ್ಳುವುದು.

(2) ಮುಂದಾಳತ್ವ, ಹಿತಕರ ಸ್ಪರ್ಧೆ, ಸಹಕಾರ ಮನೋಭಾವನೆ ಮತ್ತು ಮನರಂಜನೆಗಳು ಯುವಕರಲ್ಲಿ ಮೂಡಿಬರಬೇಕು. ಈ ಸಾಧನೆಗಾಗಿ ವ್ಯವಸಾಯ ಸುಧಾರಣೆ ಮತ್ತು ಗೃಹನಿರ್ವಹಣಾ ನಿರ್ದಿಷ್ಟ ಕಾರ್ಯಕ್ರಮಗಳ ಮೂಲಕ ಗ್ರಾಮೀಣ ಬಾಲಕ ಮತ್ತು ಬಾಲಕಿಯರಿಗೆ ಸ್ಥಳೀಯ ಸಂಘಗಳನ್ನು ರಚಿಸಿ ನೆರವು ನೀಡುವುದು.

(3) ಯುವಕರೈತರ ಮತ್ತು ಗೃಹ ನಿರ್ವಹಣೆಗಾರರ ವಿನಿಮಯಗಳ ಮೂಲಕ ಅಂತರರಾಷ್ಟ್ರೀಯ ಪ್ರಜ್ಞೆ ಮೂಡಿಸಿ ಪ್ರೋತ್ಸಾಹಿಸುವುದು.

ಚಟುವಟಿಕೆಗಳು

(1) ನಿರ್ದಿಷ್ಟ ಯೋಜನೆಗಳ ಮೂಲಕ ಮತ್ತು ಬಾಲಕಿಯರಿಗಾಗಿ ಸ್ಥಳೀಯ ಸಂಘಗಳನ್ನು ರಚಿಸುವುದು.

(2) ಸಂಘದ ರಾಜ್ಯ ಶಾಖೆಗಳನ್ನು ರಚಿಸಿ ಸ್ಥಾಪಿಸುವುದು.

(3) **ದಿಲ್ಲಿಯಲ್ಲಿ ಯುವಕ** ರೈತರ ಮೇಳವನ್ನು ವರ್ಷಕ್ಕೊಮ್ಮೆ ಏರ್ಪಡಿಸುವುದು.

ಸದಸ್ಯತ್ವ

ಸಂಸ್ಥೆಯ ಉದ್ದೇಶ ಮತ್ತು ಕಾರ್ಯಕ್ರಮಗಳಲ್ಲಿ ಆಸಕ್ತಿಯುಳ್ಳ ಯಾವ **ವ್ಯಕ್ತಿ** ಯಾದರೂ ಸದಸ್ಯರಾಗಲು ಅರ್ಹರು. ಸದಸ್ಯರಲ್ಲಿ ಐದು ವರ್ಗಗಳಿರುತ್ತವೆ:

(1) ಸಕ್ರಿಯ ಸದಸ್ಯರು
(2) ಸಕ್ರಿಯ ಸಹಸದಸ್ಯರು
(3) ಆಜೀವ ಸದಸ್ಯರು
(4) ದಾನಿಗಳು, ಪೋಷಕರು, ಸಹಾನುಭೂತಿಗಳು, ಪ್ರಧಾನ ಪೋಷಕರು
(5) ಗೌರವ ಸದಸ್ಯರು

(1) **ಸಕ್ರಿಯ ಸದಸ್ಯರು :** ಸಂಘದ ಕಾರ್ಯನಿರ್ವಹಣೆಯಲ್ಲಿ ಭಾಗವಹಿಸಲು ಇಚ್ಛೆಯುಳ್ಳ ಹತ್ತರಿಂದ ಮೂವತ್ತೈದು ವರ್ಷಗಳ ವಯೋಮಿತಿಯೊಳಗಿನವರು ಯಾರು ಬೇಕಾದರೂ ಸಕ್ರಿಯ ಸದಸ್ಯರಾಗಬಹುದು. ಸಕ್ರಿಯ ಸದಸ್ಯರು ವಾರ್ಷಿಕ ಚಂದಾ ಒಂದು ರೂಪಾಯಿ ಸಲ್ಲಿಸಬೇಕು.

(2) **ಸಕ್ರಿಯ ಸಹಸದಸ್ಯರು :** ಮೂವತ್ತೈದು ವರ್ಷಗಳಿಗೆ ಮೇಲ್ಪಟ್ಟ ಯಾವ ವ್ಯಕ್ತಿಯಾದರೂ ಸಂಘದ ಕಾರ್ಯ ನಿರ್ವಹಣೆ ಮತ್ತು ಚಟುವಟಿಕೆಗಳಲ್ಲಿ ಆಸಕ್ತಿಯಿದ್ದರೆ ಸಂಘದ ಸಕ್ರಿಯ ಸಹಸದಸ್ಯರಾಗಬಹುದು. ಸಕ್ರಿಯ ಸಹಸದಸ್ಯರು ಒಂದು ರೂಪಾಯಿ ವಾರ್ಷಿಕ ಚಂದಾ ಸಲ್ಲಿಸಬೇಕು.

(3) **ಆಜೀವ ಸದಸ್ಯರು :** ಇಪ್ಪತ್ತೈದು ರೂಪಾಯಿ ಪಾವತಿ ಮಾಡುವವರು ಆಜೀವ ಸದಸ್ಯ ಅಥವಾ ಸಕ್ರಿಯ ಸಹಸದಸ್ಯರಾಗಬಹುದು.

(4) **ದಾನಿಗಳು :** (ಅ) ಮತ್ತು (ಆ) ನೂರು ರೂಪಾಯಿ ಅಥವಾ ಹೆಚ್ಚಿಗೆ ಪಾವತಿ ಮಾಡುವ ಯಾವ ಒಬ್ಬ ವ್ಯಕ್ತಿ ಅಥವಾ ಸಂಸ್ಥೆಗಳು ದಾನಿಗಳು.

(ಇ) ಒಂದು ಸಾವಿರ ರೂಪಾಯಿ ಅಥವಾ ಹೆಚ್ಚಿಗೆ ಕೊಡುವ ವ್ಯಕ್ತಿ ಅಥವಾ ಸಂಸ್ಥೆ ಪೋಷಕರು.

(ಈ) ಐದು ಸಾವಿರ ರೂಪಾಯಿ ಅಥವಾ ಹೆಚ್ಚಿಗೆ ಕೊಡುವ ವ್ಯಕ್ತಿ ಅಥವಾ ಸಂಸ್ಥೆಗಳು ಪ್ರಧಾನ ಪೋಷಕರು.

(5) **ಗೌರವ ಸದಸ್ಯರು :** ಯುವಕ ರೈತರ ಶ್ರೇಯೋಭಿವೃದ್ಧಿಗಾಗಿ ಮಹತ್ತರ ಸೇವೆ ಸಲ್ಲಿಸುವ ಯಾವ ವ್ಯಕ್ತಿಯನ್ನಾದರೂ ಕೇಂದ್ರ ಕಾರ್ಯಕಾರಿ ಸಮಿತಿಗೆ ಗೌರವ ಸದಸ್ಯರನ್ನಾಗಿ ಚುನಾಯಿಸಿಕೊಳ್ಳಬಹುದು.

2. ಕರ್ನಾಟಕ ರಾಜ್ಯದ ಯುವಕ ಸಮಾಜ

ಭಾರತದ ಯುವಕ ರೈತ ಸಮಾಜದ ರಾಜ್ಯ ಶಾಖೆಯು 1957 ನೇ ಜನವರಿ 31ರಲ್ಲಿ, ಮಾಜಿ ವ್ಯವಸಾಯ ಸಚಿವ ಶ್ರೀ ಎಚ್. ಎಸ್. ರುದ್ರಪ್ಪನವರ ಅಧ್ಯಕ್ಷತೆಯಲ್ಲಿ ರೂಪತಾಳಿತು. ಇದರ ಉದ್ದೇಶ ಹಾಗೂ ಚಟುವಟಿಕೆಗಳು ಭಾರತ ಯುವಕ ಸಮಾಜದವುಗಳೇ ಆಗಿವೆ.

3. ಭಾರತದಲ್ಲಿರುವ ವ್ಯವಸಾಯೇತರ ಯುವಕಸಂಘಗಳು

ಭಾರತದಲ್ಲಿ ಪ್ರಮುಖವಾಗಿ ಕೆಳಗಿನ ಐದು ವ್ಯವಸಾಯೇತರ ಯುವಕ ಸಂಘಗಳು ಕಾರ್ಯಮಾಡುತ್ತಿವೆ :

(1) ಭಾರತ ಸೇವಕ ಸಮಾಜ
(2) ಭಾರತ ಸೇವಾದಳ
(3) ಭಾರತ ಬಾಲಚಮೂದಳ
(4) ಎನ್.ಸಿ.ಸಿ. ಮತ್ತು ಎ.ಸಿ.ಸಿ.
(5) ಕ್ರೈಸ್ತ ಯುವಕ ಮಂಡಳಿ

(1) ಭಾರತ ಸೇವಕ ಸಮಾಜ

ಇದು ಖಾಸಗಿ ಸಂಸ್ಥೆ. ಇದು ಭಾರತ ಸರ್ಕಾರದ ನೆರವಿನಿಂದ ಕೆಲಸ ಮಾಡುತ್ತಿದೆ. ಇದಕ್ಕೆ ಭಾರತದ ಪ್ರಧಾನ ಮಂತ್ರಿಗಳೇ ಅಧ್ಯಕ್ಷರು. ಇದರ ಉದ್ದೇಶ ಹಾಗೂ ಕಾರ್ಯ ಚಟುವಟಿಕೆಗಳು ಕೆಳಕಂಡಂತಿವೆ :

ಉದ್ದೇಶಗಳು

(1) ದೇಶದ ಯುವಕರನ್ನು ಸಂಘಟಿಸುವುದು.

(2) ಇತರ ಯುವಕ ಸಂಸ್ಥೆಗಳ ಚಟುವಟಿಕೆಗಳೊಂದಿಗೆ ಸಂಬಂಧ ಬೆಳೆಸಿಕೊಂಡು ಸಮನ್ವಯ ಸಾಧಿಸುವುದು.

(3) ಯುವಕರ ಉತ್ಸಾಹವನ್ನು ರಚನಾತ್ಮಕ ಕಾರ್ಯರೂಪಕ್ಕೆ ಸೆಳೆಯುವುದು.

(4) ಜಮೀನು ಮತ್ತು ಗ್ರಾಮಗಳ ಮೂಲಭೂತ ಸಮಸ್ಯೆಗಳ ಬಗ್ಗೆ ತಿಳಿವಳಿಕೆ ಕೊಡುವುದು.

ಕಾರ್ಯಚಟುವಟಿಕೆಗಳು

(1) ಯುವಕರಿಗೆ ಶಿಸ್ತಿನ ತರಬೇತಿ ಕೊಡಲು ಗ್ರಾಮೀಣ ಶಿಬಿರಗಳನ್ನು ಏರ್ಪಡಿಸುವುದು.

(2) ದುಡಿಮೆಯಲ್ಲಿ ಗೌರವ ಭಾವನೆ ತಾಳಲು ಯುವಕರಿಗೆ ಶಿಬಿರಗಳನ್ನು ನಡೆಸುವುದು.

(3) ಯುವಕರು ರಚನಾತ್ಮಕ ಕಾರ್ಯಗಳು ಅಂದರೆ ರಸ್ತೆಗಳ ನಿರ್ಮಾಣ, ಹೊರವಲಯಗಳ ನಿರ್ಮಲೀಕರಣ ಕಾರ್ಯಗಳನ್ನು ಮಾಡಲು ಏರ್ಪಡಿಸುವುದು.

(2) ಭಾರತ ಸೇವಾದಳ

ದಿವಂಗತ ಡಾ। ಎನ್. ಎಸ್. ಹರ್ಡಿಕರ್ ರವರು 1923 ರಲ್ಲಿ ಖಾಸಗಿ ಸಂಸ್ಥೆಯಾಗಿ ಹಿಂದುಸ್ಥಾನ್ ಸೇವಾದಳವನ್ನು ಸ್ಥಾಪಿಸಿದರು. ಅನಂತರ ಇದು 'ಭಾರತ ಸೇವಾದಳ' ಎಂಬ ಹೆಸರನ್ನು ಪಡೆಯಿತು. ಇದರ ಉದ್ದೇಶ ಹಾಗೂ ಕಾರ್ಯ ಚಟುವಟಿಕೆಗಳು ಕೆಳಗಿನಂತಿವೆ :

ಉದ್ದೇಶಗಳು

(1) ದೇಶದ ಯುವಕರಿಗೆ ಗಾಂಧಿ ತತ್ವದ ಮೂಲಕ ಮಾರ್ಗದರ್ಶನ ಹಾಗೂ ತರಬೇತಿ ಕೊಡುವುದು.

(2) ಸ್ವಯಂ ಶಿಸ್ತು, ತ್ಯಾಗ, ನಂಬಿಕೆ, ನಿರಾಡಂಬರ ಸೇವಾ ತತ್ಪರತೆ, ತಾಳ್ಮೆ ಈ ಗುಣಗಳನ್ನು ಯುವಕರಲ್ಲಿ ಬೇರೂರಿಸುವುದು.

(3) ರಾಷ್ಟ್ರಾಭಿವೃದ್ಧಿ ಚಟುವಟಿಕೆಗಳ ಕಾರ್ಯಪ್ರವರ್ತನೆಗೆ ಯುವಕ ಬಲವನ್ನು ಸೆಳೆಯುವುದು.

(4) ಜಾತಿ ಅಥವಾ ಪಂಥಗಳನ್ನು ಮೆಟ್ಟಿ, ರಾಷ್ಟ್ರೀಯ ಐಕ್ಯಭಾವನೆಯನ್ನು ಸ್ಥಾಪಿಸುವುದು.

(5) ತುರ್ತುಪರಿಸ್ಥಿತಿಗಳಲ್ಲಿ ಯುವಕರು ಮತ್ತು ಯುವತಿಯರು ಶಾಂತಿ ಪರಿಪಾಲನಾ ಪಡೆಗಳಂತೆ ಕೆಲಸ ಮಾಡಲು ತರಬೇತು ನೀಡುವುದು.

ಕಾರ್ಯಚಟುವಟಿಕೆಗಳು

(1) ಶಿಸ್ತು ಮತ್ತು ಶ್ರಮದಾನಗಳಲ್ಲಿ ಯುವಕರು ಮತ್ತು ಯುವಕ ನಾಯಕರಿಗೆ ತರಬೇತು ನೀಡಲು ನಿಯಮಿತ ಶಿಬಿರಗಳನ್ನು ಏರ್ಪಡಿಸುವುದು.

(2) ಸಮಾಜ ಸೇವಾ ಶಿಬಿರ, ಶ್ರಮದಾನ ಶಿಬಿರ, ಸಂಯೋಜಿತ ಶಿಬಿರಗಳೇ ಮೊದಲಾದ ರಚನಾತ್ಮಕ ಕಾರ್ಯಗಳ ಗ್ರಾಮೀಣ ಶಿಬಿರಗಳನ್ನು ಏರ್ಪಡಿಸುವುದು.

(3) ಪ್ರಾಥಮಿಕ, ಮಾಧ್ಯಮಿಕ, ಕೇಂದ್ರನಾಯಕರ ನಿಯಮಿತ ಶ್ರೇಣಿಗಳ ತರಬೇತುಗಳನ್ನು ಏರ್ಪಡಿಸುವುದು.

(3) **ಭಾರತ ಬಾಲಚಮೂದಳ**

ಇಂಗ್ಲೆಂಡಿನ ಶ್ರೀ ಬೇಡನ್ ಪವೆಲ್‌ರಿಂದ ಸ್ಥಾಪಿತವಾದ ಬಾಲಚಮೂಚಳುವಳಿಯು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರೂಪತಾಳಿರುತ್ತದೆ. ಭಾರತದಲ್ಲಿ ಮೊಟ್ಟ ಮೊದಲು ಬಾಲಚಮೂದಳಗಳನ್ನು ಕ್ಯಾಪ್ಟನ್ ಟಿ. ಎಚ್. ಭಾಕರ್‌ರವರು 1909ರಲ್ಲಿ ಬೆಂಗಳೂರು ಹಾಗೂ ಖಿಡಕಿ. 1910ರಲ್ಲಿ ಜಬ್ಬಲ್‌ಪುರ, ಸಿಮ್ಲಾ ಮತ್ತು ಮುಂಬೈ ಗಳಲ್ಲಿ ಸ್ಥಾಪಿಸಿದರು. ಇದರ ಉದ್ದೇಶ ಹಾಗೂ ಕಾರ್ಯಚಟುವಟಿಕೆಗಳು ಕೆಳಗಿನಂತಿವೆ :

ಉದ್ದೇಶಗಳು

(1) ಶ್ರಮಜೀವನ, ಸ್ವಯಂಶಿಸ್ತು, ಸ್ವಾಭಿಮಾನ, ಸಮಾಜ ಸೇವೆಯಲ್ಲಿ ಆಸಕ್ತಿ, ಉತ್ತಮ ಪೌರತ್ವ ಭಾವಗಳನ್ನು ಬೆಳೆಸಿಕೊಳ್ಳಲು ಅವಕಾಶಗಳನ್ನು ಕಲ್ಪಿಸುವುದು.

(2) ರಾಷ್ಟ್ರಕ್ಕೆ ಧೃಡಕಾಯರಾದ ಆಧ್ಯಾತ್ಮಿಕ ಬಲವುಳ್ಳ ಯುವಕರನ್ನು ಸಿದ್ಧಗೊಳಿಸುವುದು.

ಕಾರ್ಯಚಟುವಟಿಕೆಗಳು

(1) ಬಾಲಚಮೂ, ರೋವರುಗಳ ತರಬೇತು ಏರ್ಪಡಿಸುವುದು.

(2) ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಜಿಲ್ಲೆಗಳಲ್ಲಿ ಶಿಬಿರಗಳನ್ನು ಏರ್ಪಡಿಸುವುದು.

(3) ರಾಜ್ಯಮಟ್ಟದ ಶಿಬಿರಗಳನ್ನು ಏರ್ಪಡಿಸುವುದು.

(4) ಬಾಲಚಮೂದಳ. ಶಿಕ್ಷಕರ ತರಬೇತು ಶಿಬಿರಗಳನ್ನು ಏರ್ಪಡಿಸುವುದು.

(5) ನೈರ್ಮಲ್ಯ ಚಳುವಳಿ, ಬಾಲಚಮೂಗಳ ಸಂಚಾರಗಳನ್ನು ಏರ್ಪಡಿಸುವುದು.

(6) ಸಮಾಜ ಸೇವಾಶಿಬಿರಗಳು, ಸಣ್ಣ ಉಳಿತಾಯ ಯೋಜನೆಗಳನ್ನು ಏರ್ಪಡಿಸುವುದು.

(4) **ಎನ್. ಸಿ. ಸಿ. ಮತ್ತು ಎ. ಸಿ. ಸಿ.**

ಇದು ಪ್ರೌಢವಿದ್ಯಾಲಯ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಸಂಸತ್ತಿನ ಕಾನೂನಿನನ್ವಯ 1948ರಲ್ಲಿ ಪ್ರಾರಂಭಿಸಿದ ಅಧಿಕೃತ ಸೈನಿಕ ತರಬೇತುಗೊಳಿಸುವ ಸಂಸ್ಥೆ. ಇದು ಕೇವಲ ಒಂದು ಶಿಕ್ಷಣ ಸಂಸ್ಥೆಯೇ ಹೊರತು ರಾಜಕೀಯ ಸಂಸ್ಥೆಯಲ್ಲ. ಇದರ ಉದ್ದೇಶ ಹಾಗೂ ಕಾರ್ಯಚಟುವಟಿಕೆಗಳು ಮುಂದಿನ ಪುಟದಲ್ಲಿನಂತಿವೆ:

ಉದ್ದೇಶಗಳು

(1) ಬಾಲಕ ಬಾಲಕಿಯರಲ್ಲಿ ಶೀಲ ಮತ್ತು ಶಿಸ್ತು ಬೆಳೆಸುವುದು.

(2) ಬಾಲಕ ಬಾಲಕಿಯರಲ್ಲಿ ಸ್ವಯಂ ಶಿಸ್ತು ಕಲಿಸುವುದು.

(3) ದುಡಿಮೆಯಲ್ಲಿ ಗೌರವ ಮನೋಭಾವನೆ ಹುಟ್ಟಿಸುವುದು.

(4) ಉತ್ತಮ ಪೌರರಾಗಲು ಯುವಕರಿಗೆ ಸಹಾಯ ನೀಡುವುದು.

(5) ಯುವಕರಲ್ಲಿ ಸಾಮುದಾಯಕ ಜೀವನ, ಆತ್ಮವಿಶ್ವಾಸ ಮತ್ತು ಸಮಾಜ ಸೇವಾ ಚೈತನ್ಯಗಳನ್ನು ಬೆಳೆಸುವುದು.

ಕಾರ್ಯಚಟುವಟಿಕೆಗಳು

(1) ಬಾಲಕ ಬಾಲಕಿಯರಿಗೆ ಶಿಸ್ತಿನ ತರಬೇತು ನೀಡಲು ವ್ಯವಸ್ಥೆ.

(2) ದುಡಿಮೆಯಲ್ಲಿ ಗೌರವ ಬೋಧಿಸಲು ವರ್ಕ್‌ಕ್ಯಾಮ್ಪ್ ಶಿಬಿರಗಳನ್ನು ಏರ್ಪಡಿಸುವುದು.

(3) ಸಮಾಜ ಸೇವಾಶಿಬಿರಗಳನ್ನು ಏರ್ಪಡಿಸುವುದು.

(6) ಕ್ರೈಸ್ತ ಯುವಕರ ಸಂಸ್ಥೆ

ಇದು ಅಂತರರಾಷ್ಟ್ರೀಯ ಸಂಸ್ಥೆ. ಇದರ ಉದ್ದೇಶ ಹಾಗೂ ಕಾರ್ಯಚಟುವಟಿಕೆಗಳು ಕೆಳಗಿನಂತಿವೆ :

ಉದ್ದೇಶಗಳು

(1) ಶಾರೀರಿಕ, ಸಾಮಾಜಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಯುವಕರನ್ನು ಸಂಘಟಿಸಲು ರಾಜ್ಯಗಳಲ್ಲಿರುವ ಕ್ರೈಸ್ತ ಯುವಕರ ಸಂಸ್ಥೆಗಳಿಗೆ ನೆರವು ನೀಡುವುದು.

(2) ಕ್ರೈಸ್ತನ ಆದರ್ಶ ಸೇವೆಯನ್ನು ಯುವಕರಲ್ಲಿ ಪ್ರೇರೇಪಿಸುವುದು.

(3) ಪ್ರಜೆಗಳ ಶ್ರೇಯೋಭಿವೃದ್ಧಿಗೆ ಶ್ರಮಿಸುವ ಚರ್ಚ್ ಮತ್ತು ಇತರ ಸಂಸ್ಥೆಗಳೊಡನೆ ಸಹಕರಿಸುವುದು.

ಕಾರ್ಯಕ್ರಮ ಮತ್ತು ಕಾರ್ಯಚಟುವಟಿಕೆಗಳು

ರಾಷ್ಟ್ರೀಯ ಮಟ್ಟದಲ್ಲಿರುವ ಕ್ರೈಸ್ತಯುವಕ ಸಂಸ್ಥೆಯ ಆಲೋಚನಾ ಸಭೆಯು ಭಾರತಾದ್ಯಂತ ಹೊಸ ಸಂಸ್ಥೆಗಳನ್ನೂ ಮತ್ತು ಅದರ ಶಾಖೆಗಳನ್ನೂ ಸ್ಥಾಪಿಸಿ ನಡೆಸಿಕೊಂಡು ಬರಲು ನೆರವು ನೀಡುತ್ತದೆ. ಇದು ಪ್ರಕಟಣಾಲಯ, ಗ್ರಾಮಾಭಿವೃದ್ಧಿ ಶಾಖೆ, ವ್ಯಾಯಾಮ ಶಿಕ್ಷಣ ಶಾಖೆಗಳನ್ನೂ ನಡೆಸುತ್ತಿರುವುದಲ್ಲದೆ, ಸಂಸ್ಥೆ ನಡೆಸುತ್ತಿರುವ ಶಾಲೆಗಳ ಮತ್ತು ಸಂಸ್ಥೆಯ ಶಾಖೆಗಳಿಗೆ ವಾರ್ತಾಕೇಂದ್ರವಾಗಿದ್ದು ಮಧ್ಯ

ವರ್ತಿ ಮಾರ್ಗದರ್ಶನ ಸಂಸ್ಥೆಯಾಗಿ ವರ್ತಿಸುತ್ತದೆ. ಇದು ಬೆಂಗಳೂರಿನಲ್ಲಿ ಕಾರ್ಯದರ್ಶಿಗಳ ಶಿಕ್ಷಣಶಾಖೆಯನ್ನೂ, ನೈನಿತಾಲಿನಲ್ಲಿ ವಿರಾಮ ಮಂದಿರವನ್ನೂ, ತಿರುಪತ್ತೂರಿನಲ್ಲಿ ಬಾಲಕರ ವಸತಿ ಗೃಹವನ್ನೂ ಮತ್ತು ನಾಗಪುರದಲ್ಲಿ ವಿದ್ಯಾರ್ಥಿಗಳ ವಸತಿ ಗೃಹವನ್ನೂ ನಡೆಸುತ್ತಿರುತ್ತದೆ. ಅಭಿವೃದ್ಧಿ ಕಾರ್ಯಗಳ ಮೂಲಕ, ವಿದೇಶಿ ಧಾರ್ಮಿಕ ಸಂಸ್ಥೆಗಳಿಂದ ಧನಸಹಾಯ, ಚಂದಾ ಹಣ, ಕಟ್ಟಡಗಳ ಬಾಡಿಗೆ ಮತ್ತು ಬಂಡವಾಳಗಳ ಮೇಲಿನ ಬಡ್ಡಿ ರೂಪಗಳಿಂದಲೂ ನಿಧಿ ಶೇಖರಣೆ ಮಾಡುತ್ತದೆ. ಇದು ವಿಶ್ವ ಕ್ರೈಸ್ತ ಯುವಕ ಸಂಸ್ಥೆಯೊಡನೆ ಸಂಬಂಧ ಹೊಂದಿದೆ.

4. ವಿದೇಶಗಳಲ್ಲಿ ಯುವಕ ಸಂಘಟನೆ

ಪ್ರಪಂಚದ ಅನೇಕ ದೇಶಗಳಲ್ಲಿ ಗ್ರಾಮೀಣ ಯುವಕ ಚಟುವಟಿಕೆಗಳು ರಾಷ್ಟ್ರೀಯ ಕಾರ್ಯಕ್ರಮಗಳಾಗಿ ರೂಪಗೊಂಡಿವೆ. ಅವುಗಳಲ್ಲಿ ಅಮೆರಿಕ. ಡೆನ್ಮಾರ್ಕ್, ಜಪಾನ್ ಬ್ರಿಟನ್, ಹಾಲೆಂಡ್, ಇರಾನ್, ಆಸ್ಟ್ರಿಯಾ, ನಾರ್ವೆ, ಪೆರು. ಪನಾಮ, ಫಿಲಿಪೈನ್ಸ್, ಚೀನ, ಥೈಲೆಂಡ್. ಈಜಿಪ್ಟ್, ಜಮೈಕ ಮೊದಲಾದ ದೇಶಗಳಲ್ಲಿನವು ಮುಖ್ಯವಾದವು

(ಅ) ಅಮೆರಿಕದ ಸಂಯುಕ್ತ ಸಂಸ್ಥಾನಗಳ 4–ಎಚ್ ಕ್ಲಬ್‌ಗಳು

4–ಎಚ್ ಕ್ಲಬ್‌ಗಳು ಅಮೆರಿಕೆಯಲ್ಲಿ ಹೆಸರಾಂತ ಗ್ರಾಮೀಣ ಯುವಕ ಸಂಸ್ಥೆಗಳು. ಹತ್ತೊಂಬತ್ತನೆಯ ಶತಮಾನದ ಅಂತ್ಯ ಹಾಗೂ ಇಪ್ಪತ್ತನೆಯ ಶತಮಾನದ ಆದಿಯಲ್ಲಿಯೇ 4–ಎಚ್ ಕ್ಲಬ್‌ಗಳು ಅಮೆರಿಕೆಯಲ್ಲಿ ಪ್ರಾರಂಭವಾಗಿವೆ. ಗ್ರಾಮಾಂತರ ಪ್ರದೇಶದ ಉಪಾಧ್ಯಾಯರುಗಳು ಬೇಸಾಯ ಮತ್ತು ಮನೆ ನಿರ್ವಹಣೆ ಬಗೆಗಿನ ಕೆಲಸ ವಿಷಯಗಳ ಸುಧಾರಣೆಗಳನ್ನು ಮಕ್ಕಳಿಗೆ ಬೋಧಿಸಿ ತನ್ಮೂಲಕ ದೊಡ್ಡವರಿಗೆ ಬೋಧಿಸುವ ಸಾಧ್ಯತೆಗಳನ್ನು ಈ ಕ್ಲಬ್‌ಗಳ ಮುಖಾಂತರ ಕಂಡುಕೊಂಡಿದ್ದರು. ದಕ್ಷಿಣದ ಕೆಲಸ ರಾಜ್ಯಗಳಲ್ಲಿ ಮುಸುಕಿನ ಜೋಳ, ಕ್ಯಾನಿಂಗ್ ಮತ್ತು ಕೋಳಿ ಸಾಕಾಣಿಕೆಯ ಸಂಘಗಳು ಅಲ್ಲಲ್ಲಿ ಮೊದಲು ಪ್ರಾರಂಭವಾದವು. ಈ ಚಳುವಳಿಯು ಕ್ರಮೇಣ ಪ್ರಬಲಗೊಂಡು ರಾಷ್ಟ್ರಾದ್ಯಂತ ಮಹಾ ಯುವಕ ಸಂಘಟನೆಯ ರೂಪತಾಳಿತು. ನಂತರ ಉತ್ತರ ರಾಜ್ಯಗಳಾದ ಇಲಿನೊಯಿಸ್, ಓಹಿಯೊ ಮತ್ತು ಅಯೋವಗಳಲ್ಲಿ ಮುಸುಕಿನ ಜೋಳದ ಸಂಘಗಳು ಪ್ರಾರಂಭವಾದವು.

1905ರಲ್ಲಿ ಸೀಮನ್ ಎ. ನಾಫ್ ಅವರು ದಕ್ಷಿಣ ಭಾಗದ ಹತ್ತಿ ಬೆಳೆಯ ಪ್ರದೇಶಗಳಲ್ಲಿ ಹತ್ತಿಕಾಯಿ ಹುಳುಗಳ ಹತೋಟಿ ಮಾಡಲು ಶಾಲಾಬಾಲಕರ ಸಂಘಗಳನ್ನು ರಚಿಸಿದರು. ಈ ಸಂಘಗಳು ಹತ್ತಿಕಾಯಿ ಹುಳುಗಳ ಹತೋಟಿಯಲ್ಲಿ ಯಶಸ್ಸು ಗಳಿಸಿದವು. ದಕ್ಷಿಣ ಕರೋಲಿನ ಮತ್ತು ವರ್ಜೀನಿಯ ರಾಜ್ಯಗಳಲ್ಲಿ 1910ರಲ್ಲಿ ಸಾರ್ವಜನಿಕ ವಿದ್ಯಾಮಂಡಲಿಯ ನೆರವಿನಿಂದ ಬಾಲಕಿಯರ ಕ್ಯಾನಿಂಗ್ ಮತ್ತು ಕೋಳಿ ಸಾಕಣೆ ಸಂಘಗಳು ಸ್ಥಾಪಿತವಾದವು. 1914ರ ಸ್ಮಿತ್ ಲಿವರ್ ಕಾನೂನಿನಿಂದ ಈ ಚಳುವಳಿಗೆ ಉತ್ತೇಜನ ದೊರಕಿ ಸಂಯುಕ್ತ ಸಂಸ್ಥಾನಗಳ ವ್ಯವಸಾಯ ಇಲಾಖೆ ಸ್ಥಾಪನೆಯಾಯಿತು.

4-H ವಿವರಣೆ : 4-H, ನಾಲ್ಕು H ಅಕ್ಷರಗಳಿಂದ ಕೂಡಿದೆ. ಪ್ರತಿ H ಒಂದೊಂದು ವಿಷಯ ಪ್ರತಿನಿಧಿಸುತ್ತದೆ :

Head-ತಲೆ : ಸರಿಯಾದ ಆಲೋಚನೆಗಾಗಿ
Heart-ಹೃದಯ : ಅಪಾರ ದೇಶಭಕ್ತಿಗಾಗಿ
Hand-ಕೈ : ಅಪಾರ ಸೇವೆ ಸಲ್ಲಿಸುವುದಕ್ಕಾಗಿ
Health-ಆರೋಗ್ಯ : ಉತ್ತಮ ಜೀವನ ನಿರ್ವಹಣೆಗಾಗಿ.

4-ಎಚ್ ಕ್ಲಬ್ ಉದ್ದೇಶಗಳು :

(1) ಗ್ರಾಮೀಣ ಬಾಲಕ ಬಾಲಕಿಯರಲ್ಲಿ ಜನಜೀವನ, ಗೃಹ ನಿರ್ವಹಣೆ ಮತ್ತು ಸಾಗುವಳಿಗಳ ಅಭಿವೃದ್ಧಿ ಹೊಂದಲು ನೆರವು ನೀಡುವುದು.

(2) ಬಾಲಕ ಬಾಲಕಿಯರಿಗೆ ತಾಂತ್ರಿಕ ಪಾಠ ಪ್ರವಚನ ನೀಡುವುದಲ್ಲದೆ, ಕೃಷಿ ಮತ್ತು ಗೃಹ ನಿರ್ವಹಣೆ ಕಾರ್ಯಗಳಲ್ಲಿ ಗೌರವ ಮತ್ತು ಆಸಕ್ತಿಯನ್ನು ಹುಟ್ಟಿಸುವುದು.

(3) 'ದುಡಿಮೆಯ ಮುಖಾಂತರ ಜ್ಞಾನಾರ್ಜನೆ' ಎಂಬ ತತ್ವ ಆಧರಿಸಿ ಬಾಲಕ ಬಾಲಕಿಯರಿಗೆ ಅವರು ಕಲಿತಿರುವುದನ್ನು ಇತರರಿಗೆ ಪ್ರದರ್ಶಿಸಲು ಅವಕಾಶ ಕಲ್ಪಿಸುವುದು.

(4) ಗ್ರಾಮೀಣ ಪರಿಸರಗಳನ್ನು ಗೌರವಿಸುವಂತೆ ಯುವಕರ ಮನಸ್ಸು ತಿದ್ದುವುದು.

(5) ವೈಜ್ಞಾನಿಕ ಮನೋಭಾವ ಬೆಳವಣಿಗೆ ಮತ್ತು ಸಂಶೋಧನೆಯ ಮಹತ್ವವನ್ನು ಬೋಧಿಸುವುದು.


(6) ಬಾಲಕ ಬಾಲಕಿಯರು ಗ್ರಾಮೀಣ ಸಮಸ್ಯೆಗಳನ್ನು ಸಹಕಾರತತ್ವದ ಮೂಲಕ ಪರಿಹರಿಸುವ ರೀತಿಯಲ್ಲಿ ತರಬೇತಿ ಕೊಡುವುದು.

(7) ಆರೋಗ್ಯಾಭ್ಯಾಸ, ವಿರಾಮ ಸದ್ವಿನಿಯೋಗ, ಜ್ಞಾನಾರ್ಜನಾಸಕ್ತಿ ಬೆಳವಣಿಗೆಗಳಿಂದ ಸಂಪದ್ಭರಿತ ಜೀವನ ಹೊಂದುವಂತೆ ಮಾಡುವುದು.

(8) ಉತ್ತಮ ಸಾಗುವಳಿ ಹಾಗೂ ಗೃಹ ನಿರ್ವಹಣೆಗಳಿಂದ ವ್ಯವಸಾಯದಲ್ಲಿ ವರಮಾನ ಹೆಚ್ಚಿಸಿ ಜೀವನ ಮಟ್ಟ ಬೆಳೆಸಿ ಸಂತೃಪ್ತ ರೈತ ಜೀವನ ಪಡೆಯುವುದು.

ಈ 4-ಎಚ್ ಕ್ಲಬ್‌ಗಳು ಅಮೆರಿಕೆಯ ಸಂಯುಕ್ತ ಸಂಸ್ಥಾನಗಳ ವ್ಯವಸಾಯ ಇಲಾಖೆ, ಲ್ಯಾಂಡ್ ಗ್ರಾಂಟ್ ವಿಶ್ವವಿದ್ಯಾಲಯ ಹಾಗೂ ಕೌಂಟಿ ಸರಕಾರಗಳ ಸಹಕಾರದಿಂದ ನಡೆಸಲ್ಪಡುತ್ತಿರುತ್ತವೆ.

ಸಹಕಾರೀ ವಿಸ್ತರಣಾ ಕಾರ್ಯ ವ್ಯವಸ್ಥೆಯಲ್ಲಿ 4–ಎಚ್ ಕ್ಲಬ್‌ಗಳ ಹೊಂದಾಣಿಕೆ ಈ ಕೆಳಗಿನ ಪ್ರವಹಿಸುವ ರೇಖಾಪಟದಿಂದ ತಿಳಿಯಬಹುದು.



ಚಟುವಟಿಕೆಗಳು : ಕಾರ್ಯಚಟುವಟಿಕೆಗಳು 4–ಎಚ್ ಕ್ಲಬ್‌ಗಳ ಬೆನ್ನೆಲುಬು. ರಚನಾತ್ಮಕವಾದ ವೈಯಕ್ತಿಕ ಮತ್ತು ಸಮುದಾಯ ಕಾರ್ಯ ಚಟುವಟಿಕೆಗಳು ಇವುಗಳಲ್ಲಿ ಸೇರಿವೆ.

(i) **ವೈಯಕ್ತಿಕ ಕಾರ್ಯ ಚಟುವಟಿಕೆಗಳು :** ಸದಸ್ಯರು ವೈಯಕ್ತಿಕವಾಗಿ ತಮ್ಮ ಸ್ವಂತ ಬೇಸಾಯ ಮತ್ತು ಗೃಹನಿರ್ವಹಣೆಗಳನ್ನು ಉತ್ತಮಪಡಿಸಿಕೊಳ್ಳಲು ಹಲವಾರು ಕುಶಲತೆಗಳನ್ನು ಗಳಿಸಬಹುದಾದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುತ್ತಾರೆ. ಉದಾಹರಣೆ : ಕೋಳಿ ಮತ್ತು ಕರುಗಳ ಸಾಕಾಣಿಕೆ, ಉತ್ತಮ ತಳಿ ಬೆಳೆ ತೆಗೆಯುವಿಕೆ. ಉಡುಪು ತಯಾರಿಕೆ. ಮನೆಗಳ ಅಲಂಕಾರ ಇತ್ಯಾದಿ.

(ii) **ಗುಂಪಿನ ಕಾರ್ಯಚಟುವಟಿಕೆಗಳು :** ಇವು ಸಂಘದ ಸದಸ್ಯರೆಲ್ಲ ಒಟ್ಟುಗೂಡಿ ಸಹಕರಿಸಿ ನಡೆಸಿಕೊಂಡು ಹೋಗತಕ್ಕ ಕಾರ್ಯಚಟುವಟಿಕೆಗಳು. ಸಮುದಾಯ, ಸಾಮಾಜಿಕ ಮತ್ತು ಮನರಂಜನ ಚಟುವಟಿಕೆಗಳು ಅಂದರೆ ಶೈಕ್ಷಣಿಕ ಯಾತ್ರೆ, ಪ್ರವಾಸ ಹಾಗೂ ಪ್ರದರ್ಶನಗಳು ಪ್ರತಿ ಕ್ಲಬ್ಬಿನ ಕಾರ್ಯಚಟುವಟಿಕೆಗಳಾಗಿರುತ್ತವೆ. ಪ್ರತಿ ವರ್ಷ ಕೌಂಟಿ, ರಾಜ್ಯ ಮತ್ತು ರಾಷ್ಟ್ರಮಟ್ಟಗಳಲ್ಲಿ ವಿವಿಧ ಸ್ಪರ್ಧೆಗಳನ್ನು

ನಡೆಸಿ ಅತ್ಯುತ್ತಮ ಕಾರ್ಯಚಟುವಟಿಕೆ ನಡೆಯಿಸಿದವರಿಗೆ ಬಹುಮಾನಗಳ ವಿತರಣೆ ಮಾಡುವ ಏರ್ಪಾಡಿರುತ್ತದೆ.

(ಆ) ಅಮೆರಿಕದ ಭಾವಿ ರೈತರು

ಗ್ರಾಮಾಂತರ ಪ್ರೌಢ ಶಾಲೆಗಳ ಶಾಲಾ ಸಂಘಗಳು ಸೇರಿ ಅಭಿವೃದ್ಧಿಗೊಳಿಸಿರುವ 'ಅಮೆರಿಕದ ಭಾವಿ ರೈತರು' ಅಮೆರಿಕದಲ್ಲಿ ಅತ್ಯಂತ ಕಾರ್ಯಕ್ಷಮ ಸಂಸ್ಥೆಯೆನಿಸಿದೆ. ಪ್ರೌಢಶಾಲಾ ವಿದ್ಯಾರ್ಥಿ ಸದಸ್ಯರಿಗೆ ವ್ಯವಸಾಯ ವೃತ್ತಿ ಶಿಕ್ಷಣದಲ್ಲಿ ಈ ಸಂಘಟನೆಯು ತರಬೇತಿ ನೀಡುತ್ತಿದೆ.

ಉದ್ದೇಶಗಳು : 'ಅಮೆರಿಕದ ಭಾವಿ ರೈತರು' ಸಂಘಟನೆಯು ತನ್ನ ಸದಸ್ಯರಿಗೆ ಪ್ರಾಥಮಿಕ ಗುರಿಯಾಗಿ ರೈತ ಮುಂದಾಳುತನ, ಸಹಕಾರ ಮತ್ತು ಪೌರಹಕ್ಕುಗಳ ಸಾಧನೆಯಲ್ಲಿ ತರಬೇತಿ ನೀಡುತ್ತದೆ.

ಚಟುವಟಿಕೆಗಳು : ಮಣ್ಣು ಪರೀಕ್ಷೆ, ಹಾಲಿನ ಪರೀಕ್ಷೆ, ಉಳಿತಾಯ ಮಾಡಿದ ಹಣ ಶೇಖರಣೆ, ಭಾಷಣ ಸ್ಪರ್ಧೆಗಳಲ್ಲಿ ಭಾಗವಹಿಸುವಿಕೆ, ಪ್ರಜಾಪ್ರಭುತ್ವ ತತ್ವದಲ್ಲಿ ತರಬೇತಿ, ಬೆಳೆಕಾರ್ಯ ಚಟುವಟಿಕೆ, ಹೈನುಗಾರಿಕೆ, ಕೋಳಿ ಸಾಕಣೆ ಇತ್ಯಾದಿಗಳು ಸದಸ್ಯರು ಕೈಕೊಳ್ಳಬೇಕಾದ ಚಟುವಟಿಕೆಗಳಲ್ಲಿ ಕೆಲವು.

(ಇ) ಡೆನ್‌ಮಾರ್ಕ್ 'ಜನತಾ ಪ್ರೌಢಶಾಲೆ'ಗಳು

ಡೆನ್‌ಮಾರ್ಕ್ ದೇಶದಲ್ಲಿ 'ಜನತಾ ಪ್ರೌಢಶಾಲೆ'ಗಳೆಂದು ಹೆಸರಾದ ವ್ಯವಸಾಯ ಸಂಘಗಳು ರೈತ ಬಾಲಕ ಬಾಲಕಿಯರ ಸಮುದಾಯಗಳಿಗೆ ವ್ಯವಸಾಯ ಹಾಗೂ ಔದ್ಯೋಗಿಕ ಶಿಕ್ಷಣವನ್ನು 1913 ರಿಂದಲೂ ಕೊಡುತ್ತ ಬಂದಿದೆ. ಈ ಪ್ರೌಢ ಶಾಲೆಗಳಲ್ಲಿ ಕಾರ್ಮಿಕ ಹಾಗೂ ಬೇಸಾಯಗಾರರಾದ ಗಂಡಸರು, ಹೆಂಗಸರು ಮತ್ತು ಬಾಲಕ ಬಾಲಕಿಯರಿಗೆ ಪ್ರತ್ಯೇಕ ಶಿಕ್ಷಣ ಕ್ರಮಗಳ ಏರ್ಪಾಡಿದೆ. ಅವು ಪ್ರಧಾನವಾಗಿ ಗ್ರಾಮೀಣ ಜನತೆಯ ಬೇಡಿಕೆ ಪೂರೈಸಿ ನೆರೆಹೊರೆಯ ಉತ್ತಮ ಬಾಂಧವ್ಯ ಸಾಧನೆಗೆ ಏರ್ಪಾಡುಮಾಡಿವೆ. ಈ ಶಾಲೆಗಳು ಅವು ಇರುವ ರೈತ ಸಮೂಹಗಳ ಸಾಮೂಹಿಕ ಜೀವಕೇಂದ್ರಗಳಾಗಿ, ಸಮಾಜದಲ್ಲಿ ನೆಮ್ಮದಿ ಒದಗಿಸಿ, ಸಹಕಾರ ಚಳುವಳಿಯ ಕೇಂದ್ರಗಳಾಗಿ ಕೆಲಸ ಮಾಡುತ್ತಿವೆ.

(ಈ) ಜಪಾನಿನ ಯುವಕ ಹಾಗೂ ಯುವತಿ ಸಂಘಗಳು

ಜಪಾನಿನಲ್ಲಿ ಗ್ರಾಮೀಣ ಯುವಕ ಕಾರ್ಯಕ್ರಮಗಳನ್ನು ವಿಸ್ತರಣ ಸೇವಾಸಂಸ್ಥೆ 1948ನೇ ಆಗಸ್ಟ್‌ನಲ್ಲಿ ಪ್ರಾರಂಭಿಸಿತು. ಇದೇ ವರ್ಷ ವ್ಯವಸಾಯ ಸುಧಾರಣಾಭಿವೃದ್ಧಿ ಕಾನೂನು ಜಾರಿಗೆ ಬಂದು, ವ್ಯವಸಾಯ ತಾಂತ್ರಿಕ ವಿಸ್ತರಣ ಸೇವಾಸಂಸ್ಥೆಯು

ನೂತನ ಕಾರ್ಯಚಟುವಟಿಕೆಗಳು ಪ್ರಾರಂಭವಾದುವು. ಅದರನ್ವಯ 20 ವರ್ಷ ವಯಸ್ಸಿನೊಳಗಿನ ಯುವಕರು 4–ಎಚ್ ಕ್ಲಬ್‌ಗಳಲ್ಲಿ ಮತ್ತು 21 ರಿಂದ 25 ವರ್ಷಗಳ ವಯೋಮಿತಿಯೊಳಗಿನ ಯುವಕರು ಮತ್ತು ಯುವತಿಯರು 'ಕೃಷಿ ಶೈಕ್ಷಣಿಕ ಯುವಕ ಸಂಘ'ಗಳಲ್ಲಿ ಸೇರಿ ತರಪೇತಿ ಪಡೆಯಲು ಅವಕಾಶವಿದೆ. 1950ರಿಂದೀಚೆಗೆ ಯುವಕ ಸಂಘಗಳು ತೀವ್ರಗತಿಯಲ್ಲಿ ಗಮನಾರ್ಹ ಪ್ರಗತಿ ಸಾಧಿಸಿ ಬೆಳೆದಿವೆ. ವಿಸ್ತರಣ ಸೇವೆ, ವ್ಯವಸಾಯ, ಅರಣ್ಯ ಇಲಾಖೆಗಳ ಸಹಕಾರದಿಂದ ಈ ಸಂಘಟನೆ ಬಲಗೊಂಡಿದೆ. ಜಪಾನಿನ ಪ್ರತಿ ಗ್ರಾಮೀಣ ಸಮಾಜದಲ್ಲಿ ಸರಾಸರಿ ನಾಲ್ಕು ಸಂಘಗಳಿದ್ದು ಸುಮಾರು ಮೂರು ಲಕ್ಷಕ್ಕಿಂತ ಹೆಚ್ಚು ಯುವಕರು ಈ ಸಂಘಗಳ ಸದಸ್ಯರಾಗಿದ್ದಾರೆ. ಇವರು ಉನ್ನತ ಮಟ್ಟಗಳ ಕಾರ್ಯಚಟುವಟಿಕೆಗಳನ್ನು ನಡೆಯಿಸಿ ಉತ್ತಮ ಸಾಧನೆಗಳನ್ನು ಸಾಧಿಸಿದ್ದಾರೆ.

(ಉ) ಬ್ರಿಟನ್ ಯುವಕ ರೈತ ಸಂಘಗಳು

ಇಂಗ್ಲೆಂಡ್ ಮತ್ತು ವೇಲ್ಸ್‌ಗಳಲ್ಲಿ ಯುವಕ ರೈತ ಸಂಘಗಳ ಚಳುವಳಿಯು 1921ರಲ್ಲಿ ಪ್ರಾರಂಭವಾಯಿತು. ದಿವಂಗತ ಲಾರ್ಡ್ ನಾರ್ತ್‌ಕ್ಲಿಫ್‌ರವರ ನೇತೃತ್ವದಲ್ಲಿ ಈ ಚಳುವಳಿ ಪ್ರಾರಂಭವಾಯಿತು. ಅಮೆರಿಕೆಯ ಸಂಯುಕ್ತ ಸಂಸ್ಥಾನಗಳ ಮತ್ತು ಕೆನಡಾಗಳ 4–ಎಚ್ ಕ್ಲಬ್‌ಗಳ ಫಲಪ್ರದ ಕಾರ್ಯಕ್ರಮಗಳನ್ನು ನೋಡಿ ಮೆಚ್ಚಿ ತಮ್ಮ ದೇಶದಲ್ಲೂ ಇಂತಹ ಚಳುವಳಿ ಪ್ರಾರಂಭಿಸಲು ಅವರು ಸಂಕಲ್ಪಿಸಿದ್ದರು. ಲಾರ್ಡ್ ನಾರ್ತ್‌ಕ್ಲಿಫ್ ಮರಣಾನಂತರ ವ್ಯವಸಾಯ ಸಚಿವ ಖಾತೆ, ಯುವಕ ರೈತ ಸಂಘಗಳ ಆಡಳಿತ ವಹಿಸಿಕೊಂಡು ದೇಶಾದ್ಯಂತ ಸ್ಥಳೀಯ ಸಂಘಗಳನ್ನು ವೃದ್ಧಿಪಡಿಸಿದೆ.

(ಊ) ಆಸ್ಟ್ರಿಯಾ ಯುವಕ ರೈತ ಸಂಘಗಳು

ಅಮೆರಿಕೆಯ ಸಂಯುಕ್ತ ಸಂಸ್ಥಾನಗಳ 4–ಎಚ್ ಕ್ಲಬ್‌ಗಳ ತಳಹದಿ ಮೇಲೆಯೇ 1949ರಲ್ಲಿ ಆಸ್ಟ್ರಿಯಾ ದೇಶದಲ್ಲಿ ಯುವಕ ಸಂಘಗಳ ಸ್ಥಾಪನೆಯಾಗಿದೆ.

(ಋ) ನಾರ್ವೆ ಯುವಕ ಸಂಘಗಳು

ಅಮೆರಿಕೆಯ ಸಂಯುಕ್ತ ಸಂಸ್ಥಾನಗಳ ಬಾಲಕ ಬಾಲಕಿಯರ 4–ಎಚ್ ಕ್ಲಬ್‌ಗಳ ಕಾರ್ಯಚಟುವಟಿಕೆಗಳನ್ನು ಕುರಿತು ಓಸ್ಲೋದಲ್ಲಿ ಅಮೆರಿಕದ ಡೇನಿಷ್ ಗೃಹಸ್ಥ ಭಾಷಣ ಮಾಡಿದ ನಂತರ 1924ರಲ್ಲಿ ನಾರ್ವೆ ವ್ಯವಸಾಯ 4–ಎಚ್ ಕ್ಲಬ್‌ಗಳ ಕಾರ್ಯಾರಂಭವಾಯಿತು. 1936 ರಿಂದೀಚೆಗೆ ಇವುಗಳ ಕಾರ್ಯ ಭರದಿಂದ ನಡೆದು ಇಪ್ಪತ್ತು ಸಾವಿರಕ್ಕಿಂತ ಹೆಚ್ಚು ಸದಸ್ಯರಿಂದು ಈ ಸಂಘಗಳಲ್ಲಿದ್ದಾರೆ.

(ಋೂ) **ಪೆರು ಯುವಕರ ಸಂಘಗಳು**

1951ರಲ್ಲಿ ಉತ್ತರ ಪೆರುವಿನಲ್ಲಿ ಸಕ್ಕರೆ ಶುದ್ಧೀಕರಣ ಕಾರ್ಖಾನೆಯು ಯುವಕರಿಗೆ ವ್ಯವಸಾಯ ಸಂಘಗಳನ್ನು ಸ್ಥಾಪಿಸಲು ಕೃಷಿ ಸೇವೆ ವ್ಯವಸ್ಥೆಮಾಡಿತು. ಈ ಸಂಘಗಳ ಸದಸ್ಯರು ತರಕಾರಿ ಬೆಳೆ. ಕೋಳಿಸಾಕಣೆ ಅಲ್ಲದೆ ಇತರ ಬೇರೆ ಬೇರೆ ಕಾರ್ಯಚಟುವಟಿಕೆ ಕೈಕೊಂಡು ಸಂಘಟನೆಯನ್ನು ಬಲಪಡಿಸಿದ್ದಾರೆ.

(ಎ) **ಪನಾಮ್ ಯುವಕ ಸಂಘಗಳು**

ವ್ಯವಸಾಯ ಮತ್ತು ವಾಣಿಜ್ಯ ಕೈಗಾರಿಕಾ ಸಚಿವ ಶಾಖೆಗಳ ಜಂಟಿ ಪ್ರಯತ್ನದಿಂದ 4–ಎಚ್ ಸಂಘಗಳು ಈ ದೇಶದಲ್ಲಿ ಸ್ಥಾಪಿತವಾಗಿವೆ.

(ಏ) **ಫಿಲಿಪೈನ್ಸ್ ಯುವಕ ಸಂಘಗಳು**

1934ರಲ್ಲಿ ಫಿಲಿಪೈನ್ಸ್ ದೇಶದಲ್ಲಿ ಮಹಿಳಾ ಸಂಘಗಳ ಮುಖಾಂತರ ಗ್ರಾಮೀಣ ಯುವ ಕಾರ್ಯಚಟುವಟಿಕೆಗಳು ಪ್ರಾರಂಭವಾದುವು. 1946ರಿಂದೀಚೆಗೆ ಈ ಕಾರ್ಯವನ್ನು 4–ಎಚ್ ಕ್ಲಬ್‌ಗಳ ಮಾದರಿಯ ಮೇಲೆ ವಿಸ್ತರಣ ಸೇವಾ ವಿಭಾಗವು ಸಂಘಟಿಸಿದೆ.

ಇಂದು ಈ ದೇಶದಲ್ಲಿ ಗ್ರಾಮೀಣ ಯುವಕ ಸಂಘಟನೆಯು ದೇಶಾದ್ಯಂತ ಬೃಹತ್ ಕಾರ್ಯಕ್ರಮವಾಗಿ ಬೆಳೆದುಬಂದಿದೆ.

(ಐ) **ಚೀನಾ ಗಣರಾಜ್ಯದಲ್ಲಿ ಯುವಕ ಸಂಘಗಳು**

ಸ್ವತಂತ್ರ ಚೀನಾದಲ್ಲಿ 1952ರಲ್ಲಿ ಯುವಕ ಸಂಘಟನೆ ವ್ಯವಸ್ಥಿತವಾಗಿ ಪ್ರಾರಂಭವಾಯಿತು. ಅಲ್ಲಿ ಈ ಕಾರ್ಯಕ್ರಮವನ್ನು '4- ಎಸ್' ಎಂಬ ಹೆಸರಿನಿಂದ ಕರೆಯುತ್ತಾರೆ. ನಾಲ್ಕು 'ಎಸ್' ಅಮೆರಿಕೆಯಲ್ಲಿಯಂತೆ ತಲೆ, ಹೃದಯ, ಕೈ ಹಾಗೂ ಆರೋಗ್ಯಗಳಿಗೆ ತರಬೇತಿ ನೀಡುವವುಗಳಾಗಿವೆ. ಈ ತರಬೇತಿಯಲ್ಲಿ ಪರಿಶುದ್ಧತೆಗೆ ಪ್ರಾಮುಖ್ಯತೆ. ಈ ಸಂಘಗಳಲ್ಲಿ ಸದಸ್ಯರ ವಯೋಮಿತಿ 10 ರಿಂದ 24.

(ಒ) **ಥೈಲ್ಯಾಂಡ್ ಯುವಕ ಸಂಘಗಳು**

1952ರಲ್ಲಿ ವಿಶ್ವ ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಪ್ರತಿನಿಧಿಯೊಬ್ಬರಿಂದ ಪ್ರಾರಂಭಿಸಲಾದ ಥೈಲ್ಯಾಂಡಿನ ಯುವಕ ರೈತರ ಸಂಘಗಳನ್ನು ಅಲ್ಲಿ ಅವರು 'ಯುವ ಕೃಷಿ ಕೊರನ್' ಎಂದು ಕರೆಯುತ್ತಾರೆ. 1953ರಿಂದ ಸಂಘಗಳ ಕಾರ್ಯಚಟುವಟಿಕೆಗಳ ಉಸ್ತುವಾರಿ ವ್ಯವಸಾಯ ಇಲಾಖೆಗೆ ಸೇರಿದೆ.

(ಓ) **ಈಜಿಪ್ಟ್ ಯುವಕ ಸಂಘಗಳು**

ಈಜಿಪ್ಟ್‌ನಲ್ಲಿ ಮನರಂಜನೆ ಮತ್ತು ಸಮಾಜ **ಸೇವಾ ಕಾರ್ಯಚಟುವಟಿಕೆಗಳನ್ನು** ಹೆಚ್ಚಾಗಿ ಯುವಕ ಸಂಘಗಳು ನಡೆಸುತ್ತಿವೆ.

(ಔ) **ಜಮೈಕ ಯುವಕ ಸಂಘಗಳು**

ಜಮೈಕ ದೇಶದಲ್ಲಿ ಯುವಕ ಸಂಘಗಳು '3–ಎಫ್' ಎಂದು ಕರೆಯಲ್ಪಡುತ್ತವೆ. ವ್ಯವಸಾಯಾಭಿವೃದ್ಧಿ ಮತ್ತು ಗೃಹ ನಿರ್ವಹಣೆಗಳಿಗೆ ಬೇಕಾದ ಕೌಶಲ್ಯ ಭಾವನೆ ಸಂಪಾದಿಸಲು ಯುವಕ ಮತ್ತು ಯುವತಿಯರಿಗೆ ಸಾಕಷ್ಟು ಅವಕಾಶಗಳನ್ನು ಈ ಸಂಘಗಳು ಒದಗಿಸುತ್ತವೆ.

(ಅಂ) **ಡೆನ್ಮಾರ್ಕ್ ಯುವಕ ಸಂಘಗಳು**

1926 ರಲ್ಲಿ 4–ಎಚ್ ಸಂಘಗಳ **ಮಾದರಿಯಲ್ಲಿ ಯುವಕ** ಸಂಘಟನೆ **ಈ ದೇಶ**ದಲ್ಲಿ ಪ್ರಾರಂಭವಾಯಿತು.

(ಅಃ) **ಫ್ರಾನ್ಸ್ ಯುವಕ ಸಂಘಗಳು**

1929 ರಲ್ಲಿ 'ಜೆಂಸಿ' ಎಂಬ ಹೆಸರಿನಲ್ಲಿ ಯುವಕ ಸಂಘಗಳು **ಪ್ರಾರಂಭವಾಗಿವೆ.**

(ಕ) **ಹಾಲೆಂಡ್ ಯುವಕ ಸಂಘಗಳು**

1930ರಲ್ಲಿ 'ಡಚ್ ಪ್ರಾಟೆಸ್ಟೆಂಟ್' ಗ್ರಾಮೀಣ **ಯುವಕ ಸಂಘಗಳು** ಪ್ರಾರಂಭವಾಗಿ ಇಂದು ಬಹು ಬಗೆಯಾಗಿ ಬೆಳೆದುನಿಂತಿವೆ.

(ಖ) **ಇರಾನಿನ ಯುವಕ ಸಂಘಗಳು**

1957 ರಲ್ಲಿ ಯುವ ಸಂಘಟನೆ ಈ ದೇಶದಲ್ಲಿ ಪ್ರಾರಂಭವಾಯಿತು. ಇಲ್ಲಿನ ಯುವ ಸಂಘಗಳಿಗೆ '4–ಡಿ' ಸಂಘಗಳೆಂದು ಹೆಸರು. ರಾಷ್ಟ್ರೀಯ ವ್ಯವಸಾಯ ವಿಸ್ತರಣೆ ಸೇವೆ ಈ ಸಂಘಗಳ ಸಂಘಟನೆಯ ಮೇಲ್ವಿಚಾರಣೆ ಮಾಡುತ್ತದೆ.

ವಿಶ್ವದ ಬೇರೆ ಬೇರೆ ದೇಶಗಳಲ್ಲಿನ ಯುವ ಸಂಘಟನೆಯಲ್ಲಿ ಕಂಡುಬರುವ ಕೆಲವು ಮಹತ್ವದ ಅಂಶಗಳು ಹಾಗೂ ನಾವು ಕಲಿಯಬೇಕಾದ ಮತ್ತು ಅನುಸರಿಸಬೇಕಾದ ಕೆಲವು ಅಂಶಗಳು

ಹಲವು ದೇಶಗಳಲ್ಲಿ ಬೃಹದಾಕಾರವಾಗಿ ಇಂದು ಬೆಳೆದಿರುವ ಗ್ರಾಮೀಣ ಯುವಕರ ಸಂಘಟನೆ ಪರಿಶೀಲಿಸಿದಾಗ ಕೆಳಗಿನ ಕೆಲವು ಮುಖ್ಯ ಅಂಶಗಳು ಗೋಚರವಾಗುತ್ತವೆ :

(1) ಬಹುತೇಕ ರಾಷ್ಟ್ರಗಳು ಹಲವಾರು ದಶಕಗಳ ಪರಿಶ್ರಮದ ಫಲವಾಗಿ ಗ್ರಾಮೀಣ ಯುವಕರನ್ನು ಸಂಘಟಿಸಿದೆ.

(2) ನಿರ್ದಿಷ್ಟ ಗುರಿ, ಉದ್ದೇಶ ಹಾಗೂ ಕಾರ್ಯ ಚಟುವಟಿಕೆಗಳಿಂದ ಕೂಡಿದುದರ ಪರಿಣಾಮವಾಗಿಯೇ ಗ್ರಾಮೀಣ ಯುವಕರ ಸಂಘಟನೆಗೆ ಆ ದೇಶಗಳಲ್ಲಿ ಚಲನೆ ದೊರೆತಿದೆ.

(3) ಈ ಸಂಘಟನೆಗೆ ಹಳ್ಳಿಗಳಿಂದ ರಾಷ್ಟ್ರದವರೆಗೂ ಮೇಲ್ವಿಚಾರಣೆ ಹಾಗೂ ಮಾರ್ಗದರ್ಶನಗಳ ಸರಪಳಿಯು ಜಾಲವೇ ಇದೆ.

(4) ಸರಕಾರಗಳ ಪ್ರೋತ್ಸಾಹ, ಮಾರ್ಗದರ್ಶನ ಹಾಗೂ ಉತ್ತೇಜನದಿಂದಲೇ ಆಯಾ ದೇಶಗಳಲ್ಲಿ ಯುವಕ ಸಂಘಟನೆ ಬೆಳೆದುಬಂದಿದೆ.

(5) ನಿರ್ದಿಷ್ಟ ಕಾರ್ಯ ಚಟುವಟಿಕೆಗಳಿದ್ದರೇನೇ ಸಂಘಗಳು ಮುಂದುವರಿಯಲು ಸಾಧ್ಯ ಎಂಬುದನ್ನು ಎಲ್ಲರೂ ಅರಿತಿದ್ದಾರೆ. ಈ ಸಂಘಗಳಲ್ಲಿನ ಯುವಕ ಮುಖಂಡತ್ವದ ಬೆಳವಣಿಗೆಗೆ ಸ್ಥಳೀಯ ಮುಖಂಡತ್ವವೇ ಪೋಷಣೆ ನೀಡಿದೆ.

(6) ಸ್ಥಳೀಯ ಮುಖಂಡರಿಗೆ ಹಾಗೂ ಯುವಕ ಮುಂದಾಳುಗಳಿಗೆ ತರಪೇತಿಯ ಆವಶ್ಯಕತೆಯನ್ನು ವಿವಿಧ ದೇಶಗಳಲ್ಲಿನ ಸಂಘಟನೆ ಎತ್ತಿ ತೋರಿಸಿದೆ.

(7) ಸಂಘದ ಸದಸ್ಯರುಗಳು ಉತ್ತಮವಾಗಿ ಕೆಲಸಮಾಡಿದ್ದಕ್ಕೆ ಪ್ರೋತ್ಸಾಹ ಹಾಗೂ ಬಹುಮಾನ ಕೊಡುವ ಸಂಪ್ರದಾಯ ಎಲ್ಲೆಡೆ ಕಂಡುಬರುತ್ತದೆ.

(8) ಈ ಸಂಘಗಳಿಗೆ ಬಹುಮಾನಗಳನ್ನು ಕೊಡಲು ಬೇಕಾದ ನೆರವಿನಲ್ಲಿ ಸರ್ಕಾರ ಮಾತ್ರ ಅಲ್ಲದೆ ಹಲವಾರು ಸಂಘ ಸಂಸ್ಥೆಗಳು ಪಾಲುಗೊಂಡಿರುವುದು ಈ ಸಂಘಟನೆಯ ಪ್ರಮುಖ ಅಂಶವಾಗಿದೆ.

(9) ಅಮೆರಿಕದ ಸಂಯುಕ್ತ ಸಂಸ್ಥಾನಗಳ ರಾಷ್ಟ್ರಾಧ್ಯಕ್ಷರು ತಮ್ಮ ಹೆಸರಿನಲ್ಲಿ 4–ಎಚ್ ಕ್ಲಬ್‌ನಲ್ಲಿ ಶ್ರೇಷ್ಠ ಕೆಲಸ ಮಾಡಿದ ಯುವಕ ಹಾಗೂ ಯುವತಿಗೆ ಪ್ರತಿವರ್ಷ ಬಹುಮಾನಕೊಡುವ ಸಂಪ್ರದಾಯ ಬೆಳೆಸಿಕೊಂಡಿದ್ದಾರೆ.

ಈ ಮೇಲೆ ಹೇಳಿದ ಅಂಶಗಳನ್ನು ಭಾರತೀಯ ಗ್ರಾಮೀಣ ಯುವಕ ಸಂಘಗಳ ಬೆಳವಣಿಗೆಯಲ್ಲಿ ಅಳವಡಿಸಿಕೊಂಡಾಗ ನಮ್ಮ ಯುವಕ ಸಂಘಟನೆಯೂ ಬಲಗೊಳ್ಳುವುದರಲಿ ಸಂದೇಹವಿಲ.

5. ಗ್ರಾಮೀಣ ಯುವಕರ ಕೆಲವು ಮನೋಬಯಕೆಗಳು ಹಾಗೂ ಅವುಗಳ ಸಿದ್ಧಿಗೆ ಸಂಘಟನೆ

ಗ್ರಾಮೀಣ ಯುವಕರ ಕಾರ್ಯಕ್ರಮಗಳಿಗೆ ಹೊಣೆಗಾರರಾದವರು ಗ್ರಾಮೀಣ ಯುವಕರ ಮನೋಭಾವ ಅರಿತುಕೊಳ್ಳುವುದು ಅವಶ್ಯವಿದೆ. ಯುವಕರ ಕಾರ್ಯಕ್ರಮಗಳ ಅಭಿವೃದ್ಧಿಗೆ ಯುವಕರ ಮನೋವೃತ್ತಿ, ಅಪೇಕ್ಷೆ, ದೃಷ್ಟಿಗಳನ್ನು ಬಹುವಾಗಿ ಗಮನಿಸಬೇಕು. ಯುವಕ ಕಾರ್ಯಕ್ರಮಗಳನ್ನು ಅಭಿವೃದ್ಧಿಗೊಳಿಸಿ ಸಂಘಗಳನ್ನು ಬಲಪಡಿಸುವವರು ಗ್ರಾಮೀಣ ಯುವಕರ ಮನೋಭಾವದ ಬಗೆಗೆ ಸಾಕಷ್ಟು ತಿಳಿವಳಿಕೆ, ಜ್ಞಾನ ಪಡೆಯಬೇಕಾದುದು ಅತ್ಯವಶ್ಯ.

ಗ್ರಾಮೀಣ ಯುವಕರ ಮನೋಭಾವ, ಅಪೇಕ್ಷೆಗಳನ್ನು ಹಿಂಜಿ ನೋಡಿದಾಗ ಕೆಳಗಿನ ಕೆಲವು ಸಂಗತಿಗಳ ಅರಿವಾಗದಿರದು :

(1) **ಒಡೆತನದ ಬಯಕೆ :** ಗ್ರಾಮೀಣ ಯುವಕರಲ್ಲಿ ಸ್ವಾಭಾವಿಕ ಮನೋವೃತ್ತಿಯಿದು. ಈ ಬಯಕೆಯನ್ನು ಈಡೇರಿಸಲು ವೈಯಕ್ತಿಕ ಮತ್ತು ಸಾಮೂಹಿಕ ಕಾರ್ಯಗಳನ್ನು ಹಮ್ಮಿ ಅವರಲ್ಲಿನ ಮಾಲೀಕತನದ ಬಯಕೆಗೆ ಪ್ರೋತ್ಸಾಹವೀಯಬೇಕು. ಕೆಲವನ್ನು ಇಲ್ಲಿ ಉದಾಹರಿಸಬಹುದು : (i) ಅವರ ಹಿತ್ತಲಿನಲ್ಲೇ ತರಕಾರಿ ತೋಟದ ಯೋಜನೆ ಒದಗಿಸುವಿಕೆ, (ii) ಅವರ ಮನೆಯಲ್ಲೇ ಕೋಳಿಗಳನ್ನು ಸಾಕಲು ವ್ಯವಸ್ಥೆಗೊಳಿಸುವಿಕೆ.

(2) **ಉತ್ಪಾದನಾಶಕ್ತಿ :** ಗ್ರಾಮೀಣ ಯುವಕರಲ್ಲಿ ಉತ್ಪಾದನೆ ಮಾಡಬೇಕೆಂಬ ಹುಟ್ಟುಗುಣ ಇರುತ್ತದೆ. ಅಂತೆಯೇ ಅವರನ್ನು ಉತ್ಪಾದನೆಯಕಾರ್ಯಗಳಲ್ಲಿ ತೊಡಗಿಸಿ ಈ ಗುಣ ಬೆಳೆಸಬಹುದು. ಕೆಲವನ್ನು ಇಲ್ಲಿ ಉದಾಹರಿಸಬಹುದು : (i) ಕುಶಲ ಕೈಗಾರಿಕೆ ವ್ಯವಸ್ಥೆ, (ii) ಮರಗೆಲಸಗಳಲ್ಲಿ ತೊಡಗಿಸುವಿಕೆ.

(3) **ಹೊಸ ಜ್ಞಾನಾರ್ಜನೆ ಆಸಕ್ತಿ :** ಗ್ರಾಮೀಣ ಯುವಕರಲ್ಲಿ ವೈಜ್ಞಾನಿಕ ಮನೋಭಾವ ಇದೆ. ಇದರಿಂದ ಹಲವಾರು ಆಧುನಿಕ ಕುಶಲತೆಗಳನ್ನು ಆಚರಣೆಗೆ ತರಲು ಅವರು ಸಾಕಷ್ಟು ಆಸಕ್ತಿವಹಿಸುತ್ತಾರೆ. ಕೆಲವನ್ನು ಇಲ್ಲಿ ಉದಾಹರಿಸಬಹುದು : (i) ಚೌಳು ಭೂಮಿ ಸುಧಾರಿಸುವಿಕೆ ವಿಧಾನ. (ii) ಪದರ ಪದರಗಳಲ್ಲಿ ಕಾಂಪೋಸ್ಟ್ ಗೊಬ್ಬರ ತಯಾರಿಸುವಿಕೆ.

(4) **ಆತ್ಮಾಶೆ ಹಾಗೂ ದುಂದುಗಾರಿಕೆ ಮನೋಭಾವ :** ಇವು ಯುವಕರಲ್ಲಿರುವ ಇಷ್ಟವಲ್ಲದ ಮನೋಭಾವಗಳು. ಅವರ ಯಾವುದೇ ಕಾರ್ಯರಂಗದಲ್ಲಿ ಹೆಚ್ಚು

ದುಂದುಗಾರಿಕೆ ಅಭ್ಯಾಸ ಇರಕೂಡದೆಂದು ಎಚ್ಚರಿಕೆ ನೀಡಬೇಕು. ಕೆಲವನ್ನು ಇಲ್ಲಿ ಉದಾಹರಿಸಬಹುದು : (i) ಅಸಾಧ್ಯವೆನಿಸಿದ ಪ್ರಮಾಣದಲ್ಲಿ ಬೆಳೆತೆಗೆಯಲು ಯುವಕನು ಆಶಿಸುವುದು, (ii) ಯಾವುದೊಂದು ಕಾರ್ಯಮಾಡುವಾಗ ಅನಾವಶ್ಯಕ ಶ್ರಮ ಅಥವಾ ಹಣ ಖರ್ಚು ಮಾಡುವಿಕೆ.

(5) **ಮನ್ನಣೆ ಪಡೆಯುವ ಹೆಮ್ಮೆಯ ಆಸೆ :** ಯುವಕರು ತಾವು ಮಾಡುವ ಕೆಲಸಗಳಲ್ಲಿ ಮನ್ನಣೆ ಪಡೆಯಬೇಕೆಂಬ ಆಶೆಯುವರಾಗಿರುತ್ತಾರೆ. ಅವರು ಕೈಕೊಳ್ಳುವ ಕೆಲಸಗಳಲ್ಲಿ ಮನ್ನಣೆಗೆ ನೀಡಲು ಕೆಲವು ಸಲಹೆಗಳು ಇಂತಿವೆ : (i) ಬಹುಮಾನ, ಬಿರುದಿನ ಬಿಲ್ಲೆ, ಹಾಗೂ ರಿಬ್ಬನ್‌ಗಳ ನೀಡುವಿಕೆ, (ii) ಶೈಕ್ಷಣಿಕ ಪ್ರವಾಸಗಳಲ್ಲಿ ಪ್ರವೇಶ ನೀಡುವಿಕೆ, (iii) ವಿದ್ಯಾರ್ಥಿ ವೇತನ ನೀಡುವಿಕೆ, (iv) ಪ್ರಮುಖ ಜನರಿಗೆ ಅವರ ಪರಿಚಯ ಮಾಡಿಕೊಡುವಿಕೆ.

(6) **ಆಟ ಪಾಟಗಳ ಪ್ರವೃತ್ತಿ :** ಚಿಕ್ಕ ವಯೋಗುಂಪಿನವರಿಗೆ ಆಟಪಾಟ ಮನರಂಜನಾ ಕಾರ್ಯ ಮತ್ತು ಕ್ರೀಡಾಕೂಟಗಳೆಂದರೆ ಇಷ್ಟ. ಅಂತೆಯೇ ಯುವಕರ ಕಾರ್ಯಕ್ರಮಗಳಲ್ಲಿ ಕಬಡ್ಡಿ. ಕೋಕೊ. ಸಾಂಸ್ಕೃತಿಕ ಕಾರ್ಯಕ್ರಮಗಳು ಇರುವುದು ಉಚಿತ.

(7) **ಹಿರಿಯರಿಂದ ದೂರವಿರುವ ಆತುರತೆ :** ಯುವಕರು ಹಿರಿಯರೊಂದಿಗೆ ಬೆರೆಯಲು ಇಚ್ಛಿಸುವುದಿಲ್ಲ. ಅಂತೆಯೇ ಹಿರಿಯರೊಡನೆ ತಿಕ್ಕಾಟ ನಡೆಯದಂತೆ ಎಚ್ಚರಿಕೆ ವಹಿಸಬೇಕು. ಸಂಘವನ್ನು ಜಯಪ್ರದವಾಗಿ ನಡೆಸಲು ಪೋಷಕರ ಮತ್ತು ಹಿರಿಯರ ಪಾತ್ರ ಮತ್ತು ಸಹಾನುಭೂತಿ ಪ್ರಧಾನವಾದುದೇನೋ ಸರಿ. ಆದರೆ ಅವರು ಹಿನ್ನೆಲೆಯಲ್ಲಿ ಇದ್ದು ಮಾರ್ಗದರ್ಶನ ಮಾತ್ರ ಮಾಡಬೇಕು.

ಗ್ರಾಮೀಣ ಯುವಕರ ಈ ಗುಣಗಳನ್ನು ಚೆನ್ನಾಗಿ ತಿಳಿದುಕೊಂಡು ಪ್ರಾರಂಭದಲ್ಲಿ ಕ್ರೀಡೆಗಳ ಮೂಲಕ ಯುವಕರನ್ನು ಆಕರ್ಷಿಸಿ ತದನಂತರ ಅವರನ್ನು ದುಡಿಮೆಯಲ್ಲಿ ತೊಡಗಿಸಿ ವ್ಯರ್ಥ ದುಡಿತದಲ್ಲಿ ಅವರ ಶಕ್ತಿ ಹ್ರಾಸಗೊಳಿಸದೆ ಯುವಕರ ಸಂಘಟನೆ ನಡೆಸಬೇಕು. ಸಂಘಟನೆ ಸಂಘಗಳ ಮುಖಾಂತರ ನಡೆಯಬೇಕು.

ಗ್ರಾಮೀಣ ಯುವಕ ಸಂಘಗಳ ಗುರಿ

ಗ್ರಾಮಜೀವನ ಉತ್ತಮಗೊಳಿಸಲು ಹಾಗೂ ಯುವಕರ ಮನೋಬಯಕೆಗಳನ್ನು ಈಡೇರಿಸಲು ಯುವಕರ ಶಕ್ತಿ ಬಳಸುವುದೇ ಯುವಕ ಸಂಘಗಳ ಮುಖ್ಯ ಗುರಿ.

ಗ್ರಾಮೀಣ ಯುವಕ ಸಂಘಗಳ ಉದ್ದೇಶಗಳು.

(1) ವ್ಯವಸಾಯ, ಗೃಹನಿರ್ವಹಣೆ ಮತ್ತು ಸಮಾಜ ಜೀವನಗಳ ಅಪೇಕ್ಷಿತ ಮಟ್ಟಗಳನ್ನು ಕಲಿಯಲು ಗ್ರಾಮೀಣ ಯುವಕರಿಗೆ ಅನುಕೂಲ ಏರ್ಪಡಿಸುವುದು.

(2) ದೇಶದ ಉತ್ತಮ ಪೌರನಾಗಲು ಯುವಕರಿಗೆ ನೆರವು ನೀಡುವುದು.

(3) ಗ್ರಾಮ, ರಾಜ್ಯ ಮತ್ತು ರಾಷ್ಟ್ರಕಾರ್ಯಗಳಲ್ಲಿ ಆಸಕ್ತಿ ಹೊಂದುವಂತೆ ಯುವಕರಿಗೆ ನೆರವಾಗುವುದು.

(4) ವ್ಯವಸ್ಥಿತ ಮತ್ತು ಪ್ರಜಾಪ್ರಭುತ್ವದ ತಳಹದಿ ಮೇಲೆ ಜೀವನ ನಡೆಯಿಸಲು ಯುವಕರಿಗೆ ನೆರವಾಗುವುದು.

(5) ಯುವಕರಿಗೆ ಮುಂದಾಳತ್ವ ಬೆಳೆಸಿಕೊಳ್ಳಲು ನೆರವಾಗುವುದು.

ಯುವಕ ಸಂಘಗಳು ಸಾಧಿಸಬೇಕಾದ ಅಂಶಗಳು

ಯುವಕ ಸಂಘಗಳು ಗ್ರಾಮ ಜೀವನದಲ್ಲಿ ಸಾಧಿಸಬಹುದಾದ ಹಲವು ಅಂಶಗಳಿವೆ. ಅವುಗಳಲ್ಲಿ ಮುಖ್ಯವಾದವು ಈ ಕೆಳಗಿನಂತಿವೆ :

(1) ಹಿರಿಯರ ಮನೋಭಾವ ಪರಿವರ್ತನೆಗೊಳಿಸಿ ಆಧುನಿಕ ಸಾಧನೆಗಳಲ್ಲಿ ಅವರು ನಂಬಿಕೆ ಹೊಂದಲು ಅವಕಾಶ ಕಲ್ಪಿಸುವಿಕೆ.

(2) ಚಿಕ್ಕಂದಿನಲ್ಲೇ ವಿಜ್ಞಾನಫಲಶೃತಿಗಳ ಕಡೆ ಗ್ರಾಮ ಯುವಕರ ಮನಸ್ಸೆಳೆದು ಅವರು ಪ್ರಾಯಕ್ಕೆ ಬಂದಾಗ ವೈಜ್ಞಾನಿಕ ಮನೋಭಿಲಾಷಿಗಳಾಗಲು ಅವಕಾಶ ಏರ್ಪಡಿಸುವಿಕೆ.

(3) ಸಮುದಾಯ ಯೋಜನೆ ಕಾರ್ಯ ಹಾಗೂ ಮನರಂಜನೆ ಚಟುವಟಿಕೆಗಳ ಸಹಕಾರ ಪ್ರವೃತ್ತಿ ಬೆಳವಣಿಗೆ, ತಾಳ್ಮೆ ಮತ್ತು ಸಾಮೂಹಿಕಾಭಿಪ್ರಾಯಗಳಲ್ಲಿ ಭಾಗವಹಿಸಲು ಯುವಕರಿಗೆ ಸೌಲಭ್ಯ ಒದಗಿಸಿಕೊಡುವಿಕೆ.

(4) ಪ್ರತಿಭಾವಂತ ಮುಂದಾಳುತನ ಸಾಧಿಸಿ ಬೌದ್ಧಿಕ ಕೌಶಲ್ಯ ಪಡೆಯುವ ಅವಕಾಶ ನಿರ್ಮಿಸುವಿಕೆ.

6. ಗ್ರಾಮೀಣ ಯುವಕ ಸಂಘಗಳ ಸ್ಥಾಪನೆ

ಸಂಘಟನೆ ಇಲ್ಲದ ಜನ ಅದು ಗುಂಪು. ಸಂಘಟಿಸಿದರೆ ಅದೇ ಸಮಾಜವಾಗುತ್ತದೆ. ಜನರ ಸಂಘಟನೆಮಾಡುವುದು ಸಾಮಾನ್ಯ ಕೆಲಸವಲ್ಲ. ಅದರಲ್ಲಿಯೂ ಯುವಕರ ಸಂಘಟನೆ ಅತಿ ಕಠಿಣ ಕೆಲಸ. ಯುವಕರನ್ನು ಸಂಘಟಿಸಲು ವ್ಯವಸ್ಥಿತ ಸಂಘಗಳನ್ನು ಏರ್ಪಡಿಸಬೇಕಾಗುತ್ತದೆ. ಯುವಕ ಸಂಘವನ್ನು ಸ್ಥಾಪಿಸಲು ಕೆಳಗಿನ ಕೆಲವು ಮೂಲ ತತ್ವಗಳನ್ನು ಗಮನದಲ್ಲಿಡಬೇಕು. ಅವುಗಳೆಂದರೆ :

(1) ಯುವಕ ಸಂಘಗಳ ಸದಸ್ಯತ್ವವು ಸಂಪೂರ್ಣ ಐಚ್ಛಿಕವಾಗಿದ್ದು ಯಾವುದೇ ಬಾಲಕ ಬಾಲಕಿಯರಿಗೆ ಸಂಘಗಳಿಗೆ ಸೇರುವ ಅವಕಾಶ ಇರಬೇಕು.

(2) ಯುವಕ ಸಂಘಗಳಲ್ಲಿ ಶೈಕ್ಷಣಿಕ ಧ್ಯೇಯ ಪ್ರಧಾನವಾಗಿರಬೇಕು ಅದರಲ್ಲಿ ಯೋಜಿಸಲಾದ ವಿವಿಧ ಕಾರ್ಯ ಚಟುವಟಿಕೆಗಳಿಂದ ಇದನ್ನು ಸಾಧಿಸಬೇಕು.

(3) ಯುವಕ ಸಂಘಗಳಲ್ಲಿ ಭಾಗವಹಿಸುವವರ ಮತ್ತು ಸಮಾಜದ ಹಿತಾಸಕ್ತಿಗಳನ್ನು ಪೂರೈಸುವಂತಹ ಚಟುವಟಿಕೆಗಳು ಅದರಲ್ಲಿರಬೇಕು.

(4) ಸಂಘದ ಪ್ರಾರಂಭಕ್ಕೆ ಮುನ್ನ ಸದಸ್ಯರಿಗೆ ಎಲ್ಲ ವಿವರಗಳನ್ನು ಪೂರೈಸುವ ವ್ಯವಸ್ಥೆಯಿರಬೇಕು.

ಸಂಘಗಳನ್ನು ಜಯಪ್ರದವಾಗಿ ನಡೆಸಲು ಸಂಘಟನಾಕೌಶಲ್ಯ ಮತ್ತು ನಿರ್ವಹಣಾಸಾಮರ್ಥ್ಯ ಅತಿ ಪ್ರಮುಖವಾದವು.

ಯುವಕ ಸಂಘ ಪ್ರಾರಂಭಿಸಲು ಅನುಸರಿಸಿದ ಪ್ರತಿಹಂತದ ವಿಧಾನಗಳು :

ಮೊದಲ ಹಂತ-ಅನೌಪಚಾರಿಕ ಗುಂಪುಗಳ ಸಂಪರ್ಕ : ಗ್ರಾಮೀಣ ಅನೌಪಚಾರಿಕ ಗುಂಪುಗಳಾದ ನಾಟಕ, ಕೋಲಾಟ, ಭಜನೆ, ವ್ಯಾಯಾಮ, ಯಕ್ಷಗಾನ, ಕ್ರೀಡಾಕೂಟಗಳ ಗುಂಪುಗಳೊಡನೆ ಸಂಪರ್ಕ ಪಡೆಯಬೇಕು.

ಅವಶ್ಯಕತೆ

(1) ಗ್ರಾಮದಲ್ಲಿ ಅಸ್ತಿತ್ವದಲ್ಲಿರುವ ಸಂಘಗಳಿಗೆ ಮಾನ್ಯತೆ ನೀಡುವುದು ಅನಿವಾರ್ಯ.

(2) ಆಯಾ ಸಂಘಗಳು ಈಗಾಗಲೇ ನಡೆಸಿಕೊಂಡು ಬರುತ್ತಿರುವ ಕಾರ್ಯಗಳನ್ನೇ ಮುಂದುವರಿಸಿಕೊಂಡು ಹೋಗುವ ಸಾಧ್ಯಾಸಾಧ್ಯತೆ ನಿರ್ಣಯಕ್ಕೆ ಅವಕಾಶ ಏರ್ಪಡುತ್ತದೆ.

(3) ಸಂಘಗಳನ್ನು ಬಲಪಡಿಸುವುದಕ್ಕೆ ಸ್ಫೂರ್ತಿದಾಯಕ ಮತ್ತು ದೃಢ ಸಂಕಲ್ಪವುಳ್ಳ ಸ್ಥಳೀಯ ಗುಂಪುಗಳು ಬಹುಮಟ್ಟಿಗೆ ಸಹಭಾಗಿಗಳಾಗುತ್ತವೆ.

(4) ಗ್ರಾಮ ಜನತೆಯ ಬೇಡಿಕೆಗಳೊಡನೆ ಹೊಂದಿಕೊಂಡು ಹೋಗಲು ದೃಢವಾದ ದೇಶ ಭಕ್ತಿ ಮತ್ತು ಶಿಸ್ತುಗಳನ್ನು ಈ ಸಂಘಗಳು ಕೆಲಮಟ್ಟಿಗೆ ಈಗಾಗಲೇ ಪಡೆದಿರುತ್ತವೆ.

(5) ವೈಯಕ್ತಿಕ ಪ್ರಯತ್ನಗಳಿಗಿಂತ ಸಾಮೂಹಿಕ ಪ್ರಯತ್ನಗಳು ಹೆಚ್ಚು ಫಲಪ್ರದಾಯಕಗಳಾಗಿರುತ್ತವೆ. ಅವುಗಳನ್ನು ಗುರುತಿಸುವುದು ಅವಶ್ಯ.

ಸಾಧನೆ

(1) ಅವರು ತಮ್ಮ ಕಾರ್ಯಕ್ರಮಗಳ ಚಟುವಟಿಕೆಗಳನ್ನು ನಡೆಸುವ ಕಾಲದಲ್ಲಿ ಅನೌಪಚಾರಿಕ ಸಂಪರ್ಕ ಬೆಳೆಸಬೇಕು.

(2) ಪ್ರಸ್ತುತ ಅವರು ನಡೆಸುವ ಚಟುವಟಿಕೆ ಕುರಿತು ಮಾತನಾಡಿ ಸ್ಥಾಪಿಸಲಿರುವ ಸಂಘದ ಚಟುವಟಿಕೆಗಳೊಡನೆ ಹೇಗೆ ಅವುಗಳ ಹೊಂದಾಣಿಕೆ ಮಾಡಬಹುದೆಂಬುದನ್ನು ವಿವರಿಸಬೇಕು.

(3) ಅನೌಪಚಾರಿಕ ಸಂಭಾಷಣೆಗಳ ಕಾಲದಲ್ಲಿ ಗ್ರಾಮಗಳಲ್ಲಿರುವ ಯುವಕರ ಮೇಲೆ ಪ್ರಭಾವ ಬೀರುವಂಥ ಯುವಕ ಸಕ್ರಿಯ ಸದಸ್ಯರು ಮತ್ತು ಮುಂದಾಳುಗಳನ್ನು ಗುರುತಿಸಬೇಕು.

(4) ಅನೌಪಚಾರಿಕ ಮತ್ತು ಸೌಹಾರ್ದಿಕ ಸಂಬಂಧ ಬೆಳೆಸಬೇಕು.

ಇತಿಮಿತಿ

(1) ಎಲ್ಲ ಗ್ರಾಮಗಳಲ್ಲಿ ಅನೌಪಚಾರಿಕ ಕೂಟಗಳು ಇರುವುದಿಲ್ಲ.

(2) ಗ್ರಾಮಗಳಲ್ಲಿ ಪಕ್ಷಭಾವನೆಯುಳ್ಳ ಪಂಗಡಗಳಿದ್ದಲ್ಲಿ ಈ ಕಾರ್ಯದ ಹಾದಿಯಲ್ಲಿ ಎಡರು ತೊಡರುಗಳುಂಟಾಗಬಹುದು.

(3) ಕಾರ್ಯಾಸಕ್ತಿಇಲ್ಲದ ಸಾಂಪ್ರದಾಯಿಕ ಮುಖಂಡರಿಂದ ಅಡ್ಡಿಯಾಗಬಹುದು.

ಎರಡನೆಯ ಹಂತ–ಪ್ರತಿ ಯುವಕ ಮತ್ತು ಅವರ ಮುಂದಾಳುಗಳೊಡನೆ ಅನೌಪಚಾರಿಕ ಸಂಪರ್ಕ

ಸಕ್ರಿಯ ಯುವಕರು ಮತ್ತು ಯುವಕ ಮುಂದಾಳುಗಳೊಡನೆ ಅನೌಪಚಾರಿಕ ಭೇಟಿ ಮಾಡಬೇಕು.

ಅವಶ್ಯಕತೆ

(1) ಪ್ರತಿ ಯುವಕ ಮತ್ತು ಅವರ ಮುಂದಾಳುಗಳನ್ನು ತಿಳಿಯಲು **ಸಹಕಾರಿ** ಯಾಗುವುದು.

(2) ಯುವಕ ಸಂಘಗಳ ಕಾರ್ಯಚಟುವಟಿಕೆ, ಉದ್ದೇಶ ಮತ್ತು **ಗುರಿಗಳ** ಮೇಲೆ ಪ್ರಭಾವ ಬೀರಲು ಸಹಾಯಕವಾಗುವುದು.

(3) ಸದಸ್ಯರ ಪ್ರತಿಕ್ರಿಯೆ ತಿಳಿಯಲು ಅವಕಾಶವಾಗುವುದು.

(4) ಮನವೊಲಿಸಲು ವ್ಯಕ್ತಿ ಸಂಪರ್ಕಗಳು ಫಲಪ್ರದವಾಗುವುದು.

(5) ಉತ್ತಮ ಯುವಕಮುಂದಾಳುಗಳನ್ನು ಆರಿಸಲು **ಸಹಾಯಕ** ವಾಗುವುದು.

(6) ಯುವಕರಲ್ಲಿ ಮತ್ತು ಮುಂದಾಳುಗಳಲ್ಲಿ ಆಸಕ್ತಿ ಬಲಪಡಿಸಲು **ಸಹಕಾರಿ** ಯಾಗುವುದು.

ಸಾಧನೆ

(1) ಯುವಕ ಸದಸ್ಯರನ್ನೂ ಮತ್ತು ಮುಂದಾಳುಗಳನ್ನೂ ಅವರ ಹೊಲ ಮನೆಗಳಲ್ಲಿ ಅವರು ಕೆಲಸಗಳಲ್ಲಿ ತೊಡಗಿರುವಾಗಲೇ ಸಂಪರ್ಕಮಾಡಬೇಕು.

(2) ಅನೌಪಚಾರಿಕ ಸಂಭಾಷಣೆ ಕಾಲಗಳಲ್ಲಿ ಗ್ರಾಮೀಣ ಯುವಕ ಸಂಘಗಳ ಅವಶ್ಯಕತೆಯನ್ನು ತಿಳಿಸಿ ಹೇಳಬೇಕು ಜೊತೆಗೆ ಉದ್ದೇಶಗಳನ್ನು ಮತ್ತು ಪ್ರಯೋಜನ ಗಳನ್ನು ವಿವರಿಸಬೇಕು.

(3) ಹೆಚ್ಚಾಗಿ ಸದಸ್ಯರನ್ನೇ ಮಾತನಾಡಲು ಪ್ರಚೋದಿಸಿ ಕೇಳಲು ಇಚ್ಛಿ ಪಟ್ಟಾಗ ಮಾತ್ರ ಸಲಹೆ ಕೊಡಬೇಕು.

ಇತಿಮಿತಿ

(1) ಗ್ರಾಮಗಳಲ್ಲಿ ಯುವಕ ಸದಸ್ಯರನ್ನೆಲ್ಲ ಸಂದರ್ಶಿಸುವುದಕ್ಕೆ ಆಗುವುದಿಲ್ಲ.

(2) ಕೆಲವು ವ್ಯಕ್ತಿಗಳನ್ನೇ ಕೇಂದ್ರೀಕರಿಸಿ ಭೇಟಿಮಾಡುವುದರಿಂದ ಮಿಕ್ಕ ಯುವಕರಲ್ಲಿ ವೈಷಮ್ಯ ತಲೆದೋರಬಹುದು.

ಮೂರನೇ ಹಂತ–ಪೋಷಕರೊಡನೆ ಮತ್ತು ಮುಂದಾಳುಗಳೊಡನೆ ಅನೌಪ ಚಾರಿಕ ಸಂಪರ್ಕ :

ಯುವಕರ ಪೋಷಕರು ಹಾಗೂ ಗ್ರಾಮದ ಹಿರಿಯ ಮುಂದಾಳುಗಳನ್ನು ಅನೌಪಚಾರಿಕವಾಗಿ ಕಂಡು ಮಾತನಾಡಬೇಕು.

ಆವಶ್ಯಕತ

(1) ಸಂಘದ ಕೆಲಸಕ್ಕೆ **ಪೋಷಕರ** ಸಹಾನುಭೂತಿ ಮತ್ತು ಬೆಂಬಲ ಪಡೆಯಲು ಸಹಾಯಕವಾಗುತ್ತದೆ.

(2) ಈ ಹೊಸದಾದ ಸಂಘದ ಸ್ಥಾಪನೆಯ ವಿಚಾರದಲ್ಲಿ ಪೋಷಕರ ಪ್ರತಿಕ್ರಿಯೆ ತಿಳಿಯಲು ಸಹಾಯಕವಾಗುತ್ತದೆ.

(3) ಯುವಕ ಮುಂದಾಳುಗಳ ಶಕ್ತಿ ಸಾಮರ್ಥ್ಯ ಮತ್ತು ಕಾರ್ಯ ತತ್ಪರತೆ ಕಂಡುಕೊಳ್ಳಲು ಸಹಾಯಕವಾಗುತ್ತದೆ.

(4) ಯುವಕ ಸಂಘಗಳ ಗುರಿ, ಉದ್ದೇಶ ಮತ್ತು ಪ್ರಯೋಜನಗಳನ್ನು ಪೋಷಕರು ಹಾಗೂ ಮುಂದಾಳುಗಳಿಗೆ ತಿಳಿಸಲು ಸಹಾಯಕವಾಗುತ್ತದೆ.

(5) ಹಿರಿಯರ ನಾಯಕತ್ವದ ಮಾರ್ಗದರ್ಶನ ಪಡೆಯಲು ಸಹಾಯಕವಾಗುತ್ತದೆ.

(6) ಪೋಷಕರ ಮತ್ತು ಹಿರಿಯ ನಾಯಕರ ಗೌರವಾದರಗಳನ್ನು ಹೆಚ್ಚಿಸಲು ಸಹಾಯಕವಾಗುತ್ತದೆ.

(7) ಯೋಜನೆಯ ಕೆಲಸ ಯಶಸ್ವಿಯಾಗಿ ನಡೆಸಲು ಪೋಷಕರ ಬೆಂಬಲ ಪ್ರಮುಖವಾಗಿರುತ್ತದೆ.

ಸಾಧನೆ

(1) ಹಲವು ಪೋಷಕ ಮತ್ತು ಹಿರಿಯ ಮುಖಂಡರನ್ನು ಕೆಲಸಮಾಡುವ ಸ್ಥಳಗಳಲ್ಲಿ ಅಥವಾ ಮನೆಗಳಲ್ಲಿ ಸಂಪರ್ಕ ಮಾಡಬೇಕು.

(2) ಸಂಪರ್ಕವು ಅನೌಪಚಾರಿಕ ಮತ್ತು ಸೌಹಾರ್ದಯುತವಾಗಿರಬೇಕು.

(3) ಸಂಘದ ಗುರಿ, ಉದ್ದೇಶಗಳು ಮತ್ತು ಪ್ರಯೋಜನಗಳನ್ನು ತಿಳಿಸಬೇಕು.

(4) ಗ್ರಾಮಗಳಲ್ಲಿ ಯುವಕ ಸಂಘಗಳ ಅವಶ್ಯಕತೆಗಳಿಗೆ ಮಾನ್ಯತೆಕೊಡಲು ಅನೌಪಚಾರಿಕ ಸಂಭಾಷಣೆ ಕಾಲಗಳಲ್ಲಿ ಸೂಚಿಸಬೇಕು.

(5) ರಚನಾತ್ಮಕ ಕಾರ್ಯಗಳಲ್ಲಿ ಯುವಕರು ಹೇಗೆ ಒಂದು ಗೂಡಬೇಕೆಂಬ ವಿಚಾರದಲ್ಲಿ ಪೋಷಕರ ಹಾಗೂ ಮುಂದಾಳುಗಳ ಅಭಿಪ್ರಾಯಗಳನ್ನು ಹೊರಗೆಡಬೇಕು.

(6) ಅಕ್ಕಪಕ್ಕಗಳಲ್ಲಿ ಯಾವುದಾದರೂ ಸಂಘಗಳಿದ್ದರೆ ಅವುಗಳ ಕಾರ್ಯ ಚಟುವಟಿಕೆಗಳ ಪರಿಚಯ ಮಾಡಿಕೊಡಬೇಕು.

ಇತಿಮಿತಿಗಳು

(1) ಎಲ್ಲ **ಪೋಷಕರು ಮತ್ತು ಮುಂದಾಳುಗಳನ್ನು** ವೈಯಕ್ತಿಕವಾಗಿ **ಕಾಣಲು** ಸಾಧ್ಯವಾಗುವುದಿಲ್ಲ.

(2) ಕಾರ್ಯತತ್ಪರತೆಯುಳ್ಳ ಹಿರಿಯಮುಂದಾಳುಗಳು ದೊರೆಯುವುದು ಬಹಳ ವಿರಳ.

(3) ಸ್ಥಳೀಯ ಮುಂದಾಳುಗಳು ತಮ್ಮ ಸ್ವಂತ ಲಾಭ, ಗೌರವಪ್ರತಿಷ್ಠೆಗಳಿಗಾಗಿ ಈ ಸಂಘ ಬಳಸಿಕೊಳ್ಳಬಹುದಾಗಿದೆ.

ನಾಲ್ಕನೇ ಹಂತ–ಗ್ರಾಮಗಳ ಸರ್ವ ಸಾಮಾನ್ಯ ಸಭೆ

ಗ್ರಾಮದ ಎಲ್ಲ ವರ್ಗದ ಜನ ಅಂದರೆ ಯುವಕರು, ಪೋಷಕರು, ಮುಂದಾಳುಗಳು, ಹೆಂಗಸರು ಮತ್ತು ಮಕ್ಕಳು ನಡೆಸುವ ಸಭೆ ಸರ್ವಸಾಧಾರಣ ಸಭೆ.

ಅವಶ್ಯಕತೆ

(1) ಇದರಿಂದ ಹೆಚ್ಚು ಸಂಖ್ಯೆಯಲ್ಲಿ ಜನರ ಸಂಪರ್ಕ ಪಡೆಯಲು ಸಹಕಾರಿಯಾಗುತ್ತದೆ.

(2) ಯುವಕ ಸಂಘ ಮುಂತಾದವುಗಳ ಅಗತ್ಯವನ್ನು ಗ್ರಾಮಸ್ಥರಿಗೆ ತಿಳಿವಳಿಕೆ ಮಾಡಿಕೊಡಲು ಸಹಕಾರಿಯಾಗುತ್ತದೆ.

(3) ಯುವಕ ಸಂಘದ ಚಳುವಳಿಯ ವಿಚಾರದಲ್ಲಿ ಜನರ ಪ್ರತಿಕ್ರಿಯೆಯನ್ನು ತಿಳಿಯಲು ಸಹಕಾರಿಯಾಗುತ್ತದೆ.

(4) ಸಂಘಕ್ಕೆ ಸಮಾಜದ ಬೆಂಬಲ ಪಡೆಯಲು ಸಹಕಾರಿಯಾಗುತ್ತದೆ.

(5) ಮುಂದಿನ ಸಭೆಯ ನಡವಳಿಕೆ ನಡೆಸುವ ದಿನಾಂಕ, ಸಾಮಾನ್ಯ ವಿವರಣೆಗಳ ಶೇಖರಣೆಗಳನ್ನು ಪ್ರಕಟಿಸಲು ಸಹಕಾರಿಯಾಗುತ್ತದೆ.

ಸಾಧನೆ

(1) ಸ್ಥಳೀಯ ಮುಂದಾಳುಗಳು, ಯುವಕರು ಮತ್ತು ಆ ಪ್ರದೇಶದ ಮೇಲ್ವಿಚಾರಣಾ ಸಿಬ್ಬಂದಿವರ್ಗಗಳೊಂದಿಗೆ ಸಮಾಲೋಚನೆಮಾಡಿ ಮುಂಚಿತವಾಗಿಯೇ ದಿನಾಂಕವನ್ನು ಗೊತ್ತುಪಡಿಸಬೇಕು.

(2) ಸ್ಥಳೀಯ ಮುಂದಾಳುಗಳ ಸಲಹೆ ಮೇರೆಗೆ ತಾತ್ಕಾಲಿಕ ಕಾರ್ಯಕ್ರಮ ತಯಾರಿಸಬೇಕು.

(3) ಮುಂಚಿತವಾಗಿಯೇ ಸಭೆ ನಡೆಸುವುದನ್ನು ಪ್ರಕಟಿಸಬೇಕು.

(4) ಆ ಪ್ರದೇಶದ ಕ್ಷೇತ್ರಾಭಿವೃದ್ಧಿ ಅಧಿಕಾರಿ, ಸಮಾಜ ಶಿಕ್ಷಣಾಧಿಕಾರಿ, ವ್ಯವಸಾಯ ವಿಸ್ತರಣಾಧಿಕಾರಿ ಮುಂತಾದವರ ಸಹಕಾರ ಪಡೆದು ಭಾಷಣಗಳನ್ನೇರ್ಪಡಿಸುವುದು ಉತ್ತಮ.

(5) ಸಭೆಯನ್ನು ರಾತ್ರಿ ವೇಳೆಯಲ್ಲಿ, ಗ್ರಾಮದ ಅನುಕೂಲವಾದ ಸ್ಥಳದಲ್ಲಿ ಏರ್ಪಡಿಸಬೇಕು.

(6) ವ್ಯವಸಾಯದ ಕೆಲಸಗಳ ಒತ್ತಡ ಕಡಮೆಯಿದ್ದ ಕಾಲಗಳಲ್ಲಿ ಅನುಕೂಲವಾದ ದಿನವನ್ನು ಗೊತ್ತುಪಡಿಸಿ ಸಭೆಯನ್ನು ನಡೆಸಬೇಕು.

(7) ಸಭೆಯ ಅಧ್ಯಕ್ಷತೆ ವಹಿಸಲು ಸ್ಥಳೀಯ ಮುಖಂಡರನ್ನೋ ಅಥವಾ ಪಂಚಾಯಿತಿ ಸದಸ್ಯರನ್ನೋ ಪರಿಸ್ಥಿತಿಗನುಗುಣವಾಗಿ ಗೊತ್ತುಪಡಿಸಬೇಕು.

(8) ಎಲ್ಲ ವರ್ಗದ ಜನರು ಭಾಗವಹಿಸಿ ಹಾಜರಾಗುವಂತೆ ವ್ಯವಸ್ಥೆ ಮಾಡಬೇಕು.

(9) ಸಭಿಕರಿಗೆ ವಿಷಯ ಪರಿಚಯ ಮಾಡಿಕೊಡುವ ಮುಂಚೆಯೇ ಚಲನಚಿತ್ರ ಪ್ರದರ್ಶನಗಳ ಮೂಲಕ ಯುವಕರ ಕಾರ್ಯಕ್ರಮಗಳು ಅಥವಾ ಮನರಂಜನೆಯ ಕಾರ್ಯಕ್ರಮಗಳ ಅಂಗವಾಗಿ ಕೋಲಾಟ, ಕವಾಲಿ ಇತ್ಯಾದಿಗಳನ್ನು ಏರ್ಪಡಿಸಬೇಕು.

(10) ಚಲನಚಿತ್ರ ಪ್ರದರ್ಶನ ಅಥವಾ ಮನರಂಜನಾ ಕಾರ್ಯಕ್ರಮಗಳ ಮಧ್ಯೆ ಕ್ಷೇತ್ರಸಿಬ್ಬಂದಿವರ್ಗದವರಿಂದ ಸಂಘಗಳ ರಚನೆ, ಗುರಿ, ಉದ್ದೇಶಗಳು ಮತ್ತು ಚಟುವಟಿಕೆಗಳ ವಿಚಾರಗಳನ್ನು ವಿವರಿಸಿ ತಿಳಿಸಬೇಕು.

(11) ಸಭಿಕರ ಮನೋಭಾವವನ್ನರಿತು ಅಭಿಮಾನ ಹುಟ್ಟಿಸುವ ಮತ್ತು ಕ್ರಿಯಾಸಕ್ತಿ ಕೆರಳಿಸುವಂತಹ ಸ್ಫೂರ್ತಿದಾಯಕ ಮನವಿಗಳನ್ನು ಉಪಯೋಗಿಸಬೇಕು.

(12) ಸಭೆಯ ಮುಕ್ತಾಯ ಸಮಯದಲ್ಲಿ ಸಂಬಂಧಪಟ್ಟ ಪ್ರಕಟಣಾಪಟ್ಟಿ ಅಥವಾ ಪತ್ರಗಳನ್ನು ಹಂಚಬೇಕು.

ಐದನೆ ಹಂತ–ವಿವರ ಸಂಗ್ರಹಣೆ

ಹತ್ತರಿಂದ ಇಪ್ಪತ್ತೊಂದು ವರ್ಷಗಳ ವಯೋಮಿತಿಯಲ್ಲಿರುವ ಯುವಕರ ವಿವರಗಳನ್ನು ಶೇಖರಿಸುವ ಕ್ರಮವಿದು.

ಅವಶ್ಯಕತೆ

(1) ಗ್ರಾಮಗಳಲ್ಲಿರುವ ಸದಸ್ಯಯೋಗ್ಯ ಯುವಕರ ಸಂಖ್ಯೆಯನ್ನು ಕಂಡುಹಿಡಿಯಲು ಸಹಕಾರಿಯಾಗುತ್ತದೆ.

(2) ಗ್ರಾಮದ ಎಲ್ಲ ಯುವಕರ ವ್ಯಕ್ತಿ ಪರಿಚಯಮಾಡಿಕೊಳ್ಳಲು ಸಹಕಾರಿಯಾಗುತ್ತದೆ.

(3) ಯುವಕ ಕಾರ್ಯಕ್ರಮಗಳ ಮೂಲಭೂತ ಸಿದ್ಧಾಂತಗಳನ್ನು ತಯಾರಿಸಲು ಸಹಕಾರಿಯಾಗುತ್ತದೆ.

(4) ಸಂಘಗಳಿಗೆ ಸೇರಲು ಮನಸ್ಸುಳ್ಳ ಯುವಕರ ಸಂಖ್ಯೆಯನ್ನು ತಿಳಿದುಕೊಳ್ಳಲು ಸಹಕಾರಿಯಾಗುತ್ತದೆ.

ಸಾಧನೆ

(1) ಉಪಭಾಗ ಹನ್ನೊಂದರಲ್ಲಿ ಕೊಟ್ಟಿರುವ ನಮೂನಾ ಪತ್ರಗಳನ್ನು ತರಿಸಿಕೊಂಡು ಪ್ರತಿ ಮನೆಗೂ ಭೇಟಿಕೊಟ್ಟು ನಮೂನಾ ಪತ್ರದಲ್ಲಿನ ಪ್ರತಿ ಅಂಕಿಯ ಪಂಕ್ತಿಯನ್ನು ಭರ್ತಿಮಾಡಬೇಕು.

(2) ಈ ಪತ್ರದಲ್ಲಿ ಬರೆಯುವುದನ್ನು ಪ್ರಾರಂಭಿಸುವುದಕ್ಕೆ ಮುಂಚೆ ಯುವಕರನ್ನು ಸಂದರ್ಶಿಸುವುದು ಬಹು ಮುಖ್ಯ.

(3) ಸಂಘಕ್ಕೆ ಸೇರಲು ಯುವಕರ ಸಮ್ಮತಿಯನ್ನು ತಿಳಿದುಕೊಳ್ಳಬೇಕು.

(4) ನಮೂನಾ ಪತ್ರದ ಪ್ರತಿ ಅಂಕಿಯ ಸಾಲನ್ನು ಯೋಗ್ಯವಾದ ರೀತಿಯಲ್ಲಿ ಭರ್ತಿ ಮಾಡಬೇಕು.

(5) ನಮೂನಾ ಪತ್ರದಲ್ಲಿ ಕಾಣಿಸಿರುವ ತಖ್ತೀಲುಗಳಲ್ಲದೆ, ಸಾಲಕೊಡುವ ಸಹಕಾರ ಸಂಸ್ಥೆ, ಶಾಲೆ, ಸಮಾಜ ಸೇವಾಕೇಂದ್ರಗಳ ವಿವರ ಕೂಡ ತಿಳಿದುಕೊಳ್ಳಬೇಕು.

ಇತಿಮಿತಿಗಳು

(1) ಈ ಕೆಲಸಕ್ಕೆ ಹೆಚ್ಚು ಕಾಲ ಹಿಡಿಯುತ್ತದೆ.

(2) ದೊಡ್ಡ ಗ್ರಾಮಗಳಲ್ಲಿ ಮತ್ತು ಮಲೆನಾಡಿನಲ್ಲಿ ಬಿಡಿಬಿಡಿಯಾಗಿ ದೂರದಲ್ಲಿರುವ ಮನೆಗಳಲ್ಲಿ, ಬೆಟ್ಟ ಪ್ರದೇಶಗಳಲ್ಲಿ ಈ ಕೆಲಸ ಕಷ್ಟಕರವಾದುದು.

(3) ಯುವಕರು ಅವರ ಮನೆಗಳಲ್ಲಿಲ್ಲದ ಪಕ್ಷಕ್ಕೆ ಅವರು ಸಿಗುವವರೆಗೂ ಆಗಾಗ್ಗೆ ಮನೆಗಳಿಗೆ ಪುನರ್‌ಭೆಟ್ಟಿಗಳನ್ನು ಕೊಡಬೇಕಾಗುವುದು.

(4) ಇದರ ಉದ್ದೇಶ, ಧ್ಯೇಯ ಹಾಗೂ ಚಟುವಟಿಕೆಗಳನ್ನು ಅನೇಕ ಸಾರಿ ಪುನಃ ಪುನಃ ವಿವರಿಸಿ ಹೇಳಬೇಕಾದ್ದರಿಂದಾಗಿ ವಿವರ ಶೇಖರಣೆಮಾಡುವ ವ್ಯಕ್ತಿ ಆಯಾಸದಿಂದ ಶಕ್ತಿಗುಂದಬೇಕಾಗುತ್ತದೆ.

ಆರನೆಯ ಹಂತ–ವಿವರಗಳ ಪರಿಶೀಲನೆ

ಸಾಮಾನ್ಯ ವಿವರಗಳ ಶೇಖರಣೆ ನಂತರ ವಿವರಣೆ ಮತ್ತು ಅವುಗಳ ಮೇಲಿನ ಟೀಕೆಗಳ ಪರಿಶೀಲನೆ ಮಾಡಬೇಕಾಗುತ್ತದೆ.

ಅವಶ್ಯಕತೆ

(1) ಗ್ರಾಮದ ಯುವಕರ ಒಟ್ಟು ಸಂಖ್ಯೆಯಲ್ಲಿ ಸಂಘಕ್ಕೆ ಸೇರಲು ಇಷ್ಟ ಪಟ್ಟಿರುವ ಯುವಕರ ಸಂಖ್ಯೆ ತಿಳಿಯಲು ಸಹಕಾರಿಯಾಗುತ್ತದೆ.

(2) ವೈಯಕ್ತಿಕ ಮತ್ತು ಸಾಮೂಹಿಕ ಯೋಜನೆಗಳ ಮಾದರಿಗಳನ್ನು ಅಪೇಕ್ಷಿಸುವರೆಂಬುದನ್ನು ತಿಳಿಯಲು ಸಹಕಾರಿಯಾಗುತ್ತದೆ.

(3) ಎಲ್ಲ ದೃಷ್ಟಿಗಳಲ್ಲೂ ಶೇಕಡಾವಾರು ವಿಂಗಡಿಸಿಕೊಳ್ಳಲು ಸಹಕಾರಿಯಾಗುತ್ತದೆ.

ಸಾಧನೆ

(1) ವಿಂಗಡಣೆಯನ್ನು ಅನುಕ್ರಮಗೊಳಿಸಿ ನಮೂದಿಸಬೇಕು.

(2) ವಿವರ ಹಾಗೂ ತಖ್ತೆಗಳು ಸಂಪೂರ್ಣವಾಗಿ ತಯಾರಾದ ಮೇಲೆ ಕ್ರಮವಾಗಿ ಅವುಗಳನ್ನು ಹೊಂದಿಸಬೇಕು.

ಏಳನೆಯ ಹಂತ–ಸಂಘಕ್ಕೆ ಸಕ್ರಿಯ ಸದಸ್ಯರ ಸಂಗ್ರಹಣೆ

ಸಂಘಕ್ಕೆ ಸಕ್ರಿಯ ಸದಸ್ಯರನ್ನು ಸೇರಿಸಿಕೊಳ್ಳುವ ಕ್ರಮವಿದು.

ಅವಶ್ಯಕತೆ

(1) ಸಂಘಕ್ಕೆ ಸಕ್ರಿಯ ಸದಸ್ಯರನ್ನು ದಾಖಲೆ ನಮೂನೆ ಮೂಲಕ ಸೇರಿಸಿಕೊಳ್ಳಲು ಸಹಕಾರಿಯಾಗುತ್ತದೆ.

(2) ಅವರು ವೈಯಕ್ತಿಕ ಕಾರ್ಯಚಟುವಟಿಕೆಯನ್ನು ಆರಿಸಿಕೊಳ್ಳಲು ಸಹಕಾರಿಯಾಗುತ್ತದೆ.

(3) ಸಂಘಕ್ಕೆ ಸೇರಲು ನಿರ್ಧರಿಸಿರುವವರ ಖಚಿತವಾದ ಸಂಖ್ಯೆ ತಿಳಿಯಲು ಸಹಕಾರಿಯಾಗುತ್ತದೆ.

(4) ಸಂಘಕ್ಕೆ ತಮ್ಮ ಮಕ್ಕಳನ್ನು ದಾಖಲೆ ಮಾಡಿಕೊಳ್ಳಲು ಅಂಗೀಕರಿಸಿರುವ ಪೋಷಕರನ್ನು ತಿಳಿದುಕೊಳ್ಳಲು ಸಹಕಾರಿಯಾಗುತ್ತದೆ.

ಸಾಧನೆ

(1) ಸೂಕ್ತವಾದ ದಾಖಲೆ ಪಟ್ಟಿಯ ನಮೂನೆ ಸಿದ್ಧಗೊಳಿಸಬೇಕು.

(2) ಸದಸ್ಯರನ್ನು ಇಪ್ಪತ್ತೈದು ಪೈಸೆ ಪ್ರವೇಶ ಶುಲ್ಕ ಪಡೆದು ದಾಖಲೆ ಪಟ್ಟಿಯಲ್ಲಿ ಸೇರಿಸಬೇಕು.

(3) ಪೋಷಕರ ಅನುಮತಿ ಪಡೆದು ಅವರ ಮಗ ಅಥವಾ ಮಗಳನ್ನು ದಾಖಲು ಮಾಡಬೇಕು.

(4) ನಮೂನೆ ಪಟ್ಟಿಯಲ್ಲಿರುವ ಇತರ ವಿವರಗಳನ್ನು ಎಚ್ಚರಿಕೆ ವಹಿಸಿ ಭರ್ತಿ ಮಾಡಬೇಕು.

ಇತಿಮಿತಿಗಳು

ಪೋಷಕರು ದಾಖಲೆ ಪಟ್ಟಿಗಳಿಗೆ ಸುಲಭವಾಗಿ ರುಜುಹಾಕುವುದಿಲ್ಲ.

ಎಂಟನೆಯ ಹಂತ–ಯುವಕ ಸಂಘದ ಸರ್ವ ಸದಸ್ಯರ ಪ್ರಥಮ ಸಭೆಯನ್ನು ಕೂಡಿಸುವಿಕೆ :

ಪೋಷಕರ ಅನುಮತಿ ಪಡೆದು ಸದಸ್ಯರಾಗಿರುವ ಎಲ್ಲ ಯುವಕರ ಸರ್ವ ಸದಸ್ಯರ ಪ್ರಥಮಸಭೆ ನೆರವೇರಿಸುವಿಕೆಯಿದು.

ಅವಶ್ಯಕತೆ

(1) ಸದಸ್ಯರಿಗೆ ಪ್ರಜಾಪ್ರಭುತ್ವಾಡಳಿತ ವಿಧಾನ ಹಾಗೂ ಚುನಾವಣೆಗಳಲ್ಲಿ ತರಬೇತಿಕೊಡಲು ಸಹಕಾರಿಯಾಗುತ್ತದೆ.

(2) ಪ್ರಜಾ ಪ್ರಭುತ್ವದ ವಿಧಿ ನಿಯಮಗಳನ್ನು ಅನುಕರಣೆಗೆ ತರಲು ಸಹ ಕಾರಿಯಾಗುತ್ತದೆ.

(3) ಚಾಲ್ತಿ ಸಾಲಿನ ಆಡಳಿತ ವರ್ಗದವರನ್ನು ಚುನಾಯಿಸಲು ಸಹಕಾರಿ ಯಾಗುತ್ತದೆ.

(4) ಸಂಘಕ್ಕೆ ಪ್ರಥಮ ಸಾಲಿನ ಸುಲಭವಾದ ಕಾರ್ಯಕ್ರಮವನ್ನು ತಯಾರಿಸಿ ಕೊಳ್ಳಲು ಸಹಕಾರಿಯಾಗುತ್ತದೆ.

(5) ಮುಂದಾಳುಗಳ ಚುನಾವಣೆ ಅಥವಾ ಆಯ್ಕೆಮಾಡಲು ಸಹಕಾರಿಯಾಗು ತ್ತದೆ.

ಸಾಧನೆ

(1) ಸರ್ವಸದಸ್ಯರ ಸಭೆ ನಡೆಯುವ ಸ್ಥಳ ವೇಳೆಯನ್ನು ಒಂದು ವಾರಕ್ಕೆ ಮುಂಚಿತವಾಗಿಯೇ ಪ್ರಕಟಿಸಬೇಕು.

(2) ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಲು ಗ್ರಾಮದ ಹಿರಿಯ ಮುಂದಾಳು ಅಥವಾ ಕ್ಷೇತ್ರಾಭಿವೃದ್ಧಿ ಅಧಿಕಾರಿ ಅಥವಾ ಮುಖ್ಯಸ್ಥರೊಬ್ಬರನ್ನು ಆರಿಸಿಕೊಳ್ಳಬೇಕು.

(3) ಅತಿಥಿಗಳು ಮತ್ತು ಸದಸ್ಯರನ್ನು ಸ್ವಾಗತಿಸಲು ಒಬ್ಬ ಯುವಕ ಸದಸ್ಯ ರನ್ನು ಗೊತ್ತುಪಡಿಸಬೇಕು.

(4) ಸರ್ವಸದಸ್ಯರ ಸಭೆಯ ಉದ್ದೇಶ, ಕಾರ್ಯಕ್ರಮ ಮತ್ತು ನಡವಳಿಕೆಗಳನ್ನು ವಿವರಿಸುವಂತೆ ಒಬ್ಬರಿಗೆ ವಹಿಸಬೇಕು.

(5) ಪ್ರತಿಯೊಬ್ಬ ಸದಸ್ಯನೂ ಎದ್ದು ನಿಂತು ತನ್ನ ಪರಿಚಯಮಾಡಿಕೊಡುವುದಲ್ಲದೆ ಚಾಲ್ತಿ ಸಾಲಿನ ತನ್ನ ವೈಯಕ್ತಿಕ ಕಾರ್ಯ ಚಟುವಟಿಕೆಗಳನ್ನು ಪರಿಚಯಮಾಡಿ ಕೊಡುವಂತೆ ತಿಳಿಸಬೇಕು.

(6) ನಿಬಂಧನೆಗಳ ಅಂಗೀಕಾರ ಮಾಡಬೇಕು. ನಿಬಂಧನೆಗಳ ಪ್ರತಿಯನ್ನು ಮೂರು ಬಾರಿ ಓದಿ ಬದಲಾವಣೆಗಳು ಬೇಕಾದಲ್ಲಿ ಸೇರಿಸಿ ಅಂಗೀಕರಿಸಬೇಕು. ನಿಬಂಧನೆಗಳ ಪ್ರತಿಯನ್ನು ಸಮಾಜ ಶಿಕ್ಷಣಾಧಿಕಾರಿ ಯುವಕ ರೈತರ ಸಮಾಜ ಅಥವಾ ವ್ಯವಸಾಯದ ಇಲಾಖೆಯಿಂದ ಮುಂಚಿತವಾಗಿಯೇ ತರಿಸಿ ಇಟ್ಟುಕೊಂಡಿರಬೇಕು.

(7) ಮುಂದಾಳುವಿನ ಚುನಾವಣೆ ಅಥವಾ ಆರಿಸುವಿಕೆ ನಡೆಸಬೇಕು.

(8) ಅಧಿಕಾರಿ ವರ್ಗದ ಚುನಾವಣೆ ನಡೆಸಬೇಕು.

(9) ಚಾಲ್ತಿ ಸಾಲಿನ ಸಾಮೂಹಿಕ ಕಾರ್ಯ ಚಟುವಟಿಕೆಗಳನ್ನು ಆರಿಸಿಕೊಳ್ಳಬೇಕು.

(10) ಚಾಲ್ತಿ ಸಾಲಿನ ಮುಖ್ಯ ಕಾರ್ಯಕ್ರಮಗಳನ್ನು ನಿರ್ಧರಿಸುವುದರಲ್ಲಿ ಅಂದರೆ ಗ್ರಾಮಗಳ ಸ್ಥಳೀಯ ಜಾತ್ರೆ, ರಾಷ್ಟ್ರೀಯ ಹಬ್ಬ ಮತ್ತು ರಾಷ್ಟ್ರೀಯ ದಿನಾಚರಣೆಗಳನ್ನು ಸೇರಿಸಬೇಕು.

(11) ಚುನಾಯಿತರಾದ ಕಾರ್ಯದರ್ಶಿಯು ವಂದನಾರ್ಪಣೆ ಮಾಡುವಂತೆ ಗೊತ್ತುಪಡಿಸಬೇಕು.

(12) ಎಲ್ಲರೂ ಹಿಂದಿರುಗುವುದಕ್ಕೆ ಮುಂಚೆ ಸಾಧ್ಯವಾದಷ್ಟು ಮಟ್ಟಿಗೂ ಹೆಚ್ಚು ಜನರನ್ನು ಸಂಧಿಸಿ ನಮಸ್ತೆ ಹೇಳಬೇಕು.

ಇತಿಮಿತಿಗಳು

(1) ಚುನಾವಣೆಗಳು ವೈಮನಸ್ಸುಗಳಿಗೆ ಅವಕಾಶ ಮಾಡಿಕೊಡಬಹುದು.

(2) ಯಾವಾಗಲೂ ಕಾರ್ಯಸಾಧಕರಾದ ಯುವಕ ಮುಂದಾಳುಗಳು ಸಿಕ್ಕುವುದು ಅತಿ ವಿರಳ.

ನಿಬಂಧನೆಗಳನ್ನು ರಚಿಸುವಿಕೆ

ಸಂಘಕ್ಕೆ ನಿಬಂಧನೆಗಳ ರಚನೆಮಾಡುವುದು ಬಹು ಮುಖ್ಯವಾದುದು. ನಿಬಂಧನೆಗಳು ಸಂಘವನ್ನು ಒಂದು ಕಾನೂನುಬದ್ಧವಾದ ಸಂಸ್ಥೆಯ ಸ್ಥಾನಗಳಿಸಲು ಸಹಾಯಕವಾಗುತ್ತವೆ. ನಿಬಂಧನೆಗಳ ರಚನೆಮಾಡಲು ಮಾರ್ಗದರ್ಶಕ ಅಂಶಗಳು ಮುಂದಿನ ಪುಟದಲ್ಲಿರುವಂತೆ ಇವೆ :

(1) ಸಂಘದ ಶಿರೋನಾಮ ಅಥವಾ ಹೆಸರು

(2) ಉದ್ದೇಶಗಳು

(3) ಕಛೇರಿಯ ಸ್ಥಳ ಮತ್ತು ವ್ಯವಹಾರರಂಗ

(4) ಸದಸ್ಯತ್ವ, ಸದಸ್ಯರಾಗಲು ಅರ್ಹತೆ

(5) ಆಡಳಿತ :

   (ಅ) ಕಾರ್ಯಕಾರಿ ಸಮಿತಿ

   (ಆ) ಆಡಳಿತವರ್ಗ

(6) ಸಭೆಗಳು

(7) ಆರ್ಥಿಕ ವ್ಯವಸ್ಥೆ

(8) ಕಾರ್ಯಚಟುವಟಿಕೆ

   (ಅ) ವೈಯಕ್ತಿಕ ಕಾರ್ಯಚಟುವಟಿಕೆ

   (ಆ) ಸಮುದಾಯ ಕಾರ್ಯಚಟುವಟಿಕೆ

ಪ್ರತಿ ರಾಷ್ಟ್ರ ಇಲ್ಲವೆ ಪ್ರತಿ ರಾಜ್ಯದಲ್ಲಿನ ಸಂಘಕ್ಕೆ ಏಕರೀತಿಯಾದ ನಿಬಂಧನೆಗಳನ್ನು ಇಟ್ಟುಕೊಳ್ಳುವುದು ಯಾವಾಗಲೂ ಉತ್ತಮ. ನಿಬಂಧನೆಗಳ ರಚನೆ ಸಂಘದ ಉದ್ದೇಶಗಳಿಗೆ ಸಂಬಂಧಪಟ್ಟವುಗಳಾಗಿರಬೇಕು (ಅನುಬಂಧ–1 ರಲ್ಲಿ ಒಂದು ಯುವಕ ರೈತ ಸಂಘದ ನಿಬಂಧನೆಗಳ ಮಾದರಿಯನ್ನು ಕೊಡಲಾಗಿದೆ).

ಕ್ರಮಬದ್ಧವಾದ ಸಭೆ ನಡೆಸುವಿಕೆ

ಸಭೆಗಳನ್ನು ಮೊದಲೇ ಯೋಜಿಸಿ ಮತ್ತು ಸದಸ್ಯರೆಲ್ಲ ಭಾಗವಹಿಸುವಂತೆ ನಡೆಸಿದ ಸಂಘದ ಸಭೆಗಳು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ. ಸದಸ್ಯರ ಬೇಡಿಕೆಗಳಿಗೆ ಮತ್ತು ವಯಸ್ಸುಗಳಿಗೆ ಸರಿಹೊಂದುವಹಾಗೆ ಸಭೆಗಳು ನಡೆಯಬೇಕು. ಸಭೆ ಪ್ರಾರಂಭವಾಗುವುದಕ್ಕೆ ಮುಂಚೆ ನಾಟಕ, ಕ್ರೀಡೆ ಅಥವಾ ಹಾಡುಗಳಿಂದ ಪ್ರಾರಂಭಿಸಿ ಸದಸ್ಯರ ಉತ್ಸಾಹವನ್ನು ಆಕರ್ಷಿಸಬೇಕು.

ಸಭೆಯು ವ್ಯಾವಹಾರಿಕವಾಗಿರಬೇಕು. ಸಭೆಯ ನಡವಳಿಕೆಗೆ ಆಜ್ಞೆಯು ಕರೆ ಕೊಟ್ಟೊಡನೆ ಸದಸ್ಯರೆಲ್ಲ ಎದ್ದುನಿಂತು ಯುವಕ ರೈತರ ಸಂಘದ ಧ್ಯೇಯ ವಾಕ್ಯವನ್ನು ಉಚ್ಚರಿಸಬೇಕು. ಕಾರ್ಯಚಟುವಟಿಕೆಗಳ ಚರ್ಚೆ ಅಥವಾ ಮನರಂಜನೆಯು ಸಭೆಗೆ ಜೀವಕಳೆ ಕೊಡುವಂತಹವುಗಳಾಗಿರಬೇಕು. ಸಭೆಯ ವ್ಯವಹಾರಗಳು ಸಾಧ್ಯವಾದ ಮಟ್ಟಿಗೂ ಸಕಾಲಕ್ಕೆ ಪ್ರಾರಂಭವಾಗಬೇಕು.

ಸಂಘದ ಕಾರ್ಯಕ್ರಮವನ್ನು ಒಂದು ವರ್ಷಕ್ಕೆ ತಯಾರಿಸಿಟ್ಟಿರಬೇಕು. ಸಂಘದ ಚಟುವಟಿಕೆಗಳು ವರ್ಷ ಪೂರ್ತಿ ನಡೆಸುವಂತೆ ರಚಿಸಲ್ಪಟ್ಟಿರಬೇಕು. ಸದಸ್ಯರ ಮುಂದಿಡಲು ಕಾರ್ಯಕ್ರಮವನ್ನು ಬಹುವಾಗಿ ಯೋಚಿಸಿ ಬರವಣಿಗೆಯ ಕೆಲಸವನ್ನೆಲ್ಲ ಮುಂದಾಗಿಯೇ ತಯಾರಿಸಿಟ್ಟಿರಬೇಕು. ಯೋಚಿಸಲ್ಪಟ್ಟ ಚಟುವಟಿಕೆಗಳಲ್ಲಿ ವೈಯಕ್ತಿಕ ಕಾರ್ಯಚಟುವಟಿಕೆ, ಸಾಮೂಹಿಕ ಚಟುವಟಿಕೆ ಹಾಗೂ ಮನರಂಜನೆ ಚಟುವಟಿಕೆಗಳೂ ಸೇರಿರಬೇಕು.

ಸಂಘದ ಸಭೆಗಳಲ್ಲಿ ಸದಸ್ಯರಿಗೆ ಮನರಂಜನೆಗಳಿಲ್ಲದೆ ಹೋದರೆ ಕಾರ್ಯರೂಪಗಳು ನಿರ್ಜೀವವಾಗಿ ನೀರಸವಾಗುತ್ತವೆ. ಆದುದರಿಂದ ಸಭೆ ನಡೆಯುವಾಗಲೆ ಮನರಂಜನೆಯ ವ್ಯವಸ್ಥೆಯಿರಬೇಕು.

ಸಭೆಗಳನ್ನು ಯಶಸ್ವಿಗೊಳಿಸಲು ಸಲಹೆಗಳು :

(1) ಸಭೆಗೆ ಮುಂಚಿತವಾಗಿ ಎಲ್ಲ ಸಿದ್ಧತೆಗಳನ್ನು ಪರಿಶೀಲಿಸಬೇಕು.

(2) ಸಭೆಯನ್ನು ಹೊಸ ಹೊಸ ಕಲ್ಪನೆಗಳಿಂದ ಕಳೆಕಟ್ಟುವಂತೆ ಮಾಡಬೇಕು.

(3) ಕಾರ್ಯಕ್ರಮಗಳು ಸಮಂಜಸವಾಗಿಯೂ ಮತ್ತು ಅಭಿರುಚಿಯುಳ್ಳದ್ದಾಗಿಯೂ ಇರಬೇಕು.

(4) ಸಭೆಯನ್ನು ಅನುಕೂಲವಾದ ಸ್ಥಳ ಮತ್ತು ಸಾಧ್ಯವಾದ ಮಟ್ಟಿಗೂ ಸಂಜೆ ಅಥವಾ ರಾತ್ರಿ ವೇಳೆ ನಡೆಸಬೇಕು.

(5) ಸದಸ್ಯರು ಮತ್ತು ಮುಂದಾಳುಗಳು ತಮ್ಮ ಕಾರ್ಯಕ್ರಮ ಮತ್ತು ಚಟುವಟಿಕೆಗಳನ್ನು ರಚಿಸಲು ಅವಕಾಶ ಕಲ್ಪಿಸಿಕೊಡಬೇಕು.

(6) ಸಭೆಗಳ ಕೆಲ ಅವಧಿ ಮನರಂಜನೆ ಕಾರ್ಯಗಳಿಂದ ಕೂಡಿರಬೇಕು.

(7) ವರ್ಷದ ಪ್ರಾರಂಭದಿಂದಲೇ ಸದಸ್ಯರಿಗೆ ಜವಾಬ್ದಾರಿ ವಹಿಸಲು ಪ್ರಾರಂಭಿಸಬೇಕು.

(8) ಸಾಧ್ಯವಾದ ಮಟ್ಟಿಗೂ ಸದಸ್ಯರನ್ನು ವೈಯಕ್ತಿಕವಾಗಿ ಸಭೆಯ ಪ್ರಾರಂಭದಲ್ಲಿ ಮತ್ತು ಮುಕ್ತಾಯವಾದ ಮೇಲೆ ಸಂದರ್ಶಿಸಬೇಕು.

7. ಗ್ರಾಮೀಣ ಯುವಕ ಸಂಘಗಳ ಅಭಿವೃದ್ಧಿ

'ದುಡಿಮೆಯಿಂದ ಜ್ಞಾನಾರ್ಜನೆ ಮತ್ತು ಜ್ಞಾನಾರ್ಜನೆಯಿಂದ ಧನಾರ್ಜನೆ' ಈ ಮೂಲತತ್ವ ತಳಹದಿಯ ಮೇಲೆ ಯುವಕರ ಕಾರ್ಯಕ್ರಮಗಳು ಬೆಳೆಯಬೇಕು. ಯುವಕ ಕಾರ್ಯಕ್ರಮಗಳ ಬೆಳವಣಿಗೆಯು ಉಚಿತ ಕಾರ್ಯಚಟುವಟಿಕೆಗಳ ಆಯ್ಕೆಯನ್ನೇ ಆಧರಿಸಿದೆ. ಈ ಚಟುವಟಿಕೆಗಳು ಪ್ರತಿಯೊಬ್ಬ ಸದಸ್ಯರ ವ್ಯಕ್ತಿತ್ವ, ಮುಂದಾಳುತನ ಹಾಗೂ ಪೌರತ್ವದ ಅರಿವುಗಳನ್ನು ಮೂಡಿಸಲು ನೆರವಾಗಬೇಕು. ವೈಯಕ್ತಿಕ ಮತ್ತು ಸಮುದಾಯ ಕಾರ್ಯಚಟುವಟಿಕೆಗಳ ಸಮತೂಕ ಹೊಂದಾಣಿಕೆ ಈ ಕಾರ್ಯ ಸಾಧನೆಗೆ ಅವಶ್ಯವಿದೆ.

(ಅ) **ಕಾರ್ಯಚಟುವಟಿಕೆಗಳು (ಪ್ರಾಜೆಕ್ಟ್ಸ್) :**

ಕಾರ್ಯಚಟುವಟಿಕೆ ಅಂದರೆ ಒಂದು ನಿರ್ದಿಷ್ಟವಾದ ಕೆಲಸವನ್ನು ಒಬ್ಬ ಅಥವಾ ಅನೇಕ ಸದಸ್ಯರು ತಮ್ಮ ಸ್ವಂತ ಜವಾಬ್ದಾರಿಗಳ ಮೇಲೆ ತಮ್ಮ ಮನೆ, ಜಮೀನು ಅಥವಾ ಗ್ರಾಮದಲ್ಲಿ ಕೈಮುಟ್ಟಿ ಮಾಡತಕ್ಕ ಕೆಲಸ. ಇವುಗಳಲ್ಲಿ ಮುಖ್ಯವಾಗಿ ಎರಡು ಬಗೆ—ವೈಯಕ್ತಿಕ ಹಾಗೂ ಸಮುದಾಯ ಕಾರ್ಯಚಟುವಟಿಕೆಗಳು.

(ಆ) **ವೈಯಕ್ತಿಕ ಕಾರ್ಯಚಟುವಟಿಕೆಗಳು :**

ಸಂಘದ ಸದಸ್ಯರು ಕೈಗೊಂಡ ಕಾರ್ಯಚಟುವಟಿಕೆಯನ್ನು ತನ್ನ ಸ್ವಂತ ಜವಾಬ್ದಾರಿಯಲ್ಲಿಯೇ ಮಾಡಿ ಪೂರೈಸುವುದು ವೈಯಕ್ತಿಕ ಕಾರ್ಯಚಟುವಟಿಕೆ. ಇದು ಸದಸ್ಯರಲ್ಲಿ ಮತ್ತು ಅವರ ಪೋಷಕರಲ್ಲಿ ಆತ್ಮವಿಶ್ವಾಸ ಬೆಳೆಸಿಕೊಳ್ಳಲು ಸಹಕಾರಿಯಾಗುತ್ತದೆ.

ಸಂಘದ ಸದಸ್ಯರು ಕೈಗೊಳ್ಳಬಹುದಾದ ಕೆಲವು ವೈಯಕ್ತಿಕ ಕಾರ್ಯಚಟುವಟಿಕೆಗಳು ಈ ಕೆಳಗಿನಂತಿವೆ :

(1) **ಆರ್ಥಿಕ ಕಾರ್ಯಚಟುವಟಿಕೆಗಳು**

(i) ಬೆಳೆ ಬೆಳೆಯುವಿಕೆ - ಜೋಳ, ರಾಗಿ, ಬತ್ತ ಇತ್ಯಾದಿ

(ii) ಕೈತೋಟಗಾರಿಕೆ

(iii) ಕಾಂಪೋಸ್ಟ್ ಗೊಬ್ಬರ ತಯಾರಿಕೆ

(iv) ಕೋಳಿ ಸಾಕಣೆ

(v) ಕುರಿ ಪೋಷಣೆ

(vi) ಹಾಲು ಉತ್ಪಾದನೆ
(vii) ಕಸೂತಿ ಕೆಲಸ
(viii) ನೂಲು ತೆಗೆಯುವಿಕೆ
(ix) ಬಟ್ಟೆ ಹೊಲಿಗೆ
(x) ಸಣ್ಣ ಉಳಿತಾಯ

(2) ಇತರ ಕಾರ್ಯಚಟುವಟಿಕೆಗಳು :

(i) 'ಗೃಹಾಲಂಕಾರ
(ii) ಅಲಂಕಾರ ತೋಟಗಾರಿಕೆ
(iii) ಅಂಚೆ ಚೀಟಿ ಶೇಖರಣೆ

(೩) ಗುಂಪಿನ ಕಾರ್ಯಚಟುವಟಿಕೆಗಳು

ಸಂಘದ ಸದಸ್ಯರೆಲ್ಲರು ಅಥವಾ ಹಲವಾರು ಜನರು ಸೇರಿ ಕೈಗೊಳ್ಳುವ ದುಡಿಮೆಯ ಕಾರ್ಯಚಟುವಟಿಕೆಗಳನ್ನು ಗುಂಪಿನ ಇಲ್ಲವೆ ಸಮುದಾಯ ಕಾರ್ಯಚಟುವಟಿಕೆಗಳೆಂದು ಕರೆಯುತ್ತಾರೆ. ಇವು ಒಗ್ಗಟ್ಟಿನ ದುಡಿಮೆ ಮತ್ತು ಸಹಕಾರ ಬಾಳ್ವಿಕೆ ನಡೆಸಲು ಸದಸ್ಯರಿಗೆ ಸಹಾಯಕವಾಗುತ್ತವೆ. ಸಂಘದ ಸದಸ್ಯರು ಕೈಗೊಳ್ಳಬಹುದಾದ ಕೆಲವು ಸಮುದಾಯ ಕಾರ್ಯಚಟುವಟಿಕೆಗಳು ಈ ಕೆಳಗಿನಂತಿವೆ :

(1) ಆರ್ಥಿಕ ಕಾರ್ಯಚಟುವಟಿಕೆಗಳು

(i) ಕೈತೋಟಗಾರಿಕೆ
(ii) ಮರಗಳ ಬೆಳೆಸುವಿಕೆ
(iii) ಮೀನುಗಾರಿಕೆ
(iv) ನೂಲುವಿಕೆ
(v) ಆಹಾರ ಸಂರಕ್ಷಣೆ
(vi) ಕೋಳಿ ಸಾಕಣೆ

(2) ಸಮಾಜ ಸೇವಾ ಕಾರ್ಯಚಟುವಟಿಕೆಗಳು

(i) ಗ್ರಾಮ ನಿರ್ಮಲೀಕರಣ
(ii) ರಸ್ತೆಗಳ ನಿರ್ಮಾಣ
(iii) ಆಂದೋಲನ ನಡೆಸುವಿಕೆ
(iv) ಪ್ರದರ್ಶನ ಏರ್ಪಡಿಸುವಿಕೆ
(v) ಸಮಾಜ ಕೇಂದ್ರಗಳ ನಿರ್ಮಾಣ

(3) ಮನರಂಜನೆ ಕಾರ್ಯಚಟುವಟಿಕೆಗಳು

(i) ನಾಟಕ
(ii) ಕುಣಿತ
(iii) ವಿನೋದ ಕ್ರೀಡೆ ಇತ್ಯಾದಿ

(ಈ) ಕಾರ್ಯಚಟುವಟಿಕೆ ಸ್ವರೂಪ :

ಕಾರ್ಯಚಟುವಟಿಕೆಗಳು

(1) ಕುಶಲತೆ, ಮನೋಭಾವ ಮತ್ತು ತಿಳುವಳಿಕೆಗಳನ್ನು ಉತ್ತಮಪಡಿಸುವಂತಿರಬೇಕು ;

(2) ಸದಸ್ಯರ ಅಭಿರುಚಿ ಮತ್ತು ಬೇಡಿಕೆಗಳನ್ನವಲಂಬಿಸಿರಬೇಕು ;

(3) ಸದಸ್ಯರ ಸಾಧ್ಯಾಸಾಧ್ಯತೆಗಳ ಅಳವಿನಲ್ಲಿರಬೇಕು ;

(4) ಪ್ರೋಷಕರ ಮತ್ತು ಸಮಾಜದ ಬೆಂಬಲ ಪಡೆದಿರಬೇಕು ;

(5) ಉತ್ತೇಜನದಾಯಕ, ಆರ್ಥಿಕ ವರಮಾನ ಮತ್ತು ಸಂತೃಪ್ತಿ ಕೊಡತಕ್ಕಂತೆ ಇರಬೇಕು :

(6) ಸಂಪದ್ಯುಕ್ತ ಜ್ಞಾನಾನುಭವ ನೀಡುವವುಗಳಾಗಿರಬೇಕು.

ಕಾರ್ಯಕ್ರಮಗಳ ರಚನೆ ಹಾಗೂ ನಿರ್ವಹಣೆ

ಕಾರ್ಯಕ್ರಮಗಳ ರಚನೆ ಸಕಾಲದಲ್ಲಿ, ಯೋಜನಾಬದ್ಧವಾಗಿ ನಡೆಯಬೇಕು ಹಾಗೂ ಅವುಗಳ ನಿರ್ವಹಣೆ ದಕ್ಷತೆಯಿಂದ ನಡೆಯಬೇಕು. ಈ ದಿಶೆಯಲ್ಲಿ ಕೆಳಗಿನ ಅಂಶಗಳು ಗಮನಾರ್ಹವಾಗಿವೆ :

(1) ಋತುಗಳ ಪರಿಸ್ಥಿತಿಗಳನ್ನು ಗಮನದಲ್ಲಿ ಇಟ್ಟುಕೊಂಡು ಕಾಲಕ್ಕೆ ಮುಂಚಿತವಾಗಿಯೇ ಯೋಚಿಸಿ ಕಾರ್ಯಕ್ರಮ ರಚನೆ ನಡೆಯಬೇಕು.

(2) ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ಮುಂದಿನ ವರ್ಷದ ಸಂಪೂರ್ಣ ಕಾರ್ಯಕ್ರಮ ಮಂಡಿಸಿ, ಒಪ್ಪಿಗೆ ಪಡೆಯಬೇಕು.

(3) ಪ್ರತಿ ಸದಸ್ಯರಿಗೂ ನಿರ್ದಿಷ್ಟವಾದ ವೈಯಕ್ತಿಕ ಕಾರ್ಯಚಟುವಟಿಕೆಗಳ ಪೂರ್ಣ ವಿವರಣೆಗಳನ್ನು ಮೊದಲೇ ಕೊಡಬೇಕು.

(4) ವಾರ್ಷಿಕ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಉತ್ಸವ, ಗ್ರಾಮದ ಉತ್ಸವ, ಶೈಕ್ಷಣಿಕ ಪ್ರವಾಸ, ಮಹತ್ಕಾರ್ಯಗಳ ದಿನಾಚರಣೆ, ಯುವಕ ಮೇಳ ಇತ್ಯಾದಿಗಳು ಒಳಗೊಂಡಿರಬೇಕು.

(5) ಕಾರ್ಯಕಾರೀ ಸಭೆಗಳನ್ನು ನಿಯಮಗಳಂತೆ ಕಾಲಕ್ಕೆ ಸರಿಯಾಗಿ ನಡೆಸಿ ಕಾರ್ಯಕ್ರಮದಲ್ಲಿರುವ ಕೆಲಸಗಳನ್ನು ಒಂದೊಂದಾಗಿ ಪೂರೈಸಬೇಕು.

ಕಾರ್ಯಭಾಗಿ ಯುವಕ ಮುಂದಾಳುಗಳನ್ನು ಗೊತ್ತುಮಾಡಿ, ತರಬೇತು ಮತ್ತು ಪ್ರೋತ್ಸಾಹ ನೀಡುವಿಕೆ

ಬಹು ಭಾಗ ಜನತೆ ಮತ್ತು ಯುವಕರು ಆನುವಂಶಿಕವಾಗಿ ಅನುಯಾಯಿ (ಒಬ್ಬರನ್ನು ಹಿಂಬಾಲಿಸುವ) ಗುಣವುಳ್ಳವರೇ ಆಗಿರುತ್ತಾರೆ. ಮಾರ್ಗದರ್ಶಕ ಗುಣಗಳುಳ್ಳವರು ಮುಂದಾಳುಗಳು. ಅಂಥವರು ಅತಿ ವಿರಳ. ಏಲ್ಲೋ ನೂರಕ್ಕೊಬ್ಬರು ; ಸಾವಿರಕ್ಕೊಬ್ಬರು. ಅವರನ್ನು ಗುರುತಿಸುವುದು ಅವಶ್ಯ. ಗ್ರಾಮಸೇವಕನೊಬ್ಬನೇ ಸಂಘದ ಮಾರ್ಗದರ್ಶಕನಾಗಿರಲು ಸಾಧ್ಯವಿಲ್ಲ. ಆದ್ದರಿಂದ ಬೇರೆ ಮುಂದಾಳು ಸಂಘಕ್ಕೆ ಅತ್ಯಗತ್ಯ. ಪ್ರಾರಂಭದ ಹಂತಗಳಲ್ಲಿ ಸಂಘಕ್ಕೆ ಅಧಿಕಾರೇತರ ಮುಂದಾಳು ದೊರೆಯುವ ತನಕ ಗ್ರಾಮಸೇವಕನೇ ಮಾರ್ಗದರ್ಶಕನಾಗಿರಬೇಕು. ಯುವಕರ ಮನೋಧರ್ಮವನ್ನು ಚೆನ್ನಾಗಿ ತಿಳಿದುಕೊಂಡಿರುವ ಸಮರ್ಥ ವ್ಯಕ್ತಿಯನ್ನು ಸಂಘದ ಮುಂದಾಳನ್ನಾಗಿ ಆರಿಸಿಕೊಳ್ಳುವುದರ ಮೇಲೆ ಸಂಘದ ಯಶಸ್ಸು ಅವಲಂಬಿಸಿರುತ್ತದೆ.

ಮುಂದಾಳುವಿನ ಸಾಮರ್ಥ್ಯ ಹಾಗೂ ಜವಾಬ್ದಾರಿಗಳು

(1) ಸಂಘಕ್ಕೆ ಸದಸ್ಯರನ್ನು ದಾಖಲು ಮಾಡಬೇಕಾಗಬಹುದು.

(2) ಪೋಷಕರ ಮತ್ತು ಹಿರಿಯರ ಆಸಕ್ತಿ ಮತ್ತು ಸಹಕಾರ ಸಂಪಾದಿಸಬೇಕಾಗಬಹುದು.

(3) ಕಾರ್ಯಯೋಜನೆಗಳನ್ನು ಆರಿಸಿಕೊಳ್ಳುವಂತೆ ಸದಸ್ಯರಿಗೆ ತಿಳುವಳಿ ಕೊಡಬೇಕಾಗಿಬರಬಹುದು.

(4) ಸದಸ್ಯರ ಕಾರ್ಯಚಟುವಟಿಕೆಗಳಿಗೆ ಅವಶ್ಯಕವಾದ ಕುಶಲತೆ ತಿಳಿಸಿ ಅವುಗಳ ಮೌಲ್ಯಮಾಪನ ಮಾಡುವ ಸಾಮರ್ಥ್ಯ ಪಡೆದವನಾಗಿರಬೇಕಾಗುತ್ತದೆ.

(5) ಎಲ್ಲ ಸಭೆಗಳಲ್ಲಿ ದಕ್ಷತೆಯಿಂದ ಭಾಗವಹಿಸಿ ಸದಸ್ಯರಿಗೆ ಸದಾ ತಿಳುವಳಿಕೆ ನೀಡುವ ಸಾಮರ್ಥ್ಯ ಪಡೆದಿರಬೇಕಾಗುತ್ತದೆ.

(6) ಕೇಂದ್ರ ಸಂಸ್ಥೆಗೆ ವರದಿಗಳನ್ನು ಕಳುಹಿಸಲು ಏರ್ಪಾಡು ಮಾಡುವುದು ಮತ್ತು ಸದಸ್ಯರಿಗೆ ಬಿರುದುಗಳನ್ನು ತರಿಸಿಕೊಡಬೇಕಾಗಬಹುದು.

(7) ಪೋಷಕರ ಮತ್ತು ಇತರ ಮುಂದಾಳುಗಳ ಮನಸ್ಸಿನಲ್ಲಿ ಯುವಕ ಚಳುವಳಿಯ ಬಗ್ಗೆ ಸ್ಥಾನ ಮತ್ತು ಗೌರವ ಮೂಡಿಸುವ ಸಾಮರ್ಥ್ಯ ಪಡೆದವನಾಗಿರಬೇಕು.

(8) ಸಂಘಗಳು ಸುಗಮವಾಗಿ ನಡೆಯುವಂತೆ ಎಲ್ಲ ವಿಧಗಗಳಲ್ಲಿ ವ್ಯವಸ್ಥೆ ನಡೆಸಿ ಮಾರ್ಗದರ್ಶನಕ್ಕೆ ಸಹಾಯ ಮಾಡಬೇಕಾಗಬಹುದು.

ಮುಂದಾಳುಗಳ ತರಬೇತು

ಮೇಲಿನ ವಿವಿಧ ಜವಾಬ್ದಾರಿಗಳನ್ನು ವಹಿಸಿಕೊಳ್ಳಲು ಸಾಮರ್ಥ್ಯತೆಯುಳ್ಳ ಸರಿಯಾದ ಮುಂದಾಳು ಸಿಕ್ಕುವುದು ಬಹಳ ಕಷ್ಟ. ಆದರೆ ಸರಿಯಾದ ತರಬೇತಿ ಮತ್ತು ಮಾರ್ಗದರ್ಶನಗಳಿಂದ ಅನೇಕರನ್ನು ಮುಂದಾಳುಗಳಾಗಿ ಸಿದ್ಧಗೊಳಿಸಬಹುದಾಗಿದೆ. ಆದ್ದರಿಂದ ಮುಂದಾಳುಗಳ ತರಬೇತಿಗೆ ಬಹಳ ಪ್ರಾಮುಖ್ಯವಾದ ಮಹತ್ವವಿದೆ.

ಸಂಘದ ಮುಂದಾಳು ಯಶಸ್ವಿಯಾಗಿ ಮುಂದುವರಿಯಲು, ಬೆಳೆಯುತ್ತಿರುವ ಯುವಕರನ್ನು ಅರ್ಥಮಾಡಿಕೊಳ್ಳಬೇಕಾದುದು ಅತ್ಯಾವಶ್ಯಕ. ಸದಸ್ಯರಿಗೆ ಅವರ ಕಾರ್ಯಚಟುವಟಿಕೆಗಳ ಮಾರ್ಗದರ್ಶನ ನೀಡಲು ಮುಂದಾಳು ಅನೇಕ ವಿಷಯಗಳನ್ನು ಸಾಕಷ್ಟು ತಿಳಿದಿರಬೇಕು. ಮುಂದಾಳು, ಸಂಸ್ಥೆಯ ವಿವರಗಳನ್ನೆಲ್ಲ ಅರಿತು ಕಾರ್ಯಕ್ರಮ ಸರಿಯಾಗಿ ನಡೆಸಿಕೊಂಡು ಹೋಗಬೇಕು. ಮುಂದಾಳುಗಳ ಉತ್ತಮ ತರಬೇತಿಯು, ಸಂಘದ ಧ್ಯೇಯ, ಧೋರಣೆ, ಗುರಿ, ಕಾರ್ಯಾನುಷ್ಠಾನಗಳಿಗುಣವಾಗಿ ನಡೆಯುತ್ತದೆ.

ಕಾರ್ಯಭಾಗಿಗಳಾದ ಯುವಕರ ಆಸಕ್ತಿಗಳನ್ನು ಉಳಿಸಿಕೊಂಡು ಬರುವುದು ಬಹು ಮುಖ್ಯವಾದ ವಿಷಯ. ಮುಂದಾಳುಗಳಿಗೆ ಅವರ ಕೆಲಸಗಳಿಗಾಗಿ ಸಾರ್ವಜನಿಕ ಮಾನ್ಯತೆ ಹಾಗೂ ಪ್ರೋತ್ಸಾಹ ದೊರೆತರೆ ಅವರು ಉತ್ಸಾಹದಿಂದ ಸಂಘಕ್ಕೆ ಬಹು ಪರಿಯ ಸಹಾಯ ಮಾಡಲು ಶಕ್ತಿ ಪಡೆಯುತ್ತಾರೆ. ಯುವಕ ಮುಂದಾಳುಗಳನ್ನು ಪ್ರಾದೇಶಿಕ ಮಟ್ಟದ ಪ್ರಮುಖ ಸಭೆಗಳಿಗೆ ಆಹ್ವಾನಿಸಿ ಸ್ಥಳೀಯ ಅಧಿಕಾರಿಗಳನ್ನು ಸಂದರ್ಶಿಸಲು ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಅವರ ಕೆಲಸಗಳಿಗೆ ಆಗಾಗ ಅಭಿನಂದನೆಗಳನ್ನೂ ಅರ್ಪಿಸಬೇಕು.

ಸಂಘದ ಚಟುವಟಿಕೆಗಳ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ

ಯುವಕ ಸಂಘಗಳ ಕಾರ್ಯ ಬಹುಕಾಲ ಮುಂದುವರಿಯಬೇಕಾದರೆ ಸಂಘದ ಚಟುವಟಿಕೆಗಳಿಗೆ ಸರಿಯಾದ ಮಾರ್ಗದರ್ಶನ ಸದಾಕಾಲ ಇರಬೇಕಾಗುತ್ತದೆ. ಸಂಘದ ಮುಖಂಡ ಹಾಗೂ ಗ್ರಾಮಸೇವಕರ ಮಾರ್ಗದರ್ಶನ ಎರಡೂ ಅವಶ್ಯ. ಅದೂ ಅಲ್ಲದೆ. ಅಭಿವೃದ್ಧಿ ಕ್ಷೇತ್ರದ ವಿಸ್ತರಣಾಧಿಕಾರಿಗಳು. ಅತಿ ಮುಖ್ಯವಾಗಿ ವ್ಯವಸಾಯ ವಿಸ್ತರಣಾಧಿಕಾರಿ ಮತ್ತು ಸಮಾಜಶಿಕ್ಷಣ ವ್ಯವಸ್ಥಾಪಕರಿಂದ ಮಾರ್ಗದರ್ಶನ ದೊರೆಯಬೇಕು. ಕ್ಷೇತ್ರಾಭಿವೃದ್ಧಿ ಅಧಿಕಾರಿಯೂ ಸಹ ಸಂಘಕ್ಕೆ ಆಗಾಗ ಭೇಟಿ ಕೊಟ್ಟು ಎಲ್ಲ ಸಂದರ್ಭಗಳಲ್ಲಿ ಕಾರ್ಯಕ್ರಮಗಳ ಬಗ್ಗೆ ತಿಳುವಳಿಕೆ ಕೊಟ್ಟು, ಮುಖಂಡ ಮತ್ತು ಸದಸ್ಯರನ್ನು ಪ್ರೇರೇಪಿಸಬೇಕು.

ದಾಖಲೆಗಳು, ಅವುಗಳ ಪ್ರಾಮುಖ್ಯತೆ ಮತ್ತು ಸುರಕ್ಷಣೆ

ಸಂಘದ ಚಟುವಟಿಕೆಗಳ ಮತ್ತು ವೈಯಕ್ತಿಕ ಸದಸ್ಯರ ವಿವರಗಳ ದಾಖಲೆ ಸಂಘದಲ್ಲಿ ಇಡುವುದು ಮುಖ್ಯ. ಸಂಘದ ದಾಖಲೆಗಳು ಈ ಕೆಳಕಂಡ ಉದ್ದೇಶಗಳಿಗೆ ಉಪಯೋಗವಾಗುತ್ತವೆ :

(1) ಮುಂದಿನ ಕಾರ್ಯಕ್ರಮ ಸಿದ್ಧತೆಗೆ ಸಮಾಚಾರ ಮೂಲಗಳನ್ನು ಒದಗಿಸುತ್ತವೆ.

(2) ವೈಜ್ಞಾನಿಕ ಪದ್ಧತಿಗಳನ್ನು ತಿಳಿಯಲು ಸಹಾಯಕವಾಗುತ್ತವೆ.

(3) ಸಂಘ ತಯಾರಿಸಿದ ಕಾರ್ಯಕ್ರಮವನ್ನು ಇತರರಿಗೆ ತೋರಿಸಲು ಸಹಕಾರಿಯಾಗುತ್ತವೆ.

(4) ನಿರ್ವಹಿಸಿದ ಕಾರ್ಯಕಲಾಪಗಳ ವಿವರ, ಇತರರಿಗೆ ತೋರಿಸಲು ಸಹಕಾರಿಯಾಗುತ್ತವೆ.

(5) ಸಂಘ ಏರ್ಪಡಿಸುವ ಸ್ಪರ್ಧೆಗಳಿಗೆ ಅವಶ್ಯಕವಾದ ಮೂಲ ವಿವರಗಳನ್ನು ಒದಗಿಸುತ್ತವೆ.

ಈ ದಾಖಲೆಗಳು ಸರಳವಾಗಿರಬೇಕು. ಇವುಗಳನ್ನು ಇಡುವುದರಲ್ಲಿ ಕಾಲಹರಣ ಆಗಬಾರದು. ಕೆಲವು ಕಾರ್ಯಚಟುವಟಿಕೆ ವಿವರಗಳನ್ನು ದಾಖಲೆ ಮಾಡುವ ಕಾಲದಲ್ಲಿ ಅವು ಪ್ರಾರಂಭಗೊಂಡಂದಿನಿಂದ ಮೊದಲಾಗಿ ಪೂರೈಸಿದವರೆಗೂ ತಪ್ಪೇಲು, ವಿಮರ್ಶೆ, ಸದಸ್ಯರು ವಹಿಸಿದ ಆಸಕ್ತಿ ಮುಂತಾದ ವಿವರಗಳೆಲ್ಲವೂ ಇರಬೇಕು.

ಸಂಘಕ್ಕೆ ಬೇಕಾದ ನಿಧಿ, ಸಲಕರಣೆ ಮತ್ತು ಇನ್ನಿತರ ಸಹಾಯಗಳನ್ನು ಪಡೆಯುವ ವಿಧಾನಗಳು :

ನಿಧಿ ಶೇಖರಣೆ : ಯುವಕ ಸಂಘಗಳಿಗೆ ಸರಕಾರವು ಕ್ಷೇತ್ರಾಭಿವೃದ್ಧಿ ಮಂಡಳಿಯ ಮುಖಾಂತರ ಧನ ಸಹಾಯ ಮಾಡುತ್ತದೆ. ಆದರೆ ಕ್ಷೇತ್ರಾಭಿವೃದ್ಧಿಯ ಸಮಾಜ ಶಿಕ್ಷಣ ಕಾರ್ಯಕ್ರಮಗಳಿಗೆ ಅತ್ಯಲ್ಪ ಹಣ ಹಂಚಿಕೆ ಆಗಿರುವುದರಿಂದ ಸಂಘಗಳಿಗೆ ಬೇಕಾದ ಹಣವನ್ನು ಸಾರ್ವಜನಿಕರಿಂದ ಅಥವಾ ಸದಸ್ಯರಿಂದಲೂ ಶೇಖರಿಸಬೇಕು.

ಶೇಖರಣೆಯ ನಿಧಿಯ ಮೂಲಗಳು

(1) ಸದಸ್ಯರಿಂದ ಚಂದಾ ಹಣ

(2) ಸಾರ್ವಜನಿಕರು ಅಥವಾ ಸದಸ್ಯರಿಂದ ದಾನ

(3) ಅಭಿವೃದ್ಧಿ ಕ್ಷೇತ್ರದಿಂದ ಸಹಾಯ ಧನ

(4) ಕಾರ್ಯಚಟುವಟಿಕೆಗಳಿಂದ ಬಂದ ಆದಾಯದಲ್ಲಿನ ಸ್ವಲ್ಪ ಭಾಗ

(5) ಸದಸ್ಯರ ವೈಯಕ್ತಿಕ ಸಹಾಯ ಹಣ

(6) ಸಾಮೂಹಿಕ ಸ್ಪರ್ಧೆಗಳಿಂದ ದೊರಕಿದ ಹಣ

ಸಾಧನಸಲಕರಣೆಗಳು

ಕ್ಷೇತ್ರಾಭಿವೃದ್ಧಿ ಕೇಂದ್ರಗಳು ಪ್ರಾತ್ಯಕ್ಷಿಕೆ ಕೈಗೊಳ್ಳಲು ಹಾಗೂ ಪ್ರದರ್ಶನ ಏರ್ಪಡಿಸಲು ಸಿಂಪರಣೆ ಹಾಗೂ ಧೂಳಿಸುವ ಸಾಧನಸಲಕರಣೆ ಇತ್ಯಾದಿ ಉಪಕರಣ ಗಳನ್ನು ಒದಗಿಸಿರುತ್ತಾರೆ. ಅವುಗಳನ್ನು ಗ್ರಾಮಸೇವಕರಿಂದ ಪಡೆದು ಪ್ರಾರಂಭದಲ್ಲಿ ಉಪಯೋಗಿಸಬಹುದು. ಸದಸ್ಯರು ತಮ್ಮ ಇಂತಹ ಸಾಧನಸಲಕರಣೆಗಳನ್ನು ವೈಯಕ್ತಿಕ ಅಥವಾ ಸಮುದಾಯ ಕಾರ್ಯಚಟುವಟಿಕೆಗಳಿಗೆ ಅವಶ್ಯಬಿದ್ದಾಗ ತಂದು ಉಪಯೋಗಿಸಬಹುದು. ನಂತರ ಸಂಘದ ಆರ್ಥಿಕ ಸ್ಥಿತಿ ಸುಧಾರಿಸಿದಂತೆ ತನಗೆ ಬೇಕಾದ ಎಲ್ಲ ಉಪಕರಣಗಳನ್ನು ಕೊಂಡುಕೊಳ್ಳಬಹುದು.

ಸರಬರಾಜು ಮತ್ತು ಸೇವೆಗಳು

ತರಕಾರಿ ಬೀಜ. ಹಣ್ಣಿನ ಸಸಿಗಳು, ಕೀಟನಾಶಕ ಔಷಧಿಗಳೇ ಮೊದಲಾದ ಆವಶ್ಯಕ ವಸ್ತುಗಳ ಸರಬರಾಜನ್ನು ಸಂಘದ ಮುಂದಾಳು ವ್ಯವಸ್ಥೆ ಮಾಡಬೇಕು. ಗ್ರಾಮಸೇವಕ ಅವರಿಗೆ ಈ ಕಾರ್ಯದಲ್ಲಿ ನೆರವೀಯಬೇಕು.

ಗ್ರಾಮೀಣ ಯುವಕ ಸಂಘಗಳ ಕಾರ್ಯ ಕಲಾಪಗಳನ್ನು ನಡೆಸಲು ಉಪಯುಕ್ತವಾದ ಕೆಲವು ಶಿಕ್ಷಣ ಸಾಧನೆಗಳು

ಯುವಕ ಕಾರ್ಯಕ್ರಮಗಳನ್ನು ನಡೆಯಿಸಲು ಉಪಯುಕ್ತವಾದ ಸಾಹಿತ್ಯ ಮತ್ತು ಶಿಕ್ಷಣ ಸಾಧನೆಗಳು ಗ್ರಾಮಸೇವಕರಿಗೂ ಮತ್ತು ಸಂಘಗಳಿಗೂ ಅಗತ್ಯವಾಗಿವೆ. ಈ ಸಾಹಿತ್ಯ ಸರಳವಾಗಿ ಆಕರ್ಷಕವಾಗಿ ಹಾಗೂ ಅರ್ಥವಾಗುವಂತೆ ಇರಬೇಕು. ಅದ ರಂತೆ ಹಲವಾರು ದೃಕ್ ಶ್ರವಣ ಶಿಕ್ಷಣ ಸಾಧನೆಗಳನ್ನು ಗ್ರಾಮಗಳಲ್ಲಿ ಯುವಕ ಕಾರ್ಯ ಕ್ರಮಗಳನ್ನು ಫಲಪ್ರದವಾಗಿ ಕಾರ್ಯಗತ ಮಾಡಲು ಬಳಸಬಹುದು. ಅವುಗಳಲ್ಲಿ ಕೆಲವನ್ನು ರಾಷ್ಟ್ರೀಯ ವಿಸ್ತರಣ ಯೋಜನೆ, ತಾಲ್ಲೂಕು ಅಭಿವೃದ್ಧಿ ಮಂಡಳಿ ಅಥವಾ ರಾಜ್ಯ ಯುವಕ ರೈತರ ಸಂಸ್ಥೆಗಳು ಪೂರೈಸಬಹುದು. ಮಿಕ್ಕವನ್ನು ಆಯಾ ಸಂಘ ಗಳೇ ದೊರಕಿಸಿಕೊಳ್ಳಬೇಕಾಗುತ್ತದೆ.

ಕರಪತ್ರ. ಪ್ರಚಾರ ಪತ್ರ, ಉಣ್ಣೆಬಟ್ಟೆಯ ಪಟ (ಫ್ಲಾನೆಲ್ ಗ್ರಾಫ್). ಛಾಯಾ ಚಿತ್ರ ಹಾಗೂ ಚಲನಚಿತ್ರ ಮುಂತಾದ ಕೆಲವು, ಯುವಕ ರೈತ ಸಂಘಗಳಿಗೆ ಬೇಕಾಗುವ ಶಿಕ್ಷಣ ಸಾಧನಗಳು.

(1) ಕರಪತ್ರಗಳು

ಕರಪತ್ರಗಳು ಸಂಘದ ನಿಬಂಧನೆ, ಬೆಳೆ ಅಥವಾ ಪಶುಪಾಲನೆ ವಿಚಾರ, ಯುವಕ ರೈತರ ಮಂಡಳಿಗಳ ಉದ್ದೇಶ, ಯುವಕ ಸಮ್ಮೇಳನ, ಯುವಕ ಶಿಬಿರ ಇತ್ಯಾದಿ ವಿಷಯಗಳ ಬಗೆಗೆ ಮಾಹಿತಿಗಳನ್ನು ಒಳಗೊಂಡಿರುತ್ತವೆ.

(2) ಪ್ರಚಾರ ಪುಸ್ತಕಗಳು

ಸಂಘದ ಪ್ರತಿಜ್ಞೆ, ಸಂಘದ ಧ್ಯೇಯ, ಸಂಘ ಸ್ಥಾಪನೆಯ ಹಂತ, ನಾಗರಿಕನ ಹಕ್ಕುಬಾಧ್ಯತೆ ಇತ್ಯಾದಿ ವಿಷಯಗಳನ್ನು ಬಳಸಿಕೊಂಡ ಚಿಕ್ಕ ಪುಸ್ತಕಗಳಿವು.

(3) ಉಣ್ಣೆ ಬಟ್ಟೆಯ ಪಟ (ಫ್ಲ್ಯಾನೆಲ್ ಗ್ರಾಫ್)

ವಿಸ್ತರಣ ಸಾಧನೆಯ ಯುವಕ. ರೈತ ಪ್ರಯೋಜನಗಳ ಸಾರ ಇತ್ಯಾದಿ ಯುವಕ ಸಂಘಗಳಿಗೆ ಸಂಬಂಧಪಟ್ಟ ಕತೆಗಳ ರೂಪದಲ್ಲಿರುವ ಆಲೇಖನಾ ಚಿತ್ರ ಸಮುದಾಯಗಳಿವು. ಉರುಟು ಪರದೆಯೊಂದು ಇರುತ್ತದೆ. ಅದರ ಮೇಲೆ ಕ್ರಮಬದ್ಧವಾಗಿ ಚಿತ್ರಗಳನ್ನು ಅಂಟಿಸಿ ಯುವಕರಿಗೆ ದೃಶ್ಯಕಥಾ ರೂಪದಲ್ಲಿ ಶಿಕ್ಷಣ ಕೊಡಬಹುದು.

(4) ಛಾಯಾ ಚಿತ್ರಗಳು

ಯುವಕ ಸಂಘಗಳ ರೂಪಗಳನ್ನು ವಿವರಿಸುವ ಹಲವಾರು ಛಾಯಾಚಿತ್ರಗಳು ಸದಸ್ಯರ ಆಸಕ್ತಿ ಕೆರಳಿಸಲು ಉಪಯುಕ್ತವಾಗುತ್ತವೆ.

(5) ಚಲನಚಿತ್ರಗಳು

ಯುವಕ ಸಂಘಗಳ ಕಾರ್ಯಗಳಿಗೆ ಸಂಬಂಧಪಟ್ಟ ಚಲನಚಿತ್ರಗಳು ಸದಸ್ಯರಿಗೆ ಮನರಂಜನೆಯೊಂದಿಗೆ, ಹೊಸ ವಿಷಯ ತಿಳಿಸಲು, ಕುಶಲತೆಗಳನ್ನು ಕಲಿಸಲು ನೆರವಾಗುತ್ತವೆ.

8. ಗ್ರಾಮೀಣ ಯುವಕ ಸಂಘಗಳಿಗೆ ಉತ್ತೇಜನ ಹಾಗೂ ಮಾನ್ಯತೆ

ಭಾರತದಲ್ಲಿ ಗ್ರಾಮೀಣ ಯುವಕ ಕಾರ್ಯಕ್ರಮಗಳು ಮುಟ್ಟಬೇಕಾದ ಮಟ್ಟವನ್ನು ಇನ್ನೂ ಮುಟ್ಟಿಲ್ಲ. ಗ್ರಾಮೀಣ ಯುವಕರು ಜಯಪ್ರದರಾದ ನಾಗರೀಕರಾಗಲು ಫಲಪ್ರದ ಅವಕಾಶಗಳನ್ನು ಒದಗಿಸಬೇಕು. ಶಕ್ತಿಸಂಪನ್ನರಾದ ಆದರ್ಶ ಯುವಕರೇ ರಾಷ್ಟ್ರದ ವ್ಯವಸಾಯದಲ್ಲಿ ಹೆಚ್ಚಳ ಮತ್ತು ಸಮಾಜದ ಅಭಿವೃದ್ಧಿ ಈಡೇರಿಸಬಲ್ಲರು.

ಗ್ರಾಮೀಣ ಯುವಕ ಸಂಸ್ಥೆಗಳ ಚಟುವಟಿಕೆಗಳಲ್ಲಿ ನಿರತರಾದ ಯುವಕರಿಗೆ ಸೂಕ್ತವಾದ ಮನ್ನಣೆ ಮತ್ತು ಉತ್ತೇಜನಗಳನ್ನು ಕೊಡುವುದು ಅವಶ್ಯವಿದೆ. ಇದನ್ನೇ ಗ್ರಾಮೀಣ ಯುವಕ ಕಾರ್ಯಕ್ರಮಗಳ ಯಶಸ್ಸು ಅವಲಂಬಿಸಿದೆ. ಸಂಘದ ಕಾರ್ಯಕ್ರಮದಲ್ಲಿ ಆಸಕ್ತಿ ನೆಲೆ ನಿಲ್ಲಲು, ಉತ್ತೇಜನ ಮತ್ತು ಬಹುಮಾನಗಳು, ಬಹು ಪ್ರಧಾನ ಪಾತ್ರವಹಿಸುತ್ತವೆ. ಈ ಉತ್ತೇಜನ ಮತ್ತು ಮಾನ್ಯತೆಗಳು ಯುವಕರನ್ನು ಒಳ್ಳೆಯ ಕೆಲಸಗಳನ್ನು ಮಾಡಲು ಪ್ರೇರೇಪಿಸುತ್ತವೆ. ಸಂಘದ ಸದಸ್ಯರಿಗೆ ಮಾನ್ಯತೆ ನೀಡಲು ಅನೇಕ ಮಾರ್ಗಗಳಿವೆ. ಮುಂದೆ ವಿವರಿಸಿರುವ ಕೆಲವು ಕ್ರಮಗಳು ಸದಸ್ಯರಲ್ಲಿ ಹೆಚ್ಚಿನ ಅಭಿರುಚಿಯನ್ನು ಹುಟ್ಟಿಸಲು ಪ್ರಯೋಜನಕಾರಿಗಳಾಗಬಹುದು.

(1) ಗ್ರಾಮಮಟ್ಟದ ಸ್ಪರ್ಧೆ ಮತ್ತು ಮೇಳಗಳ ಏರ್ಪಾಡು

ಗ್ರಾಮಮಟ್ಟದಲ್ಲಿ ಯುವಕ ಸಂಘಗಳ ನಡುವೆ ಸ್ಪರ್ಧೆಗಳನ್ನು ಮತ್ತು ಮೇಳಗಳನ್ನು ನಡೆಸುವುದರಿಂದ ವೈಯಕ್ತಿಕ ಮತ್ತು ಸಮುದಾಯ ಕಾರ್ಯಚಟುವಟಿಕೆಗಳನ್ನು ಬೆಳೆಸಲು ಹಿತಕರವಾದ ಉತ್ಸಾಹವನ್ನು ಮೂಡಿಸಬಹುದು.

(ಅ) ಸ್ಪರ್ಧೆಗಳು : ಸದಸ್ಯರು ತಮ್ಮ ಉತ್ಪಾದನೆಗಳನ್ನು ಸ್ಪರ್ಧೆಗಳಲ್ಲಿ ಪ್ರದರ್ಶಿಸುತ್ತಾರೆ. ಆಗ ಅನುಭವಗಳ ವಿನಿಮಯವೂ ನಡೆಯುತ್ತದೆ. ಪ್ರಮುಖ ಕಾರ್ಯಚಟುವಟಿಕೆ ನಡೆಸಿರುವವರ ಅನುಭವ ಲಾಭ ಇತರರಿಗೂ ದೊರಕುತ್ತದೆ. ಇಂತಹ ಸ್ಪರ್ಧೆಗಳಿಂದ ಸಂಘದ ಸದಸ್ಯರನ್ನು ಸೂಕ್ತ ರೀತಿಯಲ್ಲಿ ಗೌರವಿಸಬಹುದು. ವಿವಿಧ ಕಾರ್ಯಚಟುವಟಿಕೆಗಳಲ್ಲಿ ಅತ್ಯುತ್ತಮವಾದವರೆಂದು ತೀರ್ಪು ಪಡೆದು ಗೆದ್ದವರಿಗೆ ಬಗೆಬಗೆಯ ವರ್ಣರಂಜಿತ ಪದಕ, ವಸ್ತ್ರಪಟ್ಟಿ, ಪ್ರಶಸ್ತಿಪತ್ರ ವಿತರಣೆ ಮಾಡಬಹುದು. ಈ ಬಗೆಯ ಕಾರ್ಯಕ್ರಮಗಳಿಂದ ಅಲ್ಪ ಅವಧಿಯಲ್ಲಿ ಸಂಘದ ಚಟುವಟಿಕೆಯನ್ನು ಪ್ರಬಲಗೊಳಿಸಬಹುದು.

(ಆ) ಮೇಳಗಳು : ಯುವಕ ಮೇಳದಲ್ಲಿ ಗೌರವ ವಂದನೆ, ಪ್ರದರ್ಶನ, ಉದ್ಘಾಟನೆ, ಸಾಮೂಹಿಕ ಪ್ರಾರ್ಥನೆ ಮತ್ತು ಶ್ರಮದಾನ, ಧ್ವಜಾರೋಹಣ, ಸ್ಪರ್ಧೆ, ಮನರಂಜನೆ, ಚರ್ಚೆ, ಬಹುಮಾನ ವಿನಿಯೋಗ ಹಾಗೂ ಮುಕ್ತಾಯ ಹೀಗೆ ಕಾರ್ಯಕ್ರಮಗಳಿರುತ್ತವೆ.

ಯುವಕ ಮೇಳ ಸಿದ್ಧತೆ

ಯುವಕ ಮೇಳ ನಡೆಸುವ ಮೊದಲು ಬಹಳ ದುಡಿಯಬೇಕಾಗುತ್ತದೆ. ಮೇಳ ನಡೆಸುವುದಕ್ಕೆ ಎರಡು ಅಥವಾ ಮೂರು ತಿಂಗಳುಗಳ ಮುಂ ಸಿದ್ಧತೆ ಅವಶ್ಯ. ಈ ವಿಚಾರವನ್ನು ಸಾಕಷ್ಟು ಮುಂಚಿತವಾಗಿಯೇ ತಾಲ್ಲೂಕಿನಲ್ಲಿರುವ ಎಲ್ಲ ಸಂಘಗಳಿಗೂ ಹಸ್ತಪತ್ರಿಕೆ ಅಥವಾ ಉಚಿತ ಪ್ರಕಟಣೆಗಳ ಮೂಲಕ ಸಾದರ ಪಡಿಸಬೇಕು. ಪ್ರಕಟಣೆ ಮೂರು ದಿನಗಳ ಕಾರ್ಯಕ್ರಮ ಹಾಗೂ ವಿವಿಧ ಸ್ಪರ್ಧೆಗಳ ವಿವರಗಳ ಜೊತೆಗೆ ಮೇಳದ ಉದ್ದೇಶಗಳನ್ನೂ ಒಳಗೊಂಡಿರಬೇಕು.

ಯುವಕ ಮೇಳಕ್ಕೆ ಪೂರ್ವಭಾವಿಯಾಗಿ ಒಂದು ತಿಂಗಳು ಮುಂಚಿತವಾಗಿಯೇ ಭಾಗವಹಿಸಲಿರುವ ಎಲ್ಲ ಸಂಘಗಳು ಸಾಧನೆಗಳ ದಿನಾಚರಣೆಯನ್ನು ಪೂರೈಸಿರಬೇಕು. ಅನುಬಂಧ–5ರಲ್ಲಿ ವಿವರಗಳಿವೆ.

ಯುವಕ ಮೇಳದ ವ್ಯವಸ್ಥೆ

ಯುವಕ ಮೇಳದ ವ್ಯವಸ್ಥೆಗೆ ಅಧಿಕಾರಿ ವರ್ಗ ಹಾಗೂ ಖಾಸಗಿ ಸದಸ್ಯರಿಂದ ರಚಿಸಲ್ಪಟ್ಟ ವಿವಿಧ ಸಮಿತಿಗಳಿರಬೇಕು. ಮುಖ್ಯ ಸಮಿತಿಗಳು ಕೆಳಗಿನಂತಿರಬೇಕು :

(1) ಸ್ವಾಗತ ಸಮಿತಿ
(2) ಊಟ ಮತ್ತು ವಸತಿಗಳ ಸಮಿತಿ
(3) ಪ್ರದರ್ಶನ, ಮನರಂಜನೆ ಹಾಗೂ ಸ್ಪರ್ಧೆಗಳ ಸಮಿತಿ

(1) ಸ್ವಾಗತ ಸಮಿತಿ

(ಅ) ಕರ್ತವ್ಯಗಳು :

(i) ಸಂಘದ ಪ್ರಗತಿ ಮತ್ತು ಆಹ್ವಾನ ಪತ್ರಿಕೆಗಳನ್ನು ಅಚ್ಚುಮಾಡಿಸಿ ಹಂಚುವ ವ್ಯವಸ್ಥೆ.
(ii) ಪ್ರತಿನಿಧಿಗಳನ್ನು ದಾಖಿಲುಮಾಡಿಕೊಳ್ಳುವುದು ಮತ್ತು ಬಿರುದಿನ ಬಿಲ್ಲೆಗಳನ್ನು ಕೊಡುವ ವ್ಯವಸ್ಥೆ.
(iii) ಮುಖ್ಯ ಮತ್ತು ಇನ್ನಿತರ ಅತಿಥಿಗಳ ಸ್ವಾಗತದ ವ್ಯವಸ್ಥೆ.
(iv) ಚರ್ಚಾಕೂಟದ ವ್ಯವಸ್ಥೆ.
(v) ಉದ್ಘಾಟನಾ ಮತ್ತು ಮುಕ್ತಾಯ ಸಮಾರಂಭಗಳ ವ್ಯವಸ್ಥೆ.

(ಆ) ಸದಸ್ಯರು :

(i) **ಅಧ್ಯಕ್ಷರು**— ತಾಲ್ಲೂಕು ಅಭಿವೃದ್ಧಿ ಮಂಡಳಿ ಅಥವಾ ಪಂಚಾಯ್ತಿ ಸಮಿತಿಯ ಅಧ್ಯಕ್ಷ.

(ii) **ಸದಸ್ಯರು**— ಕ್ಷೇತ್ರಾಭಿವೃದ್ಧಿ ಅಧಿಕಾರಿ, ಸಮಾಜಶಿಕ್ಷಣ ವ್ಯವಸ್ಥಾಪಕ ಹಾಗೂ ಇಬ್ಬರು ವಿಸ್ತರಣಾಧಿಕಾರಿಗಳು, ತಾಲ್ಲೂಕು ಅಭಿವೃದ್ಧಿ ಮಂಡಳಿ ಅಥವಾ ಪಂಚಾಯ್ತಿ ಸಮಿತಿಯ ಇಬ್ಬರು ಸದಸ್ಯರು ಹಾಗೂ ಮೂರು ಜನ ಯುವಕ ರೈತ ಸಂಘಗಳ ಪ್ರತಿನಿಧಿಗಳು.

(2) ಊಟ ಮತ್ತು ವಸತಿಗಳ ಸಮಿತಿ

(ಅ) ಕರ್ತವ್ಯಗಳು :

(i) ಸಂಘಗಳಿಂದ ನಿಧಿ ಸಂಗ್ರಹಣೆ ಹಾಗೂ ದಾನಗಳನ್ನು ಸಂಗ್ರಹಿಸುವುದು.

(ii) ಪ್ರತಿನಿಧಿಗಳಿಗೆ ಊಟ ಮತ್ತು ವಸತಿ ಸೌಕರ್ಯಗಳ ವ್ಯವಸ್ಥೆ ಮಾಡುವುದು.

(iii) ಚಪ್ಪರಗಳನ್ನು ಹಾಕಿಸುವುದು ಹಾಗೂ ವಿದ್ಯುತ್ ದೀಪಗಳನ್ನು ಹಾಕಿಸಿ ವ್ಯವಸ್ಥೆಗೊಳಿಸುವುದು.

(iv) ಆರೋಗ್ಯ ಮತ್ತು ನೈರ್ಮಲ್ಯದ ವ್ಯವಸ್ಥೆಗಳನ್ನು ಏರ್ಪಡಿಸುವುದು.

(ಆ) ಸದಸ್ಯರು :

(i) **ಅಧ್ಯಕ್ಷರು**— ತಾಲ್ಲೂಕು ಮಂಡಳಿ ಅಥವಾ ಗ್ರಾಮಪಂಚಾಯ್ತಿಯ ಉಪಾಧ್ಯಕ್ಷರು.

(ii) **ಸದಸ್ಯರು**—ಇಬ್ಬರು ವಿಸ್ತರಣಾಧಿಕಾರಿಗಳು, ಸ್ಥಳೀಯ ಆರೋಗ್ಯಾಧಿಕಾರಿ, ಸ್ಥಳೀಯ ಇತರ ಇಬ್ಬರು ಅಧಿಕಾರಿಗಳು, ತಾಲ್ಲೂಕು ಮಂಡಲಿ ಅಥವಾ ಪಂಚಾಯ್ತಿಯ ಇಬ್ಬರು ಸದಸ್ಯರು ಹಾಗೂ ಯುವಕ ರೈತ ಸಂಘಗಳ ಮೂರು ಜನ ಪ್ರತಿನಿಧಿಗಳು.

(3) ಪ್ರದರ್ಶನ, ಮನರಂಜನೆ ಹಾಗೂ ಸ್ಪರ್ಧೆಗಳ ಸಮಿತಿ

(ಅ) ಕರ್ತವ್ಯಗಳು :

(i) ಮಳಿಗೆಗಳನ್ನು ಬಾಡಿಗೆಗೆ ಕೊಡುವುದು ಮತ್ತು ಪ್ರದರ್ಶನಗಳನ್ನು ವ್ಯವಸ್ಥೆ ಮಾಡುವುದು.

(ii) ವಿವಿಧ ಸ್ಪರ್ಧೆಗಳನ್ನು ಹಾಗೂ ಪ್ರದರ್ಶನಗಳಲ್ಲಿ ಜಯ ಹೊಂದಿದವರ ಪಟ್ಟಿಯನ್ನು ನಿರ್ಧರಿಸಲು ವ್ಯವಸ್ಥೆಮಾಡುವುದು.

(iii) ಮನರಂಜನ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವುದು.

(iv) ಬಹುಮಾನಗಳ ವಿತರಣೆಗೆ ವ್ಯವಸ್ಥೆ ಮಾಡುವುದು.

(ಆ) ಸದಸ್ಯರು :

(i) **ಅಧ್ಯಕ್ಷ :** ತಾಲ್ಲೂಕು ಮಂಡಲಿ ಅಥವಾ ಗ್ರಾಮ ಪಂಚಾಯಿತಿಯ ಪ್ರಮುಖ ಸದಸ್ಯರೊಬ್ಬರು.

(ii) **ಸದಸ್ಯರು :** ಮೂರು ಜನ ವಿಸ್ತರಣಾಧಿಕಾರಿಗಳು, ಇಬ್ಬರು ಸ್ಥಳೀಯ ಅಧಿಕಾರಿಗಳಲ್ಲಿ ಇಬ್ಬರು ಪಂಚಾಯಿತಿ ಸದಸ್ಯರು ಹಾಗೂ ಮೂರು ಅಥವಾ ನಾಲ್ಕು ಜನ ಯುವಕ ರೈತರ ಸಂಘಗಳ ಪ್ರತಿನಿಧಿಗಳು.

ಸ್ವಾಗತ ಹಾಗೂ ವಿಚಾರಣೆ ಕಾರ್ಯಾಲಯ ಸ್ಥಾಪನೆ

ಈ ಕಾರ್ಯಾಲಯವನ್ನು ಸಮ್ಮೇಳನದ ಪ್ರಾರಂಭಕ್ಕೆ ಒಂದು ದಿನ ಮುಂಚಿತ ವಾಗಿಯೇ ಸ್ಥಾಪಿಸಬೇಕು ಹಾಗೂ ಭಾಗವಹಿಸುವವರ ಬೇಡಿಕೆಗಳನ್ನು ಪೂರೈಸಬೇಕು.

ಗೌರವವಂದನೆ ಏರ್ಪಾಡು

ಯುವಕ ಮೇಳದಲ್ಲಿ ಈ ತರಬೇತಿಗೆ ಹೆಚ್ಚು ಗಮನ ಅತ್ಯಾವಶ್ಯಕ. ಒಳ್ಳೆ ತರಬೇತು ಹೊಂದಿರುವ ಭಾರತ ಸೇವಾದಳ, ಬಾಲಚಮು ಅಥವಾ ಎನ್. ಸಿ. ಸಿ. ವಿದ್ಯಾರ್ಥಿ ವ್ಯವಸ್ಥಾಪಕನನ್ನು ಆಹ್ವಾನಿಸಿಕೊಂಡು ಗೌರವ ವಂದನೆಯ ವ್ಯವಸ್ಥೆಯನ್ನು ಏರ್ಪಡಿಸಬೇಕು. ಉದ್ಘಾಟನೆ ಸಮಯದಲ್ಲಿ ಅತಿಥಿಗಳಿಗೆ ಈ ವಂದನೆಯನ್ನು ಸಲ್ಲಿಸಲು ವ್ಯವಸ್ಥೆ ಮಾಡಬೇಕು.

ಉದ್ಘಾಟನೆ ಮತ್ತು ಮುಕ್ತಾಯ ಸಮಾರಂಭಗಳ ಏರ್ಪಾಡು

ಈ ಸಮಾರಂಭಗಳಲ್ಲಿ ಯುವಕರಿಗೆ ಸ್ಫೂರ್ತಿ ನೀಡಿ ಹುರಿದುಂಬಿಸಬಲ್ಲ ಸಮರ್ಥ ರಾದ ವ್ಯಕ್ತಿಗಳನ್ನು ಈ ಸಮಾರಂಭಗಳ ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಬೇಕು.

ಪ್ರದರ್ಶನ ಏರ್ಪಾಡು

ಪ್ರದರ್ಶನವು ಯುವಕ ಮೇಳದ ಮುಖ್ಯ ಅಂಗವಾಗಿರಬೇಕು. ಸಂಘಗಳ ಸದಸ್ಯರು ಬೆಳೆದ ಬೆಳೆ, ಜೋಪಾನ ಮಾಡಿದ ಪ್ರಾಣಿ. ಪಕ್ಷಿ, ಕಾರ್ಯಚಟುವಟಿಕೆಗಳ ಸಾಧನೆಗಳ ಪ್ರದರ್ಶನಕ್ಕೆ ಅದರಲ್ಲಿ ಅವಕಾಶವಿರಬೇಕು.

ಸ್ಪರ್ಧೆ ಏರ್ಪಾಡು

ಸದಸ್ಯರ ಕುಶಲತೆ ಮತ್ತು ಕಾರ್ಯಚಟುವಟಿಕೆಗಳಿಗೆ ಮಾನ್ಯತೆ ಕೊಡುವುದರಿಂದ ಅವರು ಸಂಘದ ಕಾರ್ಯಕಲಾಪಗಳಲ್ಲಿ ಹೊಂದಿರುವ ಉತ್ಸಾಹವನ್ನು ಬಲಪಡಿಸಲು

ಸಹಾಯಕವಾಗುವುದು. ಯುವಕ ಮೇಳದ ಕಾಲದಲ್ಲಿ ವಿಧವಿಧವಾದ ಸ್ಪರ್ಧೆಗಳನ್ನು ಏರ್ಪಡಿಸುವುದು ಇದರ ಸಾಧನೆಗಾಗಿಯೇ. ಜೊತೆಗೆ ವ್ಯಾಯಾಮ, ಆಟ, ಭಾಷಣ, ನೃತ್ಯ, ಸಂಗೀತ, ನಾಟಕ ಈ ವಿಷಯಗಳ ಬಗೆಗೂ ಸ್ಪರ್ಧೆ ಏರ್ಪಡಿಸಬಹುದು.

ಮನರಂಜನೆ ಏರ್ಪಾಡು

ಪ್ರತಿ ಸಂಜೆ ಕಾರ್ಯಕ್ರಮಗಳನ್ನು ನಡೆಸುವ ರಂಗಮಂಟಪದಲ್ಲಿಯೇ ಮನ ರಂಜನಾ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು.

(2) ಅಂತರಕ್ಷೇತ್ರ, ಜಿಲ್ಲೆ, ರಾಜ್ಯಗಳಲ್ಲಿ ಶೈಕ್ಷಣಿಕ ಪ್ರವಾಸಗಳನ್ನು ಏರ್ಪಡಿಸುವಿಕೆ

ಕೆಲವು ಮೆಚ್ಚಿನ ಕೆಲಸಗಳನ್ನು ಮಾಡಿರುವ ಸಂಘದ ಸದಸ್ಯರನ್ನು ಮತ್ತು ಈ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ಆಸಕ್ತಿಯುಳ್ಳವರನ್ನು ಆಕರ್ಷಣೀಯ ಸ್ಥಳ ಗಳಿಗೆ ಮತ್ತು ಮಹತ್ತರ ಚರಿತ್ರಾರ್ಹ ಸ್ಥಳಗಳನ್ನು ಸಂದರ್ಶಿಸಲು ಶಿಕ್ಷಣಪ್ರವಾಸ ಗಳನ್ನು ಏರ್ಪಡಿಸಿ ಕಳುಹಿಸಬೇಕು. ಪ್ರಾರಂಭದಲ್ಲಿ ಸಮೀಪ ಸ್ಥಳಗಳಿಗೆ ಶಿಕ್ಷಣ ಪ್ರವಾಸ ಏರ್ಪಡಿಸಬೇಕು. ಆಗ ಹೆಚ್ಚು ಹಣ ವೆಚ್ಚ ಮಾಡುವ ಅವಶ್ಯಕತೆ ಬೀಳುವು ದಿಲ್ಲ. ಸಂಘದ ಕಾರ್ಯಕ್ರಮಗಳ ಅಭಿವೃದ್ಧಿ ಮುಂದುವರೆದಂತೆ ಸದಸ್ಯರನ್ನು ದೂರ ದೂರ ಸ್ಥಳಗಳಿಗೆ ಕರೆದೊಯ್ಯಬೇಕು.

ಶೈಕ್ಷಣಿಕ ಪ್ರವಾಸಗಳನ್ನು ಏರ್ಪಡಿಸುವಾಗ ಪೂರ್ವಭಾವಿಯಾಗಿ ಕಾರ್ಯಕ್ರಮ ಗಳನ್ನು ಯೋಜಿಸಿ ಏರ್ಪಡಿಸಬೇಕು. ಇದರಿಂದ ಅವರಿಗೆ ಕಲಿತುಕೊಳ್ಳುವ ಅವಕಾಶ ಗಳನ್ನು ಮುಂದಾಗಿ ತಿಳಿಸಿದಂತಾಗುತ್ತದೆ. ಈ ಬಗೆಯ ಪ್ರವಾಸಗಳಿಂದ ರಾಷ್ಟ್ರದ ನಾನಾ ಭಾಗಗಳಲ್ಲಿರುವ ಗ್ರಾಮೀಣ ಯುವಕ ಚಟುವಟಿಕೆಗಳು ಒಂದೇ ಮಾದರಿಯಲ್ಲಿ ಅಭಿವೃದ್ಧಿಗೊಳ್ಳಲು ಸಹಾಯಕವಾಗುತ್ತದೆ. ವಿವಿಧ ಸಂಘಗಳ ಸದಸ್ಯರಲ್ಲಿ ಪರಸ್ಪರ ಸಂಬಂಧ ಬೆಳೆಸಿಕೊಳ್ಳಲು ಅವಕಾಶವಾಗುವುದರ ಜೊತೆಗೆ ಯಾವುದೊಂದು ಪ್ರದೇಶ ದಲ್ಲಿನ ಉತ್ತಮ ಕಾರ್ಯಚಟುವಟಿಕೆಯನ್ನು ಇತರರು ಅನುಸರಿಸಲೂ ಸಹಾಯಕ ವಾಗುತ್ತದೆ. ಶೈಕ್ಷಣಿಕ ಪ್ರವಾಸಗಳು ಹೊಸ ಹೊಸ ತಿಳುವಳಿಕೆಗಳಿಗೆ ಅವಕಾಶ ಸಾಧನ ಗಳಾಗಿ ಪರಿಣಮಿಸುತ್ತವೆ. ಬೇರೆ ಪ್ರದೇಶಗಳ ಪರಿಸ್ಥಿತಿಗಳಿಗೆ ಪ್ರಯೋಜನವಾಗಿ ಕಂಡುಬರುವ ಹೊಸ ವ್ಯವಸಾಯ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಆಕಾಂಕ್ಷೆಯನ್ನು ಮೂಡಿಸುತ್ತದೆ. ಆದುದರಿಂದ ವಿವೇಚನಾಯುಕ್ತವಾದ ಸದುದ್ದೇಶದ ಪ್ರವಾಸವನ್ನು ಮುಂದಾಗಿಯೇ ಎಚ್ಚರಿಕೆ ವಹಿಸಿ ಏರ್ಪಾಡು ಮಾಡಬೇಕು. ಇಂಥ ಪ್ರವಾಸ ಕಾರ್ಯ ಕ್ರಮದಲ್ಲಿ ಹಲವಾರು ಗ್ರಾಮೀಣ ಯುವಕ ಸಂಘ, ವಿಸ್ತರಣ ತರಬೇತಿ ಕೇಂದ್ರ, ಪ್ರಗತಿಪರ ರೈತರ ವ್ಯವಸಾಯ ಕ್ಷೇತ್ರ, ತರಬೇತಿ ಕೇಂದ್ರ, ಸಂಯೋಜಿತ ಗೃಹ ಕೈಗಾರಿಕಾ ಉತ್ಪಾದನಾ ಕೇಂದ್ರ, ಉತ್ತಮ ಸೇವಾ ಸಹಕಾರ ಸಂಘಗಳಿಗೆ ಸಂದರ್ಶನವೀಯುವ

ಅವಕಾಶವಿರಬೇಕು. ಅಲ್ಲಿ ಅವರು ವ್ಯಾವಹಾರಿಕ ಜ್ಞಾನ ಪಡೆದು ಇವುಗಳನ್ನು ತಮ್ಮ ಸಂಘಗಳಲ್ಲಿ ಕಾರ್ಯಗತ ಮಾಡಲು ಅನುಕೂಲವಾಗುತ್ತದೆ.

(3) ಪ್ರಶಂಸಾರ್ಹ ಮತ್ತು ಅರ್ಹ ಸಂಘದ ಸದಸ್ಯರಿಗೆ ವಿದ್ಯಾರ್ಥಿವೇತನ ನೀಡಿಕೆ

ಶಾಲೆ ಮತ್ತು ಪ್ರೌಢವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಆಧಾರಗಳ ಮೇಲೆ ವಿದ್ಯಾರ್ಥಿವೇತನಗಳನ್ನು ಒದಗಿಸಲಾಗುತ್ತದೆ. ಶಾಲೆ ಅಥವಾ ಪ್ರೌಢ ವಿದ್ಯಾಲಯಗಳಿಗೆ ಹೋಗುವ ಗ್ರಾಮೀಣ ಯುವಕ ಸಂಘದ ಸದಸ್ಯರು ಯಾರಾದರೂ. ಸಂಘದ ಕಾರ್ಯಕಲಾಪಗಳಲ್ಲಿ ಪ್ರಶಂಸನೀಯ ಕೆಲಸ ಮಾಡಿದ್ದರೆ, ಅವರಿಗೂ ವಿದ್ಯಾರ್ಥಿವೇತನ ಮತ್ತು ಅಧ್ಯಯನದ ವೆಚ್ಚದಲ್ಲಿ ರಿಯಾಯಿತಿಗಳನ್ನು ಮಂಜೂರು ಮಾಡುವ ವ್ಯವಸ್ಥೆಯಿರಬೇಕು. ಇದು ಶಾಲೆಗೆ ಹೋಗುವ ಯುವಕರ ಉತ್ಸಾಹವನ್ನು ಬೆಳೆಸಿ ಅವರು ತಮ್ಮ ಕಾರ್ಯಚಟುವಟಿಕೆಗಳಲ್ಲಿ ಅಧಿಕ ಉತ್ಪಾದನಾಶಕ್ತಿಯನ್ನು ಹೊಂದಲು ಉತ್ತೇಜನ ನೀಡುತ್ತದೆ.

(4) ವ್ಯವಸಾಯೋಪಕರಣ, ಕೀಟನಾಶಕ ಹಾಗೂ ತೋಟಗಾರಿಕೆ ಉಪಕರಣ, ಬೀಜ, ಗೊಬ್ಬರ, ಔಷಧಿ ರೂಪಗಳಲ್ಲಿ ಸಂಘದ ವೈಯಕ್ತಿಕ, ಸಾಮುದಾಯ ಕಾರ್ಯ ಚಟುವಟಿಕೆಗಳಿಗೆ ಬಹುಮಾನ ನೀಡಿಕೆ :

ಗ್ರಾಮೀಣ ಯುವಕ ಸಂಘಗಳ ಮುಖ್ಯ ಗುರಿಯು ಯುವಕರನ್ನು ಅವರವರ ವ್ಯವಸಾಯ ಹಾಗೂ ಗ್ರಾಮ ಕಾರ್ಯಗಳಿಗೆ ಸಜ್ಜುಗೊಳಿಸಿ ನಿಪುಣತೆ ಪಡೆದ ಪ್ರೌಢರನ್ನಾಗಿ ಮಾಡಿ ಭವಿಷ್ಯದ ಜವಾಬ್ದಾರಿಗಳನ್ನು ಉತ್ತಮ ರೀತಿಯಲ್ಲಿ ಅವರು ನಿರ್ವಹಿಸುವಂತೆ ತರಬೇತು ನೀಡುವುದಾಗಿದೆ. ಉತ್ತೇಜನಾರೂಪದಲ್ಲಿ ವ್ಯವಸಾಯ ಉಪಕರಣ, ಒಳವರಿ ವಸ್ತುಗಳನ್ನು ಬಹುಮಾನವಾಗಿ ನೀಡಿದರೆ ಯುವಕರಲ್ಲಿ ಉತ್ಸಾಹ. ಅಭಿರುಚಿಗಳನ್ನು ಹುಟ್ಟುತ್ತದೆ.

(5) ಸಮುದಾಯ ಶ್ರವಣ ವರ್ಧಕ ಸಲಕರಣೆ ಮತ್ತು ಸಮುದಾಯ ಮನರಂಜನಾ ಚಟುವಟಿಕೆಗಳ ಸಾಮಾನು ಒದಗಿಸುವಿಕೆ

ಸಾಧ್ಯವಾದ ಎಲ್ಲ ರೀತಿಯಲ್ಲಿ ಸುದ್ದಿಸಂಪರ್ಕವನ್ನು ಭಾರತಾದ್ಯಂತ ಬಲಪಡಿಸಬೇಕಾಗಿದೆ. ಗ್ರಾಮಾಭಿವೃದ್ಧಿ ಕಾರ್ಯಕ್ರಮ ಯಶಸ್ವಿಯಾಗಿ ಮಾಡಲು ಸಂಶೋಧನೆಯ ಫಲಿತಾಂಶಗಳನ್ನು ರೈತರಿಗೆ ಅರ್ಥವಾಗುವ ರೀತಿಯಲ್ಲಿ ಪ್ರಚುರ ಪಡಿಸುವುದು ಬಹುವಾಗಿ ಸಹಾಯಕವಾಗುತ್ತದೆ. ಈ ಕಾರಣದಿಂದ ಸಮುದಾಯ ಶ್ರವಣವರ್ಧಕ ಜೋಡಣೆ ಹೊಂದಿ ಮನರಂಜನ ಚಟುವಟಿಕೆ ನಡೆಯಿಸಿದಾಗ ಸಂಘಗಳು ಉತ್ಸಾಹದಿಂದ ಮುನ್ನಡೆಯುತ್ತವೆ.

(6) ವ್ಯವಸಾಯ ಮತ್ತು ಗೃಹಕೈಗಾರಿಕೆ ಕ್ಷೇತ್ರಗಳಲ್ಲಿ ಬಗೆಬಗೆಯ ತರಬೇತಿನ ಅವಕಾಶಗಳು

ಗ್ರಾಮೀಣ ಯುವಕ ಸಂಘದ ಸದಸ್ಯರಿಗೆ ವ್ಯವಸಾಯ ಮತ್ತು ಗೃಹಕೈಗಾರಿಕೆ ಗಳಲ್ಲಿ ಆಸಕ್ತಿ ಇರುವ ಸಂಘದ ಸದಸ್ಯರಿಗೆ ಬಗೆಬಗೆಯ ಕ್ಷೇತ್ರಗಳಲ್ಲಿ ತರಬೇತಿಯು ಅವಕಾಶಗಳು ಉತ್ತಮ ಪ್ರೋತ್ಸಾಹವನ್ನು ನೀಡುತ್ತವೆ. ಈ ಬಗೆಯ ತರಬೇತಿ ಅನುಕೂಲತೆ ಯುವಕ ಸಂಘದ ಸದಸ್ಯರಿಗೆ ಹೆಚ್ಚಿನ ಆರ್ಥಿಕ ಭಾರವಾಗದಂತೆ ಅಲ್ಪಾವಧಿಯಲ್ಲಿ ದೊರೆಯುವಂತೆ-ಸ್ಥಾನಿಕವಾಗಿ ಏರ್ಪಡಿಸಬಹುದು.

(7) ಪ್ರಶಂಸಾರ್ಹವಾದ ಕೆಲಸಗಳನ್ನು ಮಾಡಿರುವ ಸಂಘ, ಗ್ರಾಮ ಪಂಚಾಯ್ತಿ ಮತ್ತು ಗ್ರಾಮೀಣ ಸಹಕಾರ ಸಂಘಗಳಲ್ಲಿ ಮಧುರ ಬಾಂಧವ್ಯದ ಏರ್ಪಾಡು.

ಸಂಘಗಳಲ್ಲಿ ಉತ್ತಮ ಕೆಲಸ ಮಾಡಿರುವ ಸದಸ್ಯರನ್ನು ಗ್ರಾಮ ಪಂಚಾಯ್ತಿ ಮತ್ತು ಸೇವಾ ಸಹಕಾರ ಸಂಘಗಳ ಚಟುವಟಿಕೆಗಳ ಸಹಸದಸ್ಯರನ್ನಾಗಿ ತೆಗೆದುಕೊಳ್ಳ ಬಹುದು. ಸದಸ್ಯರನೇಕರು ಚಿಕ್ಕವರಿರುವುದರಿಂದ ಅವರು ಗ್ರಾಮಸಂಸ್ಥೆಗಳಾದ ಪಂಚಾಯ್ತಿ, ಸಹಕಾರಿ ಸಂಘಗಳ ಸದಸ್ಯರಾಗಲು ಸಾಧ್ಯವಿಲ್ಲ. ಆದರೆ ಅವರನ್ನು ಉತ್ತಮ ಕೆಲಸಗಳನ್ನು ನಿರ್ವಹಿಸಿರುವ ಮಾನ್ಯತೆ ಆಧಾರದ ಮೇಲೆ ಈ ಸಂಸ್ಥೆಗಳವರು ನಾಮಕರಣ ಮಾಡಿಕೊಂಡು ಆ ಸಂಸ್ಥೆಗಳ ಕಾರ್ಯಕಲಾಪಗಳಲ್ಲಿ ಸಹಭಾಗಿಯಾಗುವ ಅವಕಾಶ ಕೊಡಬೇಕು. ಇದರಿಂದ ಗ್ರಾಮ ಕಾರ್ಯಕಲಾಪಗಳನ್ನು ಅಭಿವೃದ್ಧಿ ಪಡಿಸಲು ಸರಿಯಾದ ಮುಖಂಡತ್ವವನ್ನು ಬೆಳೆಸಿಕೊಳ್ಳಲು ಅವರಿಗೆ ಸದವಕಾಶ ಕಲ್ಪಿಸಿ ಕೊಟ್ಟಂತಾಗುತ್ತದೆ.

(8) ಯುವಕ ಚಟುವಟಿಕೆಗಳಿಗೆ ಆಸಕ್ತ ಸಂಸ್ಥೆ ಹಾಗೂ ಸಾರ್ವಜನಿಕರಿಂದ ನಿಧಿ ಕೊಡುಗೆ

ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿನಂತೆ ಭಾರತದಲ್ಲಿಯೂ ಧನಿಕರು, ಸಂಘ ಸಂಸ್ಥೆಗಳು ಬೇಷರತ್ತಿನಿಂದ ಧನಸಹಾಯ ಮಾಡಿ ಯುವಸಂಘಟನೆಗೆ ಪ್ರೋತ್ಸಾಹ ನೀಡಬೇಕು. ಸಂಘಗಳ ಚಟುವಟಿಕೆಗಳನ್ನು ಬಲಪಡಿಸಲು ಸಾಕಷ್ಟು ನಿಧಿ ಸಂಗ್ರಹಣೆ ಅವಶ್ಯವಿದೆ. ಅದು ಹಲವು ಮೂಲಗಳಿಂದ ಬರಬೇಕು.

9. ಗ್ರಾಮೀಣ ಯುವಕ ಸಂಘಗಳಿಗೆ ಸ್ಥಳೀಯ ಸಂಸ್ಥೆಗಳ ನೆರವು

ಗ್ರಾಮೀಣ ಯುವಕ ಸಂಘಗಳ ಕಾರ್ಯಕ್ರಮ ಗ್ರಾಮಜೀವನದೊಂದಿಗೆ ಹೊಂದಿಕೊಂಡಿರುತ್ತದೆ. ಆದ್ದರಿಂದ ಸ್ಥಳೀಯ ಸಂಸ್ಥೆಗಳಾದ ಪಂಚಾಯ್ತಿ, ಸಹಕಾರ ಸಂಘ ಮತ್ತು ಶಾಲೆಗಳೊಡನೆ ಯುವಕ ಸಂಘಗಳು ನಿಕಟ ಸಂಪರ್ಕ ಹೊಂದಿರಬೇಕು. ಸಮಾಜ ಅಭಿವೃದ್ಧಿ ಕಾರ್ಯಕ್ರಮಗಳ ಜವಾಬ್ದಾರಿ ಈ ಸಂಸ್ಥೆಗಳನ್ನೇ ಆಧರಿಸಿದೆ. ಪ್ರಜಾಪ್ರಭುತ್ವ ನಾವು ಒಪ್ಪಿಕೊಂಡ ಆಡಳಿತ ತಂತ್ರ. ನಮ್ಮ ಸಮಾಜ ಪದ್ಧತಿಯು, ಜಾತಿ, ವರ್ಗ, ಸಂಪ್ರದಾಯ ಆಧಾರಿತ ಆಚಾರಗಳನ್ನವಲಂಬಿಸಿ ಯಾವನೊಬ್ಬ ವ್ಯಕ್ತಿಯನ್ನು ತನ್ನ ಇಚ್ಛೆಯಂತೆ ವರ್ತಿಸಲು ಅವಕಾಶ ಕೊಡಬಾರದು. ಯುವಕ ಕಾರ್ಯಕ್ರಮಗಳು ಈ ತತ್ವಗಳ ಪೋಷಣೆ ಮಾಡಬೇಕು.

ಸ್ಥಳೀಯ ಸಂಸ್ಥೆಗಳಿಂದ ಉಚಿತ ಆಡಳಿತಾತ್ಮಕ ಮತ್ತು ಕ್ರಿಯಾತ್ಮಕ ಬೆಂಬಲವನ್ನು ಯುವಕ ಸಂಘಗಳು ಪಡೆಯಬೇಕು. ಇದು ಸಾಧ್ಯವಾಗುವ ರೀತಿಯಲ್ಲಿ ಯುವಕ ಕಾರ್ಯಕ್ರಮಗಳನ್ನು ಸಿದ್ಧಪಡಿಸಬೇಕು. ಯುವಕ ಸಂಸ್ಥೆಗಳು ಗ್ರಾಮಗಳ ಮುಂದಾಳುತನದ ಅಭಿಪ್ರಾಯದ ಆಧಾರ ಪಡೆದಿರಬೇಕು. ಇವು ಗ್ರಾಮದ ಇತರ ಸಂಸ್ಥೆಗಳ ಬೆಂಬಲ ಮತ್ತು ಪೋಷಣೆಗಳ ನೇರವಾದ ಸಂಬಂಧ ಬೆಳೆಸಿಕೊಳ್ಳಬೇಕು. ಸರಕಾರದ ಸಂಬಂಧಪಟ್ಟ ಅಧಿಕಾರಿಗಳು ಈ ಸಂಘಗಳನ್ನು ಪ್ರಾರಂಭಿಸಿ, ಪ್ರಥಮ ಹಂತಗಳಲ್ಲಿ ಮಾರ್ಗದರ್ಶನ ಮಾಡಬೇಕು. ಕಾಲಾನುಕ್ರಮದಲ್ಲಿ ಗ್ರಾಮದ ಮುಖಂಡರು ಇವುಗಳ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು.

ಯುವಕ ಸಂಘ ಮತ್ತು ಸ್ಥಳೀಯ ಸಂಸ್ಥೆಗಳ ಸಂಬಂಧ

(1) ಗ್ರಾಮಪಂಚಾಯ್ತಿ

ಗ್ರಾಮ ಪಂಚಾಯ್ತಿಯು ಯುವಕ ಸಂಘದ ಮೇಲ್ವಿಚಾರಣೆ ನಡೆಯಿಸಿದಲ್ಲಿ ಒಳ್ಳೆಯದು. ಯುವಕರಿಗೆ ಮಾರ್ಗದರ್ಶನ ಮಾಡುವ ನುರಿತ ಮುಖಂಡರು ಗ್ರಾಮ ಪಂಚಾಯ್ತಿಗಳಲ್ಲಿರಬೇಕು. ಯೋಗ್ಯವಾದ ಮಾರ್ಗದರ್ಶನ ಮತ್ತು ಪ್ರೋತ್ಸಾಹ ಈ ಮುಂದಾಳುಗಳಿಂದ ಒದಗಬೇಕು. ಪಂಚಾಯಿತಿ ಮಂದಿರ ದೊಡ್ಡದೂ, ಮಧ್ಯವರ್ತಿಯದೂ ಆಗಿದ್ದರೆ ಯುವಕ ಕೇಂದ್ರಕ್ಕೆ ಸ್ಥಳದ ಅನುಕೂಲತೆ ಮಾಡಿಕೊಡಬಹುದಾಗಿದೆ.

(2) ಸೇವಾಸಹಕಾರ ಸಂಘ

ಯುವಕ ಸಂಘದ ಸದಸ್ಯರು ಸಹಕಾರ ಸಂಘಗಳನ್ನು ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರಗಳೇ ಮೊದಲಾದ ಒಳವರಿ ವಸ್ತುಗಳ ಸರಬರಾಜಿಗಾಗಿ ಆಶ್ರಯಿಸಬಹುದು.

(3) ಶಾಲೆ

ಶಾಲಾ ಉಪಾಧ್ಯಾಯರು ಯುವಕ ಸಂಘದೊಡನೆ ಯಾವಾಗಲೂ ಸಂಬಂಧ ವಿಟ್ಟುಕೊಂಡು ಮುಂದಾಳುಗಳಾಗಿ ಮಾರ್ಗದರ್ಶಕರಾಗಿರಬೇಕು. ಶಾಲೆಯು ಅನು ಕೂಲವಾದ ಸ್ಥಳದಲ್ಲಿದ್ದರೆ, ಯುವಕ ಸಂಘದ ಚಟುವಟಿಕೆಗಳು ಶಾಲೆಯಲ್ಲಿಯೇ ನಡೆಯಬೇಕು.

10. ಗ್ರಾಮೀಣ ಯುವಕ ಸಂಘಗಳಲ್ಲಿ ಕಾರ್ಯಮುಂದುವರಿಕೆ ಹಾಗೂ ಮೌಲ್ಯಮಾಪನ

(1) ಕಾರ್ಯಮುಂದುವರಿಕೆ

ಕಾರ್ಯಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗುವ ವ್ಯವಸ್ಥೆ (ಕಾರ್ಯ ಮುಂದುವರಿಕೆ) ಇಲ್ಲದೆ ಯುವಕ ಸಂಘವನ್ನು ಪ್ರಾರಂಭಿಸುವುದರಿಂದ ಯಶಸ್ಸು ದೊರೆಯಲಾರದು. ಒಮ್ಮೆ ಸಂಘದ ಕಾರ್ಯಚಟುವಟಿಕೆಗಳು ಪ್ರಾರಂಭವಾದೊಡನೆ ಅವು ಎಡರುತೊಡರುಗಳಿಲ್ಲದೆ ಮುಂದೆ ಸಾಗಲು ಕ್ಷೇತ್ರಾಭಿವೃದ್ಧಿ ಅಧಿಕಾರಿ ವರ್ಗದವರೊಂದಿಗೆ ನಿಕಟ ಸಂಬಂಧ ಹೊಂದುವುದು ಅವಶ್ಯವಿದೆ. ಗ್ರಾಮಸೇವಕರೂ ಕೂಡ ಹೃತ್ಪೂರ್ವಕ ಬೆಂಬಲ ನೀಡಬೇಕು. ಸದಸ್ಯರು ಒಳ್ಳೆಯ ಕೆಲಸ ಮಾಡುತ್ತ ನಡೆದಲ್ಲಿ ಸ್ವಯಂ ಸ್ಫೂರ್ತಿ ಪಡೆಯುವರಲ್ಲದೆ, ಸಾರ್ವಜನಿಕರು ಹಾಗೂ ಅಧಿಕಾರಿಗಳಿಂದ ಬೆಂಬಲ. ಉತ್ತೇಜನ ಹಾಗೂ ಮಾನ್ಯತೆ ಪಡೆಯುತ್ತಾರೆ. ಒಮ್ಮೆ ಸರಿಯಾಗಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿದ ಸಂಘಗಳು ನಿರಾತಂಕವಾಗಿ ಬಹುಕಾಲ ಕಾರ್ಯ ಮಾಡುವಂತಾಗಲು ಕೆಲವು ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಅವು ಕೆಳಗಿನಂತಿವೆ :

(1) ಸಂಘದ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಅಧ್ಯಯನ ಪ್ರವಾಸಗಳನ್ನು ವ್ಯವಸ್ಥೆಗೊಳಿಸುವಿಕೆ.

(2) ಸಮ್ಮೇಳನ, ಜಾತ್ರೆ, ಪ್ರದರ್ಶನ ಹಾಗೂ ಉತ್ಸವಗಳನ್ನು ವ್ಯವಸ್ಥೆಗೊಳಿಸುವಿಕೆ.

(3) ಪುನರ್ಚೇತನ ತರಬೇತಿ ಶಿಬಿರ, ಅಧ್ಯಯನ ತಂಡ, ವಿಚಾರಗೋಷ್ಠಿ ಹಾಗೂ ಚರ್ಚಾ ಸಭೆಗಳನ್ನು ಅನುಷ್ಠಾನಗೊಳಿಸುವಿಕೆ.

(4) ಸದಸ್ಯರ ಮತ್ತು ಸಂಘಗಳ ಪ್ರಮುಖ ಕೆಲಸಗಳಿಗೆ ಮಾನ್ಯತೆ ಹಾಗೂ ಬಹುಮಾನಗಳನ್ನು ಏರ್ಪಡಿಸುವಿಕೆ.

(5) ಪ್ರದೇಶ, ರಾಜ್ಯ ಮತ್ತು ರಾಷ್ಟ್ರಮಟ್ಟಗಳಲ್ಲಿ ಏರ್ಪಡಿಸಿದ ಸಮಿತಿ ಹಾಗೂ ಸಮ್ಮೇಳನಗಳಿಗೆ ಸಂಘಗಳ ಪ್ರತಿನಿಧಿಗಳನ್ನು ಚುನಾಯಿಸುವಿಕೆ.

(2) ಮೌಲ್ಯಮಾಪನ

ಕಾರ್ಯ ನಿರ್ವಹಣೆಯ ಪ್ರತ್ಯಕ್ಷ ಪದ್ಧತಿಯನ್ನು ತಿಳಿಯಲು, ಕಾರ್ಯಕ್ರಮಗಳ ಪರಿಣಾಮ ಹಾಗೂ ಲೋಪದೋಷ ಮತ್ತು ನ್ಯೂನತೆಗಳ ನಿವಾರಣೋಪಾಯ

ಗಳನ್ನೆಲ್ಲ ತಿಳಿದು ಸಂಘದ ಚಟುವಟಿಕೆಗಳನ್ನು ನಿರ್ಧರಿಸಲು ಮೌಲ್ಯಮಾಪನವು ಸಹಕಾರಿಯಾಗುವುದು.

ಮೌಲ್ಯಮಾಪನದ ಉದ್ದೇಶ :

(1) ಯುವಕ ಸಂಘಗಳ ವಿವರಗಳನ್ನು ಸಂಬಂಧಪಟ್ಟವರಿಗೆಲ್ಲ ಪ್ರಚಾರ ಮಾಡಿ ತಿಳಿಸುವುದು.

(2) ಸದಸ್ಯರ ಮೇಲೆ ಸಂಘಗಳ ಕಾರ್ಯಕ್ರಮ ಮತ್ತು ಕಾರ್ಯಚಟುವಟಿಕೆಗಳುಂಟುಮಾಡುವ ಪರಿಣಾಮ ಕಂಡುಕೊಳ್ಳುವಿಕೆ.

(3) ಸಂಘದ ಕಾರ್ಯಕಲಾಪ ಹಾಗೂ ಚಟುವಟಿಕೆಗಳ ಬಗೆಗೆ ಹಿರಿಯರ ಮತ್ತು ಮಕ್ಕಳ ಪ್ರತಿಕ್ರಿಯೆಗಳನ್ನು ತಿಳಿಯುವಿಕೆ.

ಮೌಲ್ಯಮಾಪನಕ್ಕೆ ವಿಷಯ ಸಂಗ್ರಹ :

(1) ಸಕ್ರಿಯ ಹಾಗೂ ನಿಷ್ಕ್ರಿಯ ಸಂಘಗಳ ಅನುಭವ ಹಾಗೂ ಜಯಾಪಜಯಗಳನ್ನು. ನಡೆಯುವ ಕಾರ್ಯ ಪರಿಶೀಲಿಸಿ, ನಡೆದ ಕಾರ್ಯಗಳ ಬಗೆಗೆ ಕೇಳಿ ತಿಳಿದು ವಿಷಯ ಕಲೆ ಹಾಕಬೇಕು.

(2) ಸದಸ್ಯರು ಮತ್ತು ಗ್ರಾಮ ಮುಖಂಡರನ್ನು ಅನೌಪಚಾರಿಕವಾಗಿ ಸಂದರ್ಶಿಸಿ ಈ ಕಾರ್ಯಗಳ ಬಗೆಗೆ ಅವರ ಪ್ರತಿಕ್ರಿಯೆ ಪಡೆಯಬಹುದು.

(3) ಸದಸ್ಯರ ಹಾಗೂ ಅವರ ಹಿರಿಯರ ಔಪಚಾರಿಕ ಸಂಪರ್ಕ ಬೆಳೆಸಿ ಮಾಹಿತಿ ಪಡೆಯಬೇಕು.

(4) ಔಪಚಾರಿಕ ಸಂಪರ್ಕಹೊಂದಿ ಸ್ಥಳೀಯ ಸಂಸ್ಥೆಗಳಿಂದ ಸಂಘಗಳ ಬಗ್ಗೆ ಮಾಹಿತಿ ದೊರಕಿಸಬೇಕು.

(5) ಅಕ್ಷರಸ್ಥರಾದ ಸಂಘದ ಸದಸ್ಯರಿಗೆ ಪ್ರಶ್ನಾವಳಿಯನ್ನು ಕೊಟ್ಟು ಉತ್ತರಗಳನ್ನು ಪಡೆದು ಅವುಗಳನ್ನು ಪರಿಶೀಲಿಸಿ ವಿಷಯ ಸಂಗ್ರಹ ಮಾಡಬಹುದು.

ಮೌಲ್ಯಮಾಪನದ ವಿಷಯಗಳು :

(1) ಸಂಘದ ಸದಸ್ಯನ ಮತ್ತು ಅವನ ಕುಟುಂಬದ ಆರ್ಥಿಕ ಸುಧಾರಣೆ
(2) ಸದಸ್ಯನ ಮನೋಭಾವ. ನಡವಳಿಕೆಗಳಲ್ಲಾದ ಬದಲಾವಣೆ
(3) ಸದಸ್ಯನ ಆರೋಗ್ಯ ಸುಧಾರಣೆ
(4) ಸದಸ್ಯನು ಪ್ರಜಾತಂತ್ರ ವಿಧಾನದಲ್ಲಿ ಪಡೆದ ಅನುಭವ
(5) ಸದಸ್ಯನು ಸಹಕಾರ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿ
(6) ಮುಂದಾಳುತನದಲ್ಲಿ ಸದಸ್ಯನು ಗಳಿಸಿದ ಪ್ರಾವೀಣ್ಯತೆ

(7) ಗ್ರಾಮದಲ್ಲಿ ಸಂಘದ ಸಮಾಜಾಭಿವೃದ್ಧಿ ಕಾರ್ಯಕ್ರಮದಲ್ಲಿ ಸಂಘಗಳ ಸಹಭಾಗಿತ್ವ.

ಮೌಲ್ಯಮಾಪನ ಸಮಯ :

(1) ಸಂಘದ ಪ್ರಾರಂಭದಲ್ಲಿಯೇ ಮೌಲ್ಯಮಾಪನ ಮಾಡಬೇಕಾದ ವಿಷಯ ಗಳ ಸ್ಥಿತಿಗತಿಗಳ ಸ್ವರೂಪ ತಿಳಿಯಬೇಕು.

(2) ಸಂಘದ ಸ್ಥಾಪನೆಯಾದ ಆರು ತಿಂಗಳ ನಂತರ ಪ್ರಥಮ ಹಂತಗಳಲ್ಲಿ ಕಾರ್ಯಕ್ರಮಗಳ ಪ್ರಗತಿ ಹಾಗೂ ಲೋಪದೋಷಗಳ ಬಗೆಗೆ ಪರಿಶೀಲನೆ ಅಗತ್ಯ.

(3) ಸಂಘ ಸ್ಥಾಪನೆಯಾದ ಒಂದು ವರ್ಷದ ನಂತರ ಪ್ರಗತಿಯನ್ನು ತಿಳಿಯಲು ಪರಿಶೀಲನೆ.

(4) ಪ್ರತಿ ವರ್ಷವೂ ಕ್ರಮವಾಗಿ ನಿಗದಿಯಾದ ಮಾಸದಲ್ಲಿ ಚಟುವಟಿಕೆ ಗಳೆಲ್ಲವುಗಳ ಮೌಲ್ಯಮಾಪನ ಮಾಡಬೇಕು.

ಮೌಲ್ಯಮಾಪಕರು :

(1) ಸಂಘದ ಮುಂದಾಳು

(2) ಗ್ರಾಮಸೇವಕ

(3) ವ್ಯವಸಾಯ ವಿಸ್ತರಣಾಧಿಕಾರಿ

(4) ಸಮಾಜ ಶಿಕ್ಷಣ ವ್ಯವಸ್ಥಾಪಕ

(5) ಕ್ಷೇತ್ರಾಭಿವೃದ್ಧಿ ಅಧಿಕಾರಿ

ಇವರಲ್ಲಿ ಯಾರಾದರೊಬ್ಬರು ಮೌಲ್ಯಮಾಪನ ಕಾರ್ಯವನ್ನು ಮಾಡಬಹುದು.

11. ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣ ಯುವಕ ಸಂಘಗಳ ಸಂಘಟನೆ

ಕರ್ನಾಟಕ ರಾಜ್ಯದಲ್ಲಿ ಸಮಾಜಾಭಿವೃದ್ಧಿ ಕಾರ್ಯಕ್ರಮ ಪ್ರಾರಂಭವಾದಾಗಿನಿಂದಲೂ, ಅಂದರೆ 1952 ರಿಂದಲೂ ಗ್ರಾಮೀಣ ಯುವಕ ಸಂಘಗಳ ಕಾರ್ಯಕ್ರಮಗಳಿಗೆ ಬಹುಮಟ್ಟಿನ ಪ್ರಾತಿನಿಧ್ಯ ಕೊಡಲಾಗಿದೆ. ಕ್ಷೇತ್ರಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಯುವಕ ಸಂಘಗಳ ಸಂಘಟನೆಯೂ ಸೇರಿದೆ. ಈ ಬಗೆಗೆ ರಾಜ್ಯ ಸರಕಾರವು 1964 ರಲ್ಲಿ ಹೊರಡಿಸಿರುವ ಸಮಾಜಾಭಿವೃದ್ಧಿ ಕೈಪಿಡಿಯಲ್ಲಿನ ಕೆಲವು ವಿಷಯಗಳನ್ನು ಸಾರಾಂಶರೂಪವಾಗಿ ಇಲ್ಲಿ ಕೊಟ್ಟಿರುತ್ತದೆ.

ಯುವಕ ಸಂಘಟನೆ :

ಯುವಕ ಕಾರ್ಯವನ್ನು ಪ್ರಬಲವಾಗಿ ಕೈಗೊಳ್ಳಲು, ಗ್ರಾಮೀಣ ಯುವಕ ಕಾರ್ಯಚಟುವಟಿಕೆ ವಿಸ್ತರಣೆ ಹಾಗೂ ಅಭಿವೃದ್ಧಿಯನ್ನು ತೀವ್ರಗತಿಗೊಳಿಸಲು ಉದ್ದೇಶಿಸಿ, ಪ್ರತಿ ಜಿಲ್ಲೆಯಲ್ಲೂ ಪ್ರಾರಂಭದಲ್ಲಿ ಒಂದೊಂದು ಪ್ರಾಯೋಗಿಕ ಅಭಿವೃದ್ಧಿ ಕ್ಷೇತ್ರ ಸ್ಥಾಪಿಸಲು ರಾಜ್ಯಸರ್ಕಾರ ನಿರ್ಧರಿಸಿ, ತದನಂತರ ಆ ಕಾರ್ಯವನ್ನು ಮಿಕ್ಕೆಡೆಗಳಲ್ಲಿ ವಿಸ್ತರಿಸಿತು. ಯೋಜನೆ ವ್ಯಾಪ್ತಿಯಲ್ಲಿರುವ ಪ್ರತಿ ಗ್ರಾಮದಲ್ಲಿಯೂ ಒಂದೊಂದು ಯುವಕ ಸಂಘ ಸಂಘಟಿಸಲ್ಪಡಬೇಕು. ಈ ಯುವಕ ಸಂಘಗಳಲ್ಲಿನ ಸದಸ್ಯತ್ವ ಸಂಪೂರ್ಣವಾಗಿ ಐಚ್ಛಿಕವಾಗಿರುತ್ತದೆ ಹಾಗೂ ಸಮಾಜದ ದುರ್ಬಲ ವರ್ಗಗಳು ಅದರಲ್ಲಿ ಪಾಲುಗೊಳ್ಳಲು ಅವಕಾಶವಿರುತ್ತದೆ.

ಯುವಕ ಕಾರ್ಯಕ್ರಮಗಳನ್ನು ತಯಾರಿಸುವಾಗ ಅನುಸರಿಸಬೇಕಾದ ನಿಯಮಗಳು :

(1) ತಯಾರಿಸುವ ಕಾರ್ಯಕ್ರಮ ಗ್ರಾಮೀಣ ಜೀವನಕ್ಕೆ ನಿಕಟ ಸಂಬಂಧ ಹೊಂದಿರಬೇಕು. ಕಾರ್ಯಕ್ರಮಗಳು ತೀವ್ರಾಸಕ್ತಿ ಹುಟ್ಟಿಸುವಂಥವೂ ಹಾಗೂ ಯುವಕರ ತಂದೆ ತಾಯಿಗಳಿಗೂ ಸಹ ಅನ್ವಯಿಸುವಂಥವೂ ಆಗಿರಬೇಕು.

(2) ಯುವಕ ಕಾರ್ಯಕ್ರಮಗಳು ಬೇಸಾಯ, ಮನೆ, ಶಾಲೆ, ಪಂಚಾಯ್ತಿ ಹಾಗೂ ಸಹಕಾರಿ ಸಂಘಗಳೊಂದಿಗೆ ಸಂಬಂಧ ಪಡೆದಿರಬೇಕು.

(3) ಕಾರ್ಯಕ್ರಮಗಳು ಸಾಮಾನ್ಯ ಸಮಾಜಾಭಿವೃದ್ಧಿ ಕಾರ್ಯಕ್ರಮಕ್ಕೆ ನೇರ ಸಂಬಂಧವುಳ್ಳವುಗಳಾಗಿರಬೇಕು ; ಅಂದರೆ ವ್ಯವಸಾಯ, ಪಶುಪಾಲನೆ, ಕೈಗಾರಿಕೆ, ವಿದ್ಯಾಭ್ಯಾಸ ಹಾಗೂ ಸಮಾಜಶಿಕ್ಷಣ ಮುಂತಾದ ಕ್ಷೇತ್ರಗಳಿಗೆ ಅನ್ವಯಿಸಬೇಕು.

ಇವು ರಚನಾತ್ಮಕ ಕಾರ್ಯಗಳಾಗಿರಬೇಕಲ್ಲದೆ, ಯುವಕರು ಕ್ರಿಯಾತ್ಮಕವಾಗಿ ಭಾಗ ವಹಿಸಲು ಅವಕಾಶವುಳ್ಳವುಗಳಾಗಿರಬೇಕು.

(4) ಯುವಕ ಸಂಘಗಳ ಕಾರ್ಯಕ್ರಮ ವ್ಯವಸಾಯೋತ್ಪನ್ನಗಳಿಗೆ ಸಂಬಂಧ ಪಟ್ಟಿರಬೇಕು. ಸಂಘದ ವೈಯಕ್ತಿಕ ಹಾಗೂ ಸಾಮೂಹಿಕ ಕಾರ್ಯಚಟುವಟಿಕೆಗಳಿಗೆ ಗ್ರಾಮಸೇವಕರು ನೆರವು ನೀಡಬೇಕು. ಯುವಕ ಸಂಘಗಳ ಚಟುವಟಿಕೆಗಳನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿಯ ಮಾರ್ಗದರ್ಶನದಲ್ಲಿ ಸಮಾಜಶಿಕ್ಷಣ ಸಂಘಟಕರು ನಡೆಸಿ ಕೊಂಡು ಬರಬೇಕು.

1. ಗ್ರಾಮೀಣ ಬಾಲಮಂಡಲಗಳು

ಗ್ರಾಮೀಣ ಬಾಲಮಂಡಲಗಳು ಯುವಕ ಸಂಘದ ಒಂದು ಅಂಗಗಳಾಗಿರಬೇಕು. ಬಾಲಕ ಹಾಗೂ ಬಾಲಕಿಯರನ್ನು ಉತ್ತಮ ಪೌರರನ್ನಾಗಿ ಮಾಡುವುದು, ಅವರ ಆರೋಗ್ಯ ಉತ್ತಮಪಡಿಸುವುದು, ವಿರಾಮ ಕಾಲವನ್ನು ಸದುಪಯೋಗ ಮಾಡಿ ಕೊಂಡು ಗಳಿಕೆಗೆ ಅನುವು ಮಾಡಿಕೊಡುವುದು ಹಾಗೂ ಬಾಲರು ತಾವಾಗಿಯೇ ತಮ್ಮ ಅಗತ್ಯತೆಗಳನ್ನು ಪೂರೈಸಿಕೊಳ್ಳುವ ಕಾರ್ಯ ಕೈಗೊಳ್ಳುವುದು ಬಾಲಮಂಡಲಗಳ ಮುಖ್ಯ ಗುರಿಗಳು.

ಬಾಲಕ ಮತ್ತು ಬಾಲಕಿಯರಿಗೆ ಮನೆಯಲ್ಲಿ ಹಾಗೂ ಹೊರಗಡೆ ನಿಯಮ ಪಾಲನೆಯ ವಿಚಾರವನ್ನು ಬೋಧಿಸುವುದು. ಕೆಲಸ ಮಾಡುವ ಪ್ರವೃತ್ತಿಯನ್ನು ಹಾಗೂ ವಿರಾಮಕಾಲವನ್ನು ಸದುಪಯೋಗ ಮಾಡಿಕೊಳ್ಳುವುದನ್ನು ಕಲಿಸುವುದು ಹಾಗೂ ಸಹಕಾರ ಜೀವನ ನಡೆಸಲು ಸಾಧ್ಯವಾಗುವಂತೆ ಸಾಮೂಹಿಕ ಯೋಜನೆಗಳಲ್ಲಿ ಭಾಗವಹಿಸುವುದನ್ನು ಕಲಿಸುವುದು ಈ ಮಂಡಲಗಳ ಉದ್ದೇಶಗಳಾಗಿವೆ. 6 ರಿಂದ 12 ವರ್ಷಗಳ ವಯಸ್ಸಿನ ಬಾಲಕ ಹಾಗೂ ಬಾಲಕಿಯರು ಈ ಮಂಡಲಗಳ ಸದಸ್ಯರಾಗ ಬಲ್ಲರು. ಬಾಲಕರಿಗೂ ಹಾಗೂ ಬಾಲಕಿಯರಿಗೂ ಇವು ಬೇರೆ ಬೇರೆಯಾಗಿರಬಹುದು ಇಲ್ಲವೆ ಒಂದೇ ಆಗಿರಬಹುದು.

ಯುವಕ ಸಂಘದ ಒಬ್ಬ ಅಥವಾ ಇಬ್ಬರು ಸದಸ್ಯರು ಬಾಲಮಂಡಲಗಳ ಮಾರ್ಗದರ್ಶನದ ಜವಾಬ್ದಾರಿ ವಹಿಸಬೇಕು. ಬಾಲಮಂಡಲ ಸದಸ್ಯರಲ್ಲಿ ಮುಂದಾಳು ತನದ ಲಕ್ಷಣಗಳು ಕಂಡುಬಂದರೆ ಅವರಲ್ಲಿಯೇ ಒಬ್ಬ ಮುಂದಾಳುವನ್ನು ಚುನಾಯಿಸ ಬೇಕು. ಯುವಕ ಸಂಘದ ಸದಸ್ಯರ ನೇತೃತ್ವದಲ್ಲಿ ಬಾಲಮಂಡಲದ ಚುನಾವಣೆಗಳು ನಡೆಯಬಹುದು. ಈ ಮಂಡಲಗಳಿಗೆ ಗ್ರಾಮದ ಶಾಲಾ ಬೋಧಕರ ಸಹಾಯವನ್ನು ಸಂಪೂರ್ಣವಾಗಿ ಪಡೆಯಬೇಕು.

ಬಾಲಮಂಡಲಗಳ ಸದಸ್ಯರು ನಿಯಮಿತವಾಗಿ ಸದಸ್ಯರ ಸಭೆಗಳನ್ನು ನಡೆಸ ಬೇಕು. ಆರೋಗ್ಯ, ಅಕ್ಕಪಕ್ಕದ ನೈರ್ಮಲ್ಯ, ಗೃಹನಿರ್ಮಾಣ ಇತ್ಯಾದಿ ವಿಷಯಗಳಿಗೆ

ಸಂಬಂಧಿಸಿದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಬೇಕು; ಕೈತೋಟ ಮತ್ತು ಸಾಂಸ್ಕೃತಿಕ, ಬೌದ್ಧಿಕ ಹಾಗೂ ಮನರಂಜನ ಚಟುವಟಿಕೆಗಳನ್ನು ಏರ್ಪಡಿಸಬಹುದು. ಆಗಾಗ ವಿಹಾರಗಳಿಗೂ ಹಾಗೂ ಶೈಕ್ಷಣಿಕ ಪ್ರವಾಸಗಳಿಗೂ ಹೋಗಬಹುದು.

ಯುವಕ ಸಂಘಗಳಿಗೆ ಹಂಚಿಕೆಯಾದ ಹಣದಲ್ಲಿಯೆ ಕೆಲಭಾಗ ಬಾಲಮಂಡಲಗಳಿಗೆ ಕೊಡಬೇಕು. ಆಟದ ಸಾಮಾನು, ಚಿತ್ರಪಟ, ಸುಲಭ ಬೆಲೆಯ ಪುಸ್ತಕ ಹಾಗೂ ಬೀಜಗಳನ್ನು ಕೊಂಡು ಸದಸ್ಯರಿಗೆ ಒದಗಿಸುವುದಕ್ಕೆ ಈ ಹಣದ ವಿನಿಯೋಗವಾಗಬೇಕು.

2. ಗ್ರಾಮೀಣ ಯುವಕ ಮಂಡಲಗಳು

ಮಾದರಿ ನಿಯಮಾವಳಿ

(1) ಹೆಸರು : (ಗ್ರಾಮದ ಹೆಸರು) ಯುವಕ ಸಂಘ.

(2) ಸದಸ್ಯತ್ವ : ಸದಸ್ಯತ್ವ ಐಚ್ಛಿಕವಾಗಿರುತ್ತದೆ; 13 ರಿಂದ 25 ವರ್ಷಗಳ ವಯಸ್ಸಿನ, ವಾರ್ಷಿಕ ಚಂದಾ, ರೂ.......... ಕೊಡತಕ್ಕ ಗ್ರಾಮ ನಿವಾಸಿಗಳಿಗೆಲ್ಲ ಸದಸ್ಯರಾಗಲು ಅವಕಾಶವಿರುತ್ತದೆ. ಸ್ಥಳೀಯ ಯುವಕರೆಲ್ಲರ ಸಂಪೂರ್ಣ ಪ್ರತಿನಿಧಿತ್ವ ಅದರಲ್ಲಿರಬೇಕು: ಸಮಾಜದ ದುರ್ಬಲವರ್ಗದವರೂ ಅದರಲ್ಲಿ ಪಾಲುಗೊಳ್ಳಬೇಕು.

(3) ಸಾಮಾನ್ಯ ಸಭೆ : ಸಂಘದ ಧೋರಣೆ, ಯೋಜನೆ ಹಾಗೂ ಕಾರ್ಯಚಟುವಟಿಕೆಗಳ ಕಾರ್ಯಕ್ರಮಗಳನ್ನು ಆಚರಣೆಗೆ ತರುವ ಅಧಿಕಾರ ಪಡೆದಿರುತ್ತದೆ. ಪ್ರತಿವರ್ಷದ ಆಯವ್ಯಯದ ಅಂದಾಜು ಪಟ್ಟಿಯನ್ನು ಇದರ ಒಪ್ಪಿಗೆಗೆ ಮಂಡಿಸಬೇಕು. ಡಿಸೆಂಬರ್ ತಿಂಗಳಲ್ಲಿ ಲೆಕ್ಕಪತ್ರಗಳಿಗೆ ಅಂಗೀಕಾರ ಪಡೆಯಬೇಕು.

(4) ಅಧಿಕಾರಿ ವರ್ಗ : ಸಾಮಾನ್ಯ ಸಭೆಯ ಸದಸ್ಯರಿಂದ ಅಧಿಕಾರಿ ವರ್ಗ ಚುನಾಯಿಸಲ್ಪಡಬೇಕು. ಕಾರ್ಯಕಾರಿ ಸಮಿತಿಯ ಅಧಿಕಾರಿ ವರ್ಗದಲ್ಲಿ (i) ಅಧ್ಯಕ್ಷ (ii) ಉಪಾಧ್ಯಕ್ಷ (iii) ಕಾರ್ಯದರ್ಶಿ ಹಾಗೂ (iv) ಖಜಾಂಚಿ ಇರುತ್ತಾರೆ. ಕಾರ್ಯಕಾರಿ ಸಮಿತಿ ನಿರ್ದಿಷ್ಟವಾದ ಸಭೆಗಳ ಚರ್ಚೆಗಳಲ್ಲಿ ವ್ಯಕ್ತಿ ಅಥವಾ ವ್ಯಕ್ತಿಗಳ ತಿಳಿವಳಿಕೆ ಹಾಗೂ ಅನುಭವಗಳಿಂದ ಸಹಾಯವಾಗತಕ್ಕಂತಹ ಇತರ ಯಾವುದೇ ವ್ಯಕ್ತಿಗಳನ್ನು ಆಹ್ವಾನಿಸುವ ಹಕ್ಕು ಪಡೆದಿರುತ್ತದೆ.

(5) ಕಾರ್ಯಕಾರಿ ಸಮಿತಿಯ ಕೆಲಸಗಳು : ಸಂಘಕ್ಕೆ ಬೇಕಾಗುವ ದಾಖಲೆಗಳನ್ನು ಕ್ರಮಪಡಿಸುವುದು, ಸಂಪೂರ್ಣ ಕಾರ್ಯಕ್ರಮಗಳನ್ನು ರಚಿಸುವುದು ಹಾಗೂ ಸಂಘದ ಚಟುವಟಿಕೆಗಳನ್ನು ನಡೆಸುವ ಜವಾಬ್ದಾರಿಗಳನ್ನು ಕಾರ್ಯಕಾರೀ ಸಮಿತಿ ಪಡೆದಿರುತ್ತದೆ. ಕಾರ್ಯಕಾರಿಸಮಿತಿಯು ಕನಿಷ್ಠ ಪಕ್ಷ ತಿಂಗಳಿಗೊಮ್ಮೆ ಸಭೆ ಸೇರಬೇಕು.

ಕಾರ್ಯಕಾರಿ ಸಮಿತಿಯು (i) ಅಂತರ ಸಂಘಗಳ ಭೇಟಿ ಹಾಗೂ ಸ್ಪರ್ಧೆಗಳನ್ನು ಏರ್ಪಡಿಸುವುದು (ii) ರಾಷ್ಟ್ರೀಯ ಹಾಗೂ ರಾಜ್ಯದ ವಾರ್ಷಿಕೋತ್ಸವ ಸಮಾರಂಭಗಳನ್ನು ಏರ್ಪಡಿಸುವುದು ಹಾಗೂ (iii) ವ್ಯವಸಾಯ ಸುಧಾರಣಾ ಪದ್ಧತಿ ಹಾಗೂ ಆಚರಣೆ ಇತ್ಯಾದಿ ವಿಷಯಗಳ ಮೇಲೆ ಭಾಷಣ ಹಾಗೂ ಸಂಕಿರಣಗಳನ್ನು ಏರ್ಪಡಿಸುವುದು ಮೊದಲಾದ ಕಾರ್ಯಗಳನ್ನು ನಿರ್ವಹಿಸುತ್ತದೆ.

(6) ಅಧಿಕಾರವರ್ಗದ ಕರ್ತವ್ಯಗಳು :

(1) **ಅಧ್ಯಕ್ಷ :** ಇವನು ಸಂಘದ ಎಲ್ಲ ಸಭೆಗಳ ಅಧ್ಯಕ್ಷತೆ ವಹಿಸಬೇಕು. ಸಭೆಯ ಕಾರ್ಯಕಲಾಪಗಳನ್ನು ಪ್ರಜಾಪ್ರಭುತ್ವದ ಆಧಾರದ ಮೇಲೆ ನಡೆಸಬೇಕು. ಸಮಿತಿಯ ಸದಸ್ಯರಿಗೆ ಸಭೆಗೆ ಸಂಬಂಧಿಸಿದ ವಿಷಯಗಳ ಮೇಲೆ ಮಾತ್ರ ಚರ್ಚಿಸಲು ಅವಕಾಶ ನೀಡಬೇಕು. ಸದಸ್ಯರು ಮಾತನಾಡುವ ಕಾಲವನ್ನು ಮಿತಗೊಳಿಸಿ ಸಭೆಯನ್ನು ಸುಗಮವಾಗಿ ನಡೆಸಬೇಕು. ಒಟ್ಟಿನಲ್ಲಿ ಅಧ್ಯಕ್ಷ ಸಭೆಯನ್ನು ನಡೆಸುವುದು ಹಾಗೂ ನಿರ್ವಹಿಸುವ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿರುತ್ತಾನೆ.

(2) **ಉಪಾಧ್ಯಕ್ಷ :** ಇವನಿಗೆ ಅಧ್ಯಕ್ಷರ ಗೈರು ಹಾಜರಿಯಲ್ಲಿ ಸಭೆಗಳ ಅಧ್ಯಕ್ಷತೆ ವಹಿಸುವುದು ಮತ್ತು ಸಂಘದ ಕಾರ್ಯಕ್ರಮಗಳಲ್ಲಿ ಅಧ್ಯಕ್ಷರಿಗೆ ಪೂರ್ಣ ಸಹಕಾರ ನೀಡುವುದು ಮುಖ್ಯ ಕೆಲಸ.

(3) **ಕಾರ್ಯದರ್ಶಿ :** ಇವನು ಕೆಳಗಿನ ಕಾರ್ಯ ನಿರ್ವಹಿಸಬೇಕು :

(i) ಸಭೆಗಳ ನಡವಳಿಕೆಗಳನ್ನು ಬರೆದಿಡುವುದು ಹಾಗೂ ಸಂಘದ ಕಾಗದಪತ್ರಗಳನ್ನು ಕಾಪಾಡುವುದು.

(ii) ಪ್ರತಿ ಸಭೆಯಲ್ಲೂ ಹಾಜರಾತಿ ತೆಗೆದುಕೊಳ್ಳುವುದು ಹಾಗೂ ವರದಿ ಓದುವುದು.

(iii) ಅಧ್ಯಕ್ಷರ ಆಜ್ಞೆ ಮೇರೆಗೆ ಸಭೆಗಳನ್ನು ಕರೆದು ವ್ಯವಸ್ಥೆಗೊಳಿಸುವುದು.

(iv) ಕಾರ್ಯಾಲಯದ ಪತ್ರವ್ಯವಹಾರ ನೋಡಿಕೊಳ್ಳುವುದು.

(v) ಸೂಚನಾ ಪತ್ರಗಳನ್ನು ಕಳುಹಿಸುವುದು.

(vi) ಮತಗಳ ಎಣಿಕೆ ಮಾಡಿ ದಾಖಲು ಮಾಡುವುದು.

(vii) ವಾರ್ಷಿಕ ವರದಿಯನ್ನು ತಯಾರಿಸುವುದು.

(viii) ವಾರ್ತಾ ವಿಶೇಷಗಳಿದ್ದರೆ ಸಭೆಯಲ್ಲಿ ಓದುವುದು.

(ix) ಕಾರ್ಯಕ್ರಮಗಳನ್ನು ರಚಿಸುವುದು.

(x) ಕಾರ್ಯಚಟುವಟಿಕೆಗಳ ಮಾರ್ಗದರ್ಶನವನ್ನು ಸದಸ್ಯರಿಗೆ ಮಾಡಿ ಕೊಡುವುದು.

(xi) ಸಂಘಕ್ಕೆ ಸಂಬಂಧಪಟ್ಟ ಕೆಲಸಗಳ ಉಪಯುಕ್ತವಾದ ಟಿಪ್ಪಣಿಗಳನ್ನು ಪ್ರಕಟಗೊಳಿಸುವುದು.

(xii) ಸಂಘದ ಉದ್ದೇಶಗಳ ಸಾಧನೆಗೆ ಬೇಕಾದುದನ್ನೆಲ್ಲ ಮಾಡುವುದು.

ಖಜಾಂಚಿ : ಇವನು ಕೆಳಗಿನ ಕಾರ್ಯಗಳನ್ನು ನಿರ್ವಹಿಸುವನು :

(i) ಸಂಘದ ಹಣದ ಜವಾಬ್ದಾರಿ ವಹಿಸುವುದು, ಹಣಗಳಿಕೆ, ವ್ಯಯದ ಲೆಕ್ಕ ಪತ್ರವನ್ನು ಇಟ್ಟಿರುವುದು, ಸಮಿತಿಯ ತೀರ್ಮಾನಕ್ಕೆ ಅನುಗುಣವಾಗಿ ಹಣ ಸಂಗ್ರಹಿಸುವುದು ಮತ್ತು ವ್ಯಯ ಮಾಡಬೇಕಾದುದು.

(ii) ಬಾಕಿ ವಸೂಲಿ ಮಾಡುವುದು.

(iii) ಜಮಾ ಖರ್ಚುಗಳ ವಿವರ ಬರೆದಿಡುವುದು.

(iv) ಆಯವ್ಯಯದ ವಾರ್ಷಿಕ ಅಂದಾಜು ತಯಾರಿಸಲು ಸಹಕರಿಸುವುದು.

(v) ಆರ್ಥಿಕ ತಃಖ್ತೆ ಹಾಗೂ ವರದಿಗಳನ್ನು ತಯಾರಿಸುವುದು.

(7) **ಸಂಘದ ಪ್ರತಿಜ್ಞೆ :** 'ನಾನು ಈ ಸಂಘದ ಕ್ರಿಯಾಶೀಲ ಸದಸ್ಯನಾಗಿ ಇದರ ಕಟ್ಟಳೆಗಳಂತೆ ನಡೆದುಕೊಳ್ಳಲು ಒಪ್ಪಿ ನನ್ನ ಗ್ರಾಮ ಹಾಗೂ ಸಮಾಜದ ಸೇವೆಯನ್ನು ನನ್ನ ಶಕ್ತಿಮೀರಿ ಸಲ್ಲಿಸುತ್ತೇನೆಂದು ಆತ್ಮಸಾಕ್ಷಿಯಾಗಿ ಪ್ರಮಾಣ ಮಾಡುತ್ತೇನೆ.'

(8) **ಹಣಕಾಸು :** ಸದಸ್ಯತ್ವದ ಚಂದಾಹಣ, ವ್ಯಕ್ತಿ ಅಥವಾ ಸಂಸ್ಥೆಗಳಿಂದ ಬರುವ ದಾನ, ಸರ್ಕಾರ ಹಾಗೂ ಅಭಿವೃದ್ಧಿ ಕ್ಷೇತ್ರಗಳಿಂದ ದೊರೆಯುವ ಸಹಾಯ ಧನ ಹಾಗೂ ಸ್ಥಳೀಯ ಸಂಸ್ಥೆಗಳಿಂದ ಬರುವ ಠೇವಣಿಗಳೇ ಮೊದಲಾದ ಮೂಲಗಳಿಂದ ಸಂಘಕ್ಕೆ ಬೇಕಾಗುವ ಧನ ಸಂಗ್ರಹಿಸಬೇಕು.

ಹಣವು ಕಾರ್ಯಕಾರಿ ಸಮಿತಿಯ ಹತೋಟಿಯಲ್ಲಿದ್ದು ಹಾಗೂ ಮಾನ್ಯತೆ ಪಡೆದಿರುವ ಬ್ಯಾಂಕಿನಲ್ಲಿ (ಅಂಚೆ ಕಛೇರಿ ಅಥವಾ ಸಹಕಾರ ಬ್ಯಾಂಕ್ ಸೇರಿ) ಠೇವಣಿ ಇಡಬೇಕು. ಸಂಘದ ನಿರ್ಣಯದ ಮೇರೆಗೆ ಮಾತ್ರ ಹಣವನ್ನು ಬ್ಯಾಂಕಿನಿಂದ ಹೊರತೆಗೆಯಬೇಕು ಮತ್ತು ಖರ್ಚುಮಾಡಬೇಕು.

ಸಂಘದ ಉದ್ದೇಶಗಳ ಹೊರತು ಇತರ ಯಾವ ಉದ್ದೇಶಗಳಿಗೂ ಹಣವನ್ನು ಖರ್ಚು ಮಾಡಬಾರದು.

ಹಣವನ್ನು ಅಧ್ಯಕ್ಷ ಹಾಗೂ ಖಜಾಂಚಿಯ ಜಂಟಿ ರುಜುಗಳಿಂದಲ್ಲದೆ ಬೇರೆ ಯಾವ ವಿಧದಿಂದಲೂ ಪಡೆಯಬಾರದು.

ವೆಚ್ಚದ ಲೆಕ್ಕಪತ್ರಗಳನ್ನು ಮೂರು ತಿಂಗಳಿಗೊಂದು ಸಾರಿ ತಪಾಸಣೆ ಮಾಡುವ ಉದ್ದೇಶಕ್ಕಾಗಿ ಸಾಮಾನ್ಯ ಸಭೆಯು ಇಬ್ಬರು ಸದಸ್ಯರನ್ನು ಚುನಾವಣೆ ಮಾಡಬೇಕು.

(9) **ಸಂಘದ ಉದ್ದೇಶಗಳು :** ಸದಸ್ಯರಲ್ಲಿ ಸಮಾಜದ ವಿಚಾರದಲ್ಲಿ ತಿಳಿವಳಿಕೆ ನೀಡುವುದು, ಅವರನ್ನು ಗುಣವಂತ ಹಾಗೂ ಆರೋಗ್ಯವಂತರನ್ನಾಗಿ ಮಾಡುವುದು, ಅವರಲ್ಲಿ ಶಿಸ್ತು, ಸ್ವಸಹಾಯ ಹಾಗೂ ಪರಸ್ಪರ ಸಹಾಯಗಳ ಅರಿವು ಮಾಡಿಕೊಡುವುದು ಹಾಗೂ ವೈಜ್ಞಾನಿಕ ಮನೋಭಾವ ಮತ್ತು ಮುಂದಾಳುತನದ ಲಕ್ಷಣ ಹಾಗೂ ಕುಶಲತೆಗಳನ್ನು ಬೆಳೆಸುವುದು ಸಂಘದ ಪ್ರಮುಖ ಉದ್ದೇಶಗಳಾಗಿರುತ್ತವೆ.

(10) **ಸಂಘದ ಧ್ಯೇಯ ಮಂತ್ರಗಳು :** (i) ಕೆಲಸವೇ ಪೂಜೆ (ii) ಯೋಜಿಸಿ ಕಾರ್ಯ ಕೈಕೊಳ್ಳಿ (iii) ಒಂದಾಗಿ ಬೆಳೆದೇವು ; ಎರಡಾಗಿ ಬಿದ್ದೇವು (iv) ನಂಬಿಕೆಗೆ ಆಧಾರ ದುಡಿಮೆ : ಅದೃಷ್ಟವಲ್ಲ.

(11) **ಸಂಘದ ಸಭೆಗಳು :** ಸದಸ್ಯರು ಕೊನೆಯಪಕ್ಷ ವಾರಕ್ಕೊಂದು ಸಲವಾದರೂ ಸೇರಬೇಕು. ಕಾರ್ಯಕಾರಿ ಸಮಿತಿಯು ಕೊನೇ ಪಕ್ಷ, ಮೂರು ತಿಂಗಳಿಗೊಂದು ಸಲ ಸಭೆ ಸೇರಬೇಕು ಹಾಗೂ ಸಾಮಾನ್ಯ ಸಭೆ ವರ್ಷಕ್ಕೊಂದು ಸಲ ಸೇರಬೇಕು.

(12) **ಕಾರ್ಯಚಟುವಟಿಕೆಗಳು :** ಯುವಕ ಸಂಘಗಳಿಗೆ 13 ರಿಂದ 16 ವರ್ಷಗಳ ಹಾಗೂ 16 ರಿಂದ 25 ವರ್ಷಗಳ ವಯೋಗುಂಪಿನವರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಗುವುದು. ಅವರ ಮನೋವಿಕಾಸ ಬೆಳವಣಿಗೆಗೆ ಹೊಂದಿಕೊಳ್ಳತಕ್ಕ ಪ್ರತ್ಯೇಕ ಕಾರ್ಯಕ್ರಮಗಳ ಆಯ್ಕೆ ಮಾಡಬೇಕು.

ಸ್ಥಳೀಯ ಪರಿಸ್ಥಿತಿಗಳಿಗೆ ಸಂಬಂಧಪುಳ್ಳ ಕೆಲವು ಮುಖ್ಯ ವಿಷಯಗಳಿಗೆ ಗಮನ ಕೊಟ್ಟು ತದನಂತರ ಇತರ ವಿಷಯಗಳಿಗೆ ಗಮನ ಕೊಡಬೇಕು. 'ಕಲಿಕೆಯೊಂದಿಗೆ ಗಳಿಕೆ' ಎಲ್ಲ ಕಾರ್ಯ ಚಟುವಟಿಕೆಗಳ ಮುಖ್ಯ ಧ್ಯೇಯವಾಗಿರಬೇಕು. ಈ ಕಾರ್ಯ ಚಟುವಟಿಕೆಗಳು ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ರಾಷ್ಟ್ರಗೀತೆಯನ್ನು ಕ್ರಮವಾಗಿ ಹಾಡುವುದು, ರಾಷ್ಟ್ರಧ್ವಜದ ಮಹತ್ವ ತಿಳಿದು ಸರಿಯಾಗಿ ಹಾಡಿಸುವುದು, ಗ್ರಾಮಾಂತರ ರೇಡಿಯೋ ಗೋಷ್ಠಿಗಳು, ಕ್ರೀಡೆ ಇತ್ಯಾದಿಗಳಲ್ಲಿ ಪಾಲುಗೊಳ್ಳುವುದು, ಸಾಮೂಹಿಕ ಹಾಗೂ ವೈಯಕ್ತಿಕವಾಗಿ ವ್ಯವಸಾಯ ಕಾರ್ಯಗಳನ್ನು ಕೈಗೊಳ್ಳುವುದು, ಸಹಕಾರ ಮನೋಭಾವ ಬೆಳೆಸಿಕೊಳ್ಳುವುದು ಹಾಗೂ ಸಮಾಜ ಸೇವೆ ಅದರಲ್ಲೂ ವಿಶೇಷವಾಗಿ ದುರ್ಬಲ ವರ್ಗದವರ ಸೇವೆ ಕೈಗೊಳ್ಳುವುದು ಈ ಮೊದಲಾದ ಕಾರ್ಯಗಳನ್ನು ಒಳಗೊಂಡಿರುತ್ತವೆ.

(13) I. **ಸಾಮೂಹಿಕ ಕಾರ್ಯಚಟುವಟಿಕೆಗಳು :** (1) ಗ್ರಾಮದಲ್ಲಿ ತೋಪು ಗಳನ್ನು ಬೆಳೆಸುವುದು (2) ಗ್ರಾಮಗಳ ಕಾಲುದಾರಿ ಹಾಗೂ ರಸ್ತೆಗಳ ನಿರ್ಮಾಣ (3) ಗ್ರಾಮದ ಸಾರ್ವತ್ರಿಕ ಸ್ಥಳ, ಪಂಚಾಯ್ತಿ ಭವನ, ಸಮಾಜ ಶಿಕ್ಷಣ ಕೇಂದ್ರ, ಶಾಲೆ ಇತ್ಯಾದಿ ಕಟ್ಟಡಗಳ ನಿರ್ಮಾಣ (4) ಗ್ರಾಮ ನೈರ್ಮಲ್ಯ ಚಳುವಳಿ (5) ರಸ್ತೆ ಪಕ್ಕಗಳಲ್ಲಿ ಸಾಲು ಮರಗಳನ್ನು ಬೆಳೆಸುವುದು (6) ಸಸ್ಯಸಂರಕ್ಷಣಾ ಆಂದೋಳನ (7) ರಾಷ್ಟ್ರೀಯ ಪ್ರಾತ್ಯಕ್ಷಿಕೆಗಳ ಏರ್ಪಾಡು (8) ಅಕ್ಷರ ಪ್ರಚಾರ ಸಾಧನೆ ಇತ್ಯಾದಿ.

II ವೈಯಕ್ತಿಕ ಕಾರ್ಯಚಟುವಟಿಕೆಗಳು

(1) ಮುಸುಕಿನ ಜೋಳ, ಬತ್ತ, ಕಬ್ಬು, ಆಲೂಗಡ್ಡೆ, ಬೆಂಡೆಕಾಯಿ, ಟೊಮಾಟೊ, ಬದನೆ, ಕ್ಯಾರೆಟ್, ಈರುಳ್ಳಿ, ಕೋಸು, ಹೂಕೋಸು, ಮೆಣಸಿನ ಕಾಯಿ ಇತ್ಯಾದಿ ಬೆಳೆಯುವುದು (2) ಹಣ್ಣು ಹಂಪಲು ಮರ ಹಾಗೂ ಗಿಡಗಳನ್ನು ನೆಡುವುದು_ಮಾವು, ಪರಂಗಿ ನಿಂಬೆ, ಸೀಬೆ, ಬಾಳೆ ಇತ್ಯಾದಿ (2) ಜೇನು ಸಾಕಣೆ (3) ಕೋಳಿ ಸಾಕಣೆ (4) ಕರು, ಹಂದಿಗಳೇ ಮೊದಲಾದ ಜಾನುವಾರು ಪಾಲನೆ (5) ರೇಷ್ಮೆಬೆಳೆ ವ್ಯವಸಾಯ (6) ವ್ಯವಸಾಯೋಪಕರಣಗಳ ಉಪಯೋಗ ಹಾಗೂ ರಿಪೇರಿ (7) ಮರಗೆಲಸ (8) ಬಟ್ಟೆ ಹೊಲಿಗೆ ಹಾಗೂ ಪಾದರಕ್ಷೆಗಳ ತಯಾರಿಕೆ (9) ಬೈಸಿಕಲ್ ರಿಪೇರಿ ಇತ್ಯಾದಿ.

III ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಚಟುವಟಿಕೆಗಳು

(1) ನಾಟಕ, ಭಜನೆ ಹಾಗೂ ಕೀರ್ತನೆ ಮತ್ತು ರಾಷ್ಟ್ರೀಯ ಪುಣ್ಯದಿನಗಳ ಆಚರಣೆ (2) ಕುಸ್ತಿ ಹಾಗೂ ಕಬಡ್ಡಿ (3) ಎತ್ತರ ಹಾಗೂ ದೂರ ನೆಗೆತ, ವಾಲಿಬಾಲ್, ಚೆಂಡಾಟ ಇತ್ಯಾದಿ ಕ್ರೀಡೆಗಳು (4) ಗೃಹಾಂಗಣದ ಆಟಗಳು : ಚದುರಂಗ, ಕೇರಂ ಇತ್ಯಾದಿ ಒಳಾಂಗಣದ ಆಟಗಳು (5) 100, 200, ಗಜ ಮೈಲಿ ಓಟ (6) ಕವಾಯಿತು, ಮೆರವಣಿಗೆ, ವ್ಯಾಯಾಮ ಕಸರತ್ತು, ಆಸನಗಳು ಇತ್ಯಾದಿ (7) ನಾಟಕ ಗಳು, ನೃತ್ಯ ಸಂಗೀತ, ಛಾಯಾ ನಾಟಕ ಇತ್ಯಾದಿ ಗ್ರಾಮೀಣ ನಾಟಕ ರಂಗಕ್ಕೆ ಸಂಬಂಧಿ ಸಿದ ಚಟುವಟಿಕೆಗಳು (8) ವ್ಯವಸಾಯ ಹಾಗೂ ಕೈಗಾರಿಕಾ ಕ್ಷೇತ್ರಗಳಿಗೆ ಪ್ರವಾಸ, ಸಹ ಕಾರಿ ಹಾಗೂ ವೈಜ್ಞಾನಿಕ ಕೇಂದ್ರ, ಚಾರಿತ್ರಾರ್ಹ ಸ್ಥಳಗಳಿಗೆ ಭೇಟಿ, ಪಂಚಾಯ್ತಿ ಹಾಗೂ ರಾಜ್ಯ ಶಾಸನ ಸಭೆಗಳ ವೀಕ್ಷಣೆ, ಪ್ರಮುಖ ವ್ಯಕ್ತಿಗಳ ಸಂದರ್ಶನ ಹಾಗೂ ಪರಿಚಯ ಮಾಡಿಕೊಳ್ಳುವಿಕೆ (9) ಸಂಘ ಹಾಗೂ ಗ್ರಾಮಮಟ್ಟಗಳಲ್ಲಿ ಸ್ಪರ್ಧೆ (10) ತರಬೇತಿ ಶಿಬಿರಗಳ ಏರ್ಪಾಡು (12) ಪುಸ್ತಕ ಹಾಗೂ ಪತ್ರಿಕೆಗಳನ್ನೊಳಗೊಂಡ ಓದುವ ಮನೆ ಏರ್ಪಾಡು ಇತ್ಯಾದಿ.

(14) **ಕ್ರೋಢೀಕರಣ :** ಗ್ರಾಮ ಮಟ್ಟದಲ್ಲಿನ ಎಲ್ಲ ಸಂಘಗಳನ್ನು ಸಂಯೋಜಿತಗೊಳಿಸಲು ಗ್ರಾಮಸೇವಕರ ಕಾರ್ಯಕ್ಷೇತ್ರ ಇಲ್ಲವೆ ಅಭಿವೃದ್ಧಿ ಕ್ಷೇತ್ರಮಟ್ಟದಲ್ಲಿ

ಎಲ್ಲಾ ಅಧ್ಯಕ್ಷರನ್ನೊಳಗೊಂಡ ಒಂದು ಸಮಿತಿ ಇರಬೇಕು. ಈ ಕೇಂದ್ರ ಸಮಿತಿ ಗ್ರಾಮ ಸಂಘಗಳ ಸ್ಥಾಪನೆಗೆ ಸಹಾಯಮಾಡಿ, ಮುಂದಾಳುಗಳ ತರಬೇತಿ ಶಿಬಿರ ಏರ್ಪಡಿಸಿ, ಅಂತರ ಗ್ರಾಮಗಳ ಸ್ಪರ್ಧೆ ಹಾಗೂ ಕ್ಷೇತ್ರಮಟ್ಟದ ಯುವಕ ಸಂಘಗಳ ಸಮ್ಮೇಳನ ನಡೆಯಿಸಿ, ಗ್ರಾಮ ಯುವಕ ಸಂಘಟನೆ ಬಲಗೊಳ್ಳಲು ನೆರವು ನೀಡುತ್ತದೆ.

(15) ಯೋಜನೆಗಳ ದಾಖಲೆ ಪುಸ್ತಕ: ಸದಸ್ಯರ ವೈಯಕ್ತಿಕ ಹಾಗೂ ಸಾಮೂಹಿಕ ಕಾರ್ಯಚಟುವಟಿಕೆಗಳ ವಿವರಗಳನ್ನು ಬರೆದಿಡಬೇಕು. ಈ ದಾಖಲೆಯು ಬೆಳೆಯ ಬಗೆಯದಾಗಿದ್ದರೆ ಅದರಲ್ಲಿ ಸದಸ್ಯನ(ರ) ಹೆಸರು, ಕೈಕೊಂಡ ಯೋಜನೆ, ಬೆಳೆ ವಿಸ್ತೀರ್ಣ, ಇಳುವರಿ, ಅದಕ್ಕೆ ದೊರೆತ ಬೆಲೆ, ವೆಚ್ಚ, ನಿವ್ವಳಲಾಭ ಈ ಕೆಲವು ವಿವರಗಳಿರುತ್ತವೆ.

(16) ಮೌಲ್ಯಮಾಪನ : ಈ ಕೆಲಸಕ್ಕಾಗಿ ಕಾರ್ಯದರ್ಶಿಯು ವರ್ಷಕ್ಕೊಂದು ಸಲ ಆಧುನಿಕ ಪದ್ಧತಿ ಹಾಗೂ ತಾಂತ್ರಿಕ ಜ್ಞಾನಾಚರಣೆಗಳ ಪರಿಣಾಮವಾಗಿ ಸದಸ್ಯನ ಹಾಗೂ ಅವನ ಸಂಸಾರದ ಆರ್ಥಿಕ ಏಳಿಗೆ ಎಷ್ಟಾಯಿತು, ತತ್ವಗಳು ಎಷ್ಟರ ಮಟ್ಟಿಗೆ ಕೈಗೂಡಿದವು, ಸಹಕಾರ ಸಾಮೂಹಿಕದುಡಿತದ ಪ್ರತಿಫಲವೆಷ್ಟಾಯಿತು ಹಾಗೂ ಸಮಾಜಾಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿಗೆ ಸಂಘದ ನೆರವು ಎಷ್ಟರ ಮಟ್ಟಿಗೆ ದೊರೆಯಿತು ಈ ಕೆಲವು ವಿಷಯಗಳ ಬಗ್ಗೆ ಮಾಹಿತಿ ದೊರಕಿಸಬೇಕು.

(17) ಸಂಘದ ಲಾಂಛನ : ಯುವಕ ಸಂಘಗಳಿಗೆ ತನ್ನದೇ ಆದ ಒಂದು ಲಾಂಛನ ಇರುವುದು ಅಗತ್ಯ. ಕರ್ನಾಟಕ ರಾಜ್ಯ ಸರ್ಕಾರ ಒಪ್ಪಿಗೆ ಕೊಟ್ಟಿರುವ ಲಾಂಛನದ ಚಿತ್ರ ಈ ಗ್ರಂಥದ ಮುಖಪುಟದಲ್ಲಿದೆ.

ಇದರ ನಿಯೋಜಕರು ಇಂದು ಕೃಷಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿರುವ ಶ್ರೀ ವೀ. ಚ. ಹಿತ್ತಲಮನಿಯವರು. ಅವರೇ ಚಿಹ್ನೆಯ ಬಗ್ಗೆ ನೀಡಿದ ವಿವರಣೆ ಇಂತಿದೆ:

ಐದು ದಳಗಳ ಪುಷ್ಪ ನಮ್ಮ ಮಂಡಳದ ಚಿಹ್ನೆ. ಹೂವು ಫಲಗಳ ಜನ ಜನಕ ; ಹಾಗೆಯೇ ನಮ್ಮ ಯುವಜನ ! ಸಸ್ಯಗಳ ಜೀವನದಲ್ಲಿ ಮಧ್ಯಾವಸ್ಥೆ ಅಲರು ಅಂತೆಯೇ ಮಾನವ ಜೀವನದಲ್ಲಿ ಯೌವನ !!

ಪಕಳೆಗಳ ಕೆಂಪು ಬಣ್ಣ ಯುವಕರಲ್ಲಿಯ ಉತ್ಸಾಹ, ಶಕ್ತಿ ಸಾಹಸಗಳ ಸಂಕೇತ. ಯುವಕರು ಸಾಧಿಸಲಿರುವ ಕ್ರಾಂತಿಯ ಬಣ್ಣವದು. ಕೆಳಗಿನ ಪತ್ರದಳಗಳ ಹಸುರು, ನಿಸರ್ಗದ ರಮಣೀಯ ವರ್ಣ ; ಅದು ರಸಿಕತೆ, ಸೌಂದರ್ಯ, ಸಮಾಧಾನಗಳ ಗುರುತು.

ಹೊರಗಿನ ತೋರಣ ಸುತ್ತು ಮಂಡಲದ ಒಕ್ಕಟ್ಟು ಒಂದುತನಗಳ ದ್ಯೋತಕ. ಹಿನ್ನೆಲೆಯ ಬಿಳಿಯ ವರ್ಣ ಶಾಂತಿ, ಸತ್ಯತೆ, ಶುಭ್ರತೆಗಳನ್ನು ಎತ್ತಿ ತೋರಿಸುತ್ತದೆ.

ಹೂವಿನಲ್ಲಿಯ ಪತ್ರ, ಪಕಳೆಗಳ ಹೊಂದಾಣಿಕೆ, ಮಂಡಲದಲ್ಲಿಯ ಸದ್ಯಸರ ಸೇರುವಿಕೆಯ ದ್ಯೋತಕ.

18 ಉತ್ತೇಜನಗಳು : ವಿವಿಧ ಕಾರ್ಯಕ್ರಮಗಳಲ್ಲಿ ಯುವಕರ ಆಸಕ್ತಿ ಬೆಳೆಸಲು ಹಾಗೂ ಪ್ರೋತ್ಸಾಹಿಸಲು ಸೂಕ್ತವಾದ ಉತ್ತೇಜನಗಳನ್ನು ಒದಗಿಸುವುದು ಅಗತ್ಯ.

(i) ಕ್ರೀಡೆಗಳು ಹಾಗೂ ಮೇಳಗಳನ್ನು ಏರ್ಪಡಿಸುವುದು

ಕ್ರೀಡೆಗಳು ಹಾಗೂ ಮೇಳಗಳನ್ನು ಅಭಿವೃದ್ಧಿ ಕ್ಷೇತ್ರ, ಜಿಲ್ಲೆ ಹಾಗೂ ವಲಯ ಗಳ ಮಟ್ಟಗಳಲ್ಲೂ, ಅಲ್ಲದೆ ರಾಜ್ಯ ಮಟ್ಟದಲ್ಲೂ ಏರ್ಪಡಿಸಬಹುದು. ನವೆಂಬರ್ ತಿಂಗಳು ಅದರಲ್ಲೂ ದಿನಾಂಕ 14 ರಂದು ಹಿಂದಿನ ಪ್ರಧಾನ ಮಂತ್ರಿಗಳಾಗಿದ್ದ ಪಂಡಿತ ಜವಾಹರಲಾಲ ನೆಹರೂ ಅವರ ಜನ್ಮದಿನಾಚರಣೆಯೊಂದಿಗೆ, ಕ್ರೀಡೆಗಳು ಹಾಗೂ ಮೇಳಗಳನ್ನು ಒಂದುಗೂಡಿಸಿ ಏರ್ಪಾಡು ಮಾಡಲು ಸರಿಯಾದ ಕಾಲವಾಗಿರುತ್ತದೆ.

(ii) ಅಧ್ಯಯನ ಪ್ರವಾಸಗಳು

ಅಧ್ಯಯನ ಪ್ರವಾಸಗಳನ್ನು ಅಭಿವೃದ್ಧಿ ಕ್ಷೇತ್ರ, ಜಿಲ್ಲೆ ಹಾಗೂ ವಲಯ ಮಟ್ಟ ಗಳಲ್ಲೂ ಅಲ್ಲದೆ ರಾಜ್ಯ ಮಟ್ಟದಲ್ಲೂ ಏರ್ಪಡಿಸಬಹುದು. ವಿವಿಧ ಮಟ್ಟಗಳಲ್ಲಿ ಸಮಿತಿ ಗಳು ಯುವಕ ಸದಸ್ಯರನ್ನು ಈ ಪ್ರವಾಸಗಳಿಗೆ ಆಯ್ಕೆ ಮಾಡಬಹುದು. ಈ ಅಧ್ಯ ಯನ ಪ್ರವಾಸಗಳು ಯುವಕರಿಗೆ ದೇಶದ ಇತರ ಭಾಗಗಳ ತತ್ಸಮ ಚಟುವಟಿಕೆಗಳ ಅರಿವನ್ನು ಪಡೆಯಲು ಸಹಾಯಕವಾಗುತ್ತವೆ.

(iii) ಚರ್ಚಾಕೂಟ

ಸದಸ್ಯರಿಗೆ ಯುವಕ ಸಂಘಗಳ ಕಾರ್ಯ ನಿರ್ವಹಣೆಯಲ್ಲಿ ಇತರರ ಅಭಿಪ್ರಾಯ ಗಳನ್ನು ತಿಳಿದುಕೊಳ್ಳಲು ಇದು ಒಂದು ಬಗೆಯ ಶಿಕ್ಷಣ ಕ್ರಮವಾಗುವುದು. ಚರ್ಚಾ ಕೂಟದಲ್ಲಿ ಚರ್ಚಿಸಬಹುದಾದ ಕೆಲವು ವಿಷಯಗಳು ಕೆಳಗಿನಂತಿರಬಹುದು.

1. ಯುವಕ ಸಂಘಗಳ ಕಾರ್ಯಕ್ರಮ ಹಾಗೂ ಕಾರ್ಯಚಟುವಟಿಕೆಗಳು.
2. ಸದಸ್ಯರ ಹಾಗೂ ಮುಖಂಡರ ತರಬೇತು.
3. ಮಹಿಳೆಯರ ಕಾರ್ಯಕ್ರಮ.
4. ಪಂಚಾಯ್ತಿ ಮತ್ತು ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ಯುವಕ ರೈತ ಸಂಘಗಳ ಪಾತ್ರ.

ಮಾಮೂಲು ಚರ್ಚಾಕೂಟಗಳ ನಡೆವಳಿಕೆಗಳ ಆಧಾರದಂತೆಯೇ ನಡೆಸಬಹುದು.

(iv) ಮನರಂಜನಾ ಕಾರ್ಯಕ್ರಮ

ಯುವಕ ಮೇಳದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸದಸ್ಯರು ಆಯಾಸವನ್ನು ಮರೆಯಲು ಪ್ರತಿ ಸಂಜೆಯೂ ಸ್ವಲ್ಪ ಮನರಂಜನೆ ಪಡೆಯಬೇಕು. ಹಾಗಿಲ್ಲದ ಪಕ್ಷದಲ್ಲಿ ಅವರು ಮಾರನೆದಿನದ ಕಾರ್ಯಕ್ರಮಗಳಲ್ಲಿ ಆಸಕ್ತಿ ಕಳೆದುಕೊಳ್ಳುವರು. ಇದರಿಂದ ಸದಸ್ಯರ ಕಲೆ, ಕುಶಲತೆಗಳಿಗೆ ಮಾನ್ಯತೆ ದೊರಕಿಸಿ ಕೊಡಲು ಸಹಾಯಕವಾಗುತ್ತದೆ. ಆದುದರಿಂದ ಯುವಕ ಮೇಳದ ಕಾಲದಲ್ಲಿ ಪ್ರತಿ ಸಂಜೆಯೂ ಮನರಂಜನಾ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡಬೇಕು.

(v) ಬಹುಮಾನಗಳು

ಉತ್ತಮ ವೈಯಕ್ತಿಕ ಹಾಗೂ ಸಾಮೂಹಿಕ ಕಾರ್ಯಚಟುವಟಿಕೆಗಳಿಗೆ ಬಹುಮಾನ ಕೊಡಬೇಕು. ಗ್ರಾಮ ಹಾಗೂ ಅಭಿವೃದ್ಧಿ ಕ್ಷೇತ್ರಗಳ ಮಟ್ಟಗಳಲ್ಲಿ ಕೊಡುವ ಬಹುಮಾನ, ವೈಯಕ್ತಿಕ ಬಹುಮಾನಗಳು, ಪದಕ, ಬಟ್ಟಲು, ಪುಸ್ತಕ ಆಧುನಿಕ ಕುಶಲೋಪಕರಣ ಹಾಗೂ ವ್ಯವಸಾಯೋಪಕರಣಗಳ ರೂಪದಲ್ಲಿರಬೇಕು. ಸಾಮೂಹಿಕ ಭಾವನೆ ಹಾಗೂ ಸಾಮೂಹಿಕ ಚಟುವಟಿಕೆಗಳನ್ನು ಹೆಚ್ಚಿಸಲು ಸಾಮೂಹಿಕ ಕಾರ್ಯಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕು.

19. ಗ್ರಾಮಾಂತರ ಪ್ರದೇಶಗಳಲ್ಲಿ ಯುವಕ ಚಟುವಟಿಕೆಗಳ ಹೊಂದಾಣಿಕೆ

ಯುವಕ ರೈತರ ಸಂಘಗಳ ಮಾದರಿಯಲ್ಲಿ, ಭಾರತ ಸೇವಕ ಸಮಾಜ (ಭಾರತೀಯ ಯುವಕ ರೈತ ಸಮಾಜ), ಭಾರತೀಯ ಸೇವಾದಳ ಹಾಗೂ ಇತರ ಅಸಂಖ್ಯಾತ ಸಂಘಗಳು ಕೆಲಸ ಮಾಡುತ್ತಿವೆ. ಈ ಎಲ್ಲ ಸಂಘಟನೆಗಳಲ್ಲಿ ಒಂದು ಬಗೆಯ ಹೊಂದಾಣಿಕೆ ಅವಶ್ಯ. ಈ ಎಲ್ಲ ಸಂಸ್ಥೆಗಳ ಪ್ರಯತ್ನಗಳನ್ನು ಕೇಂದ್ರೀಕರಿಸಲು ಪ್ರತಿ ಗ್ರಾಮ ಮಟ್ಟದಲ್ಲಿ ಏಕೈಕ ಯುವಕ ಸಂಘವಿರುವುದು ಇಷ್ಟ. ಅದರ ಮೂಲಕ ಯುವಕ ಕಾರ್ಯಕ್ರಮಗಳನ್ನೆಲ್ಲ ನಡೆಸಬೇಕು. ಹಲವಾರು ಸಂಘ ಸಂಸ್ಥೆಗಳು ಪ್ರತ್ಯೇಕ ಯುವಕ ಸಂಘಗಳನ್ನು ಸ್ಥಾಪಿಸುತ್ತ ಹೋಗುವುದರಿಂದ ಯುವಕ ಸಂಘಟನೆ ಬಲಗೊಳ್ಳುವುದಿಲ್ಲ. ಆದ್ದರಿಂದ ಕ್ಷೇತ್ರಾಧಿಕಾರಿಗಳು ಅಭಿವೃದ್ಧಿ ಕ್ಷೇತ್ರದಲ್ಲಿನ ಯುವಕ ಕಾರ್ಯಕ್ರಮಗಳ ಮಾದರಿಯಲ್ಲಿ ಇರುವ ಎಲ್ಲ ಸಂಸ್ಥೆಗಳನ್ನು ವಿಲೀನಗೊಳಿಸಲು ಕ್ರಮಗಳನ್ನು ಕೈಗೊಳ್ಳಬೇಕು.

ಅನುಬಂಧ 1

ಗ್ರಾಮೀಣ ಯುವಕ ಸಂಘಗಳ ಘಟನಾವಳಿಯ ಮಾದರಿ

1. ಹೆಸರು :

ಯುವಕ ಸಂಘ______ತಾಲ್ಲೂಕು______ಜಿಲ್ಲೆ______ರಾಜ್ಯ______

2. (ಅ) ಸಂಘದ ಕಾರ್ಯವ್ಯಾಪ್ತಿಯು ಗ್ರಾಮಕ್ಕೂ ಹಾಗೂ ಇದಕ್ಕೊಳಪಟ್ಟ______ ಗ್ರಾಮಗಳಿಗೂ ಅನ್ವಯವಾಗುತ್ತದೆ. ಸಂಘದ ಕಾರ್ಯಾಲಯದ ಮುಖ್ಯ ಠಾಣ್ಯವು______ ಇರುತ್ತದೆ.

(ಆ) ಸಂಘವು ______ ರಾಜ್ಯದ ಯುವಕ ರೈತ ಸಂಘದ ಅಧೀನವಾಗಿ ಅವಶ್ಯಕವಾದ ಕಾರ್ಯ ಮಾಡುತ್ತದೆ.

3. ಉದ್ದೇಶಗಳು :

(1) ಸದಸ್ಯರಿಗೆ ವ್ಯವಸಾಯ, ಗೃಹ ನಿರ್ವಹಣೆ ಹಾಗೂ ಸಾಮಾಜಿಕ ಜೀವನ ನಿರ್ವಹಣೆಗಳ ಬಗೆಗೆ ಹೊಸದೃಷ್ಟಿ ಹೊಂದಲು ಅವಕಾಶ ಮಾಡಿಕೊಡುವುದು.

(2) ಸದಸ್ಯರಿಗೆ ಉತ್ತಮ ನಾಗರಿಕರಾಗಲು ಅನುಕೂಲ ಮಾಡಿಕೊಡುವುದು.

(3) ಸದಸ್ಯರಿಗೆ ಗ್ರಾಮ, ರಾಜ್ಯ ಹಾಗೂ ರಾಷ್ಟ್ರಗಳ ಬಗೆಗೆ ಪ್ರೇಮ, ಆಸಕ್ತಿಗಳನ್ನು ಹೊಂದಲು ಅನುಕೂಲ ಮಾಡಿಕೊಡುವುದು.

(4) ಸದಸ್ಯರಿಗೆ ಪ್ರಜಾಪ್ರಭುತ್ವದ ಬಾಳ್ವಿಕೆಯ ಮಾರ್ಗ ಕಲಿಯಲು ಅನುಕೂಲ ಮಾಡಿಕೊಡುವುದು.

(5) ಸದಸ್ಯರಿಗೆ ಯುವಕ ಮುಖಂಡತ್ವ ಹೊಂದಲು ಅನುಕೂಲ ಮಾಡಿಕೊಡುವುದು.

(6) ಸದಸ್ಯರಿಗೆ ಸ್ವಂತ ಜೀವನಕ್ಕೆ ಸಂಪಾದನೆ ಮಾಡಿಕೊಳ್ಳುವ ವಿಷಯದ ಬಗೆಗೆ ತರಬೇತಿ ನೀಡುವುದು.

4. ಸದಸ್ಯತ್ವ :

(1) ಸಂಘ ಉದ್ದೇಶ ಹಾಗೂ ಕಾರ್ಯಕ್ರಮಗಳಲ್ಲಿ ಆಸಕ್ತಿಯುಳ್ಳ ಗ್ರಾಮದ ಯಾವ ಯುವಕನಾದರೂ ಸಂಘದ ಸದಸ್ಯನಾಗಲು ಅರ್ಹನು.

(2) ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ಸಂಘಗಳಿರಬೇಕು.

(3) ಸದಸ್ಯರಲ್ಲಿ ಮೂರು ದರ್ಜೆಗಳಿರುತ್ತವೆ.

(i) **ಸಕ್ರಿಯಾಸದಸ್ಯರು :** ಹತ್ತರಿಂದ ಇಪ್ಪತ್ತೈದು ವರ್ಷದ ವಯೋಮಿತಿಯೊಳಗಿನ ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಇಚ್ಛೆಯುಳ್ಳ ಯಾವ ವ್ಯಕ್ತಿಯಾದರೂ ಸಕ್ರಿಯಾಸದಸ್ಯನಾಗಬಹುದು. ಸಕ್ರಿಯಾ ಸದಸ್ಯರ ವಾರ್ಷಿಕ ಚಂದಾ ಒಂದು ರೂಪಾಯಿ.

(ii) **ಸಹಾಯಕ ಸದಸ್ಯರು :** ಇಪ್ಪತ್ತೈದು ವರ್ಷಗಳ ವಯೋಮಿತಿ ಮೀರಿದ ಸಂಘದ ಬಗೆಗೆ ಅಭಿಮಾನವಿರುವ ಯಾವ ವ್ಯಕ್ತಿಯಾದರೂ ಸಂಘದ ಸಹಾಯಕ ಸದಸ್ಯನಾಗಬಹುದು. ಸಹಾಯಕ ಸದಸ್ಯರ ವಾರ್ಷಿಕ ಚಂದಾ ಒಂದು ರೂಪಾಯಿ.

(iii) **ಪೋಷಕರು :** ಸಂಸ್ಥೆಗೆ ಐದು ರೂಪಾಯಿ ಅಥವಾ ಹೆಚ್ಚಿಗೆ ದಾನ ಕೊಡುವವರು ಪೋಷಕರು.

5. ಸದಸ್ಯರಿಗಿರುವ ಅವಕಾಶಗಳು :

(1) ಸಂಘದ ಯಾವುದೇ ಸಭೆಯಲ್ಲಿ ಮತದಾನದ ಹಕ್ಕು ಸಕ್ರಿಯಾಸದಸ್ಯರಿಗೆ ಮಾತ್ರ ಇರುತ್ತದೆ.

(2) ಇಪ್ಪತ್ತೈದು ವರ್ಷಗಳಿಗೆ ಮೇಲ್ಪಟ್ಟ ವಯೋಮಿತಿಯೊಳಗಿನ ಸಹಾಯಕ ಸದಸ್ಯರು ಹಾಗೂ ಪೋಷಕರು ಸಂಘದಲ್ಲಿರುವ ಸಕ್ರಿಯಾಸದಸ್ಯರಿಗೆ ಮಾರ್ಗದರ್ಶನ ಮಾಡುತ್ತಾರೆ.

6. ಸದಸ್ಯತ್ವದ ಅವಧಿ :

ಸದಸ್ಯತ್ವದ ಅವಧಿ ಒಂದು ವರ್ಷ.

7. ಆಡಳಿತ :

(1) ಸಂಘದ ಸಾಮಾನ್ಯ ಮೇಲ್ವಿಚಾರಣೆ ಮತ್ತು ಕಾರ್ಯಾಲಯದ ಆಡಳಿತವು ಕಾರ್ಯಕಾರಿ ಸಮಿತಿಯ ಅಧೀನಕ್ಕೆ ಒಳಪಟ್ಟಿರುತ್ತದೆ.

(2) ಸಂಘದ ವಾರ್ಷಿಕ ಸರ್ವಸಾಮಾನ್ಯ ಸಭೆಯಲ್ಲಿ ಮತದಾನದ ಹಕ್ಕುಳ್ಳ ಸದಸ್ಯರು ಅಧ್ಯಕ್ಷರನ್ನು ಚುನಾಯಿಸುತ್ತಾರೆ.

(3) ಸಂಘದ ಕಾರ್ಯಕಾರಿ ಸಮಿತಿ ಅಧಿಕಾರಿ ವರ್ಗ ಅಧ್ಯಕ್ಷರಿಂದ ನಾಮಕರಣ ಹೊಂದುತ್ತದೆ. ಇದರಲ್ಲಿ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಮತ್ತು ಇತರ ಇಬ್ಬರು ಸದಸ್ಯರು, ಹೀಗೆ ಐದು ಜನ ಇರುತ್ತಾರೆ.

(4) ಸಂಘದ ಕಾರ್ಯಕ್ರಮ, ಯೋಜನೆ ಹಾಗೂ ಕಾರ್ಯಚಟುವಟಿಕೆಗಳನ್ನು ನಿರ್ಧರಿಸಲು ನಿರ್ದಿಷ್ಟ ಕಾಲಾವಧಿಯಲ್ಲಿ ಸಭೆ ನಡೆಯುತ್ತದೆ.

(5) ಕಾರ್ಯಕಾರಿ ಸಮಿತಿಯ ಸಭೆ ಸೇರಲು ಸದಸ್ಯರ ಒಟ್ಟು ಸಂಖ್ಯೆಯು ⅙ ಭಾಗ ಹಾಜರಿರಬೇಕು.

8. ಮುಂದಾಳು ಮಾರ್ಗದರ್ಶಕ

ಸದಸ್ಯರಿಂದ ಚುನಾಯಿಸಲಾದ **ಅಥವಾ ಆರಿಸಿದ** ಒಬ್ಬ ಮುಂದಾಳು ಮಾರ್ಗದರ್ಶಕನೂ ಆಗಿರುತ್ತಾನೆ.

9. ಅಧಿಕಾರಿವರ್ಗದ ಕಾರ್ಯಗಳು :

(1) **ಅಧ್ಯಕ್ಷರು :** ಅಧ್ಯಕ್ಷರು ಸಂಘದ ಮುಖ್ಯ ಕಾರ್ಯನಿರ್ವಾಹಕರು. ಅವರು ಸಭೆ ಸಮಾರಂಭಗಳ ಅಧ್ಯಕ್ಷತೆ ವಹಿಸುತ್ತಾರೆ. ಎಲ್ಲ ಕಾರ್ಯಗಳ ಮೇಲ್ವಿಚಾರಕರಾಗಿರುತ್ತಾರೆ.

(2) **ಉಪಾಧ್ಯಕ್ಷರು :** ಅಧ್ಯಕ್ಷರ ಗೈರು ಹಾಜರಿಯಲ್ಲಿ ಅಧ್ಯಕ್ಷರ ಕಾರ್ಯ ನಿರ್ವಹಿಸುತ್ತಾರೆ.

(3) **ಕಾಯದರ್ಶಿ :** ಕಾರ್ಯದರ್ಶಿ ಅಧ್ಯಕ್ಷರಿಗೆ ಜವಾಬ್ದಾರ. ಸಂಘದ ದಾಖಲೆ ಪತ್ರ ಹಾಗೂ ಲೆಕ್ಕಪತ್ರಗಳನ್ನು ಇಡುತ್ತಾನೆ. ಕಾರ್ಯಕಾರಿ ಸಭೆ ಕರೆದು ವಿಷಯ ಮಂಡಿಸುತ್ತಾನೆ. ವರ್ಷಕ್ಕೊಮ್ಮೆ ಸರ್ವಸಾಮಾನ್ಯ ಸಭೆ ಕರೆಯುತ್ತಾನೆ.

(4) **ಖಜಾಂಚಿ :** ಹಣಕಾಸಿನ ವ್ಯವಹಾರ ಮಾಡುತ್ತಾನೆ.

10. ಸಭೆಗಳು :

ಕಾರ್ಯಕಾರಿ ಸಮಿತಿಯು ಪ್ರತಿ ತಿಂಗಳಿಗೊಮ್ಮೆ ಸೇರುತ್ತದೆ. **ಅವಶ್ಯಬಿದ್ದರೆ** ಇನ್ನೂ ಹೆಚ್ಚು ಸಲ ಸೇರಬಹುದು.

11. ವಿಧಿನಿಯಮಗಳ ಬದಲಾವಣೆ :

ಸರ್ವಸಾಮಾನ್ಯ ಸದಸ್ಯರ ಸಭೆಯಲ್ಲಿಯೇ **ಚಾಲ್ತಿಯಲ್ಲಿರುವ ನಿಬಂಧನೆಗಳನ್ನು** ಅವಶ್ಯ ಬಿದ್ದಾಗಲೆಲ್ಲ ತಿದ್ದುಪಡಿ ಮಾಡತಕ್ಕದ್ದು.

12. ಆರ್ಥಿಕ ವ್ಯವಹಾರಗಳು :

(1) ಕಾರ್ಯಕಾರಿ ಸಮಿತಿಯು **ಮೇಲ್ವಿಚಾರಣೆಯ ಹಾಗೂ ಮಂಜೂರು** ಕೊಡುವ ಹಕ್ಕು ಪಡೆದಿರುತ್ತದೆ.

(2) ಸಂಘದ ಆರ್ಥಿಕ ವ್ಯವಹಾರಗಳಿಗೆ ಸಂಘದ ಖಜಾಂಚಿಯು ಹೊಣೆಗಾರನಾಗಿರುತ್ತಾನೆ.

(3) ಕಾರ್ಯಕಾರಿ ಸಮಿತಿಯ ಅಧಿಕಾರಿ ಪತ್ರ ಪಡೆದು ಕಾರ್ಯದರ್ಶಿ ಹಾಗೂ ಖಜಾಂಚಿ ಇಬ್ಬರೂ ಸೇರಿ ಹಣಬಳಕೆ ನಿರ್ವಹಿಸುತ್ತಾರೆ.

13. ಪ್ರತಿಜ್ಞೆ :

(1) ಸದಸ್ಯರು ಸಂಘಕ್ಕೆ ಸೇರುವ ಕಾಲದಲ್ಲಿ ಮತ್ತು ಕೆಲವು ಸಭೆಗಳಲ್ಲಿ ಸಂಘದ ಪ್ರತಿಜ್ಞಾವಚನ ಸ್ವೀಕರಿಸಬೇಕು.

(2) ಪ್ರತಿಜ್ಞೆ ಈ ಕೆಳಗಿನಂತಿರುತ್ತದೆ :

ನನ್ನ ಗ್ರಾಮ, ನನ್ನ ಸಮಾಜ ಹಾಗೂ ನನ್ನ ರಾಷ್ಟ್ರಕ್ಕೆ ನನ್ನ ಶಕ್ತಿ ಮತ್ತು ಸಾಮರ್ಥ್ಯ ಅರ್ಪಿಸಿ ಸಂಘದ ಮುಖಾಂತರ ಸೇವೆ ಸಲ್ಲಿಸುತ್ತೇನೆ. ಇದು ನನ್ನ ದೃಢ ಪ್ರತಿಜ್ಞೆ.

14. ದಾಸ್ತಾವೇಜುಗಳು :

ಸಂಘವು ಈ ಕೆಳಕಂಡ ದಾಸ್ತಾವೇಜುಗಳನ್ನು ಇಡತಕ್ಕದ್ದು :

(1) ಸದಸ್ಯರ ದಾಖಲೆ ಪುಸ್ತಕ
(2) ಸಭೆಯ ನಡವಳಿಕೆಗಳ ಪುಸ್ತಕ
(3) ಯೋಜನೆಗಳ ದಾಖಲೆಗಳ ಪುಸ್ತಕ
(4) ಹಣದ ಜಮಾ ಖರ್ಚು ಪುಸ್ತಕ
(5) ಸರಕು ದಾಖಲೆ ಪುಸ್ತಕ
(6) ಭೇಟಿ ಕೊಡುವವರ ದಾಖಲೆ ಪುಸ್ತಕ

ಅನುಬಂಧ 2

ಗ್ರಾಮೀಣ ಯುವಕ ಸಂಘಗಳ ಸದಸ್ಯರ ಬಗೆಗೆ ಮಾಹಿತಿ ಸಂಗ್ರಹಿಸುವ ನಮೂನೆ

ಗ್ರಾಮದ ಹೆಸರು__________ಸಂಘದ ಹೆಸರು__________ಸಮೀಕ್ಷಣೆದಾರನ ಹೆಸರು__________ತಾರೀಖು__________

ಅನು ಕ್ರಮ ಸಂಖ್ಯೆ	10 ರಿಂದ 25 ವರ್ಷಗಳೊಳಗಿರುವ ಯುವಕ ರೈತನ ಹೆಸರು	ವಯಸ್ಸು	ತಂದೆ ಅಥವಾ ಪೋಷಕರ ಹೆಸರು	ತಂದೆ ಅಥವಾ ಪೋಷಕರ ಅಧೀನದಲ್ಲಿರುವ ಜಮೀನು ವಿವರ (ಎಕರೆ)			ತಂದೆ ಅಥವಾ ಪೋಷಕರ ವೃತ್ತಿ					ಯುವಕ ರೈತನ ವೃತ್ತಿ	ಸಂಘಕ್ಕೆ ಸೇರಲು ಯುವಕ ರೈತನ ಅಭಿಪ್ರಾಯ	ಯುವಕ ರೈತ ಸೂಚಿಸಲಾದ ಕಾರ್ಯಚಟುವಟಿಕೆ	
				ತರಿ	ಖುಷ್ಕಿ	ಬಾಗಾಯ್ತು	ಕೋಳಿ	ಕುರಿ	ಎಮ್ಮೆ	ಹಸು	ಇತರ			ವೈಯಕ್ತಿಕ	ಸಾಮೂಹಿಕ
1	2	3	4	5	6	7	8	9	10	11	12	13	14	15	16

ಸಮೀಕ್ಷೆಯ ಅವಶ್ಯಕತೆ

(1) ಯುವಕ ರೈತರ ಸಂಘಕ್ಕೆ ಸೇರಲು ಮನಸ್ಸುಳ್ಳವರ ಅಭಿಪ್ರಾಯ ಸಂಗ್ರಹಣೆ ಹಾಗೂ ಗ್ರಾಮಗಳಲ್ಲಿ ಹತ್ತರಿಂದ ಇಪ್ಪತ್ತೈದು ವರ್ಷಗಳ ವಯೋಮಿತಿಯೊಳಗಿರುವ ಯುವಕ ರೈತರ ಸಂಖ್ಯೆಯನ್ನು ಕಂಡುಹಿಡಿಯುವುದು.

(2) ಸಂಘ ನಿಯೋಜಿಸುವ ಗ್ರಾಮ ಸೇವಕರು ಯುವಕ ರೈತರ ವೈಯಕ್ತಿಕ ಸಂಪರ್ಕ ಬೆಳೆಸಿ ಯೋಜನೆಗಳಲ್ಲಿ ಅವರಿಸುವ ಅಭಿರುಚಿ ಅಥವಾ ಅವರ ಬೇಡಿಕೆಗಳನ್ನು ತಿಳಿದುಕೊಂಡು ಸಹಾಯನೀಡುವುದು.

(3) ಗ್ರಾಮಗಳಲ್ಲಿ ಯುವಕ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸಲು ಮೂಲಭೂತ ವಿವರಗಳನ್ನು ಪಡೆಯುವದಕ್ಕೋಸುಗ.

ಸಮೀಕ್ಷಣೆ ನಡೆಸುವಿಕೆ

(1) ಗ್ರಾಮದಲ್ಲಿ ರಾತ್ರಿ ಅಥವಾ ಹಿಂದಿನ ಸಂಜೆ ಸಾರ್ವಜನಿಕ ಸಭೆಯನ್ನು ಸೇರಿಸಿ, ಗ್ರಾಮಸ್ಥರು ಹಿರಿಯರು ಹಾಗೂ ಯುವಕ ರೈತರನ್ನು ಸೇರಿಸಿಕೊಂಡು, ಯುವಕ ರೈತರಿಗೆ ಸಂಘದ ಉದ್ದೇಶಗಳನ್ನೂ ಜೊತೆಗೆ ಸಮೀಕ್ಷಣೆಯ ಪ್ರಾಮುಖ್ಯತೆಯನ್ನೂ ವಿವರಿಸಬೇಕು. ಯುವಕ ರೈತರ ಸಂಘದ ಉದ್ದೇಶ ವಿವರಿಸಲು ಏರ್ಪಡಿಸಿದ ಸಭೆ ಇಲ್ಲವೆ ಮನರಂಜನಾ ಕಾರ್ಯಕ್ರಮ ನಡೆಯುವ ಸಂದರ್ಭಗಳನ್ನು ಈ ಕಾರ್ಯಕ್ಕೆ ಉಪಯೋಗಿಸಿಕೊಳ್ಳಬೇಕು.

(2) ಪ್ರತಿ ಮನೆಗೆ ಭೇಟಿಕೊಟ್ಟು ಸಮೀಕ್ಷಣೆ ನಡೆಸಬೇಕು.

ಅನುಬಂಧ 3

ಗ್ರಾಮೀಣ ಯುವಕ ರೈತ ಸಂಘಗಳ ಸದಸ್ಯತ್ವದ ಅರ್ಜಿ ನಮೂನೆ

1. ಅರ್ಜಿದಾರನ(ಳ) ಹೆಸರು :
2. ಅರ್ಜಿದಾರನ(ಳ) ವಯಸ್ಸು :
3. ತಂದೆ ಅಥವಾ ಪೋಷಕರ ಹೆಸರು :
4. ಗ್ರಾಮದ ಹೆಸರು :
5. ಅರ್ಜಿದಾರನ(ಳ) ವಿಳಾಸ :
6. ತಂದೆ ಅಥವಾ ಪೋಷಕರ
   ಅಧೀನದಲ್ಲಿರುವ ಜಮೀನು : ತರಿ ಖುಷ್ಕಿ ಬಾಗಾಯ್ತು
   (ಎಕರೆಗಳು) ... ...
7. ತಂದೆ ಅಥವಾ ಪೋಷಕರ ಕೋಳಿ ಮರಗೆಲಸ ಕುರಿ ಇತ್ಯಾದಿ
   ಇತರ ಕಸುಬುಗಳು : ಸಾಕಣೆ ಸಾಕಣೆ
   (✓ಚಿಹ್ನೆ ಹಾಕಿರಿ) (ನಮೂದಿಸಿರಿ)
8. ಅರ್ಜಿದಾರನ(ಳ) ಚಾಲ್ತಿ ಕಸುಬು :
9. ಅರ್ಜಿದಾರನು(ಳು) ಸೂಚಿಸಿ
   ಆಯ್ಕೆಮಾಡಿದ ಕಾರ್ಯ ಯೋಜನೆ :

ಪ್ರತಿಜ್ಞೆ

ನನ್ನ ಗ್ರಾಮ, ನನ್ನ ಸಮಾಜ ಮತ್ತು ನನ್ನ ರಾಷ್ಟ್ರಕ್ಕೆ ನನ್ನ ಶಕ್ತಿ ಮತ್ತು ಸಾಮರ್ಥ್ಯ ಅರ್ಪಿಸಿ, ಸಂಘದ ಮುಖಾಂತರ ಸೇವೆ ಸಲ್ಲಿಸುತ್ತೇನೆ. ಇದು ನನ್ನ ದೃಢ ಪ್ರತಿಜ್ಞೆ.

ಅರ್ಜಿದಾರನ(ಳ) ರುಜು

ನಾನು ಈ ಮೂಲಕ ನನ್ನ ಮಗ/ಮಗಳು ನನ್ನ ಗ್ರಾಮದ ಯುವಕ ರೈತ ಸಂಘಕ್ಕೆ ಸೇರಲು ಒಪ್ಪಿರುತ್ತೇನೆ ಮತ್ತು ಅವನು(ಳು) ಸಂಘದ ಉತ್ತಮ ಸದಸ್ಯ(ಸ್ಯೆ) ಆಗಿ ಉಪಯುಕ್ತ ಕಾರ್ಯಚಟುವಟಿಕೆಯಲ್ಲಿ ತೊಡಗಿ ಕೆಲಸ ಮಾಡಲು ನಾನು ಸಹಾಯ ಮಾಡುತ್ತೇನೆ.

ತಂದೆ ಅಥವಾ ಪೋಷಕರ ರುಜು

ಗ್ರಾಮಸೇವಕ(ವಿಕೆ) ಅಥವಾ ಮಾರ್ಗದರ್ಶಕನ ಷರಾ

....

ಸ್ಥಳ : ಗ್ರಾಮಸೇವಕ (ವಿಕೆ) ಅಥವಾ ಸಂಘದ

ದಿನಾಂಕ : ಮಾರ್ಗದರ್ಶಕ ಮುಂದಾಳುವಿನ ರುಜು

ಅನುಬಂಧ 4

ಸಂಘದ ದಸ್ತಾವೈಜುಗಳ ನಮೂನೆ

(ಅ) ಸದಸ್ಯರ ದಾಖಲೆ ಪುಸ್ತಕ

ಕ್ರಮ ಸಂಖ್ಯೆ	ಸದಸ್ಯನ(ಳ) ಹೆಸರು	ತಂದೆ ಅಥವಾ ಪೋಷಕನ ಹೆಸರು	ದಾಖಲು ಮಾಡಿದ ದಿನಾಂಕ	ಪಾವತಿ ಮಾಡಿದ ಮೊಬಲಗು	ಸದಸ್ಯತ್ವದ ವರ್ಷ	ಸದಸ್ಯತ್ವ ಮುಂದು ವರಿಸಿದ ದಿನಾಂಕ	ಪಾವತಿ ಮಾಡಿದ ಮೊಬಲಗು	ಸದಸ್ಯತ್ವ ಮುಂದು ವರಿಸಿದ ವರ್ಷ	ಷರಾ
1	2	3	4	5	6	7	8	9	10

(ಆ) ಸಭೆಯ ನಡವಳಿಕೆಗಳ ನಮೂನೆ ಪುಸ್ತಕ

ಈ ಪುಸ್ತಕಕ್ಕೆ ಯಾವ ನಮೂನೆಯೂ ಅಗತ್ಯವಿಲ್ಲ. ನಡವಳಿಕೆಗಳನ್ನು ದಾಖಲು ಮಾಡಿಕೊಳ್ಳಲು ಖಾಲಿ ಹೊದಿಕೆಯುಳ್ಳ ಪುಸ್ತಕ ಸಾಕು.

(ಇ) ಯೋಜನೆಗಳ ದಾಖಲೆ ಪುಸ್ತಕ

ಕ್ರಮ ಸಂಖ್ಯೆ	ಸಮುದಾಯ ಅಥವಾ ವೈಯಕ್ತಿಕ ಕಾರ್ಯ ಚಟುವಟಿಕೆ ಹೆಸರು	ಭಾಗವಹಿಸುವ ಸದಸ್ಯರ ಹೆಸರು	ವರ್ಷದ ಗುರಿ	ಫಲಿತಾಂಶ	ಷರಾ
1	2	3	4	5	6

(ಈ) ಆಯವ್ಯಯದ ಪುಸ್ತಕ

ವರಮಾನ			ವ್ಯಯ		
ದಿನಾಂಕ	ಜಮಾ ವಿವರ	ಮೊಬಲಗು	ದಿನಾಂಕ	ವ್ಯಯದ ವಿವರ	ಮೊಬಲಗು

(ಉ) ವೈಯಕ್ತಿಕ ಕಾರ್ಯಚಟುವಟಿಕೆಗಳ ದಾಖಲೆ ಪುಸ್ತಕ

(1) ಕಾರ್ಯಚಟುವಟಿಕೆ.............................. (2) ವರ್ಷ..............................

ಕ್ರಮ ಸಂಖ್ಯೆ	ದುಡಿಮೆಯ ಕಾಲವನ್ನೊಳಗೊಂಡ ಖರ್ಚಿನ ತಪ್ಸೀಲು	ಪ್ರಮಾಣ ಅಥವಾ ಸಂಖ್ಯೆ	ಬೆಲೆ	ಕ್ರಮ ಸಂಖ್ಯೆ	ಮಾರಾಟದ ಉತ್ಪಾದನೆಗಳ ವಿವರ ಮತ್ತು ವರಮಾನದ ಸಂಖ್ಯೆ	ಪ್ರಮಾಣ ಅಥವಾ ಸಂಖ್ಯೆ	ಬೆಲೆ
1	2	3	4	5	6	7	8

ಸೂಚನೆ : (1) ಯೋಜನೆಗಳನ್ನು ಒಪ್ಪಿಕೊಂಡಿರತಕ್ಕ ವೈಯಕ್ತಿಕ ಸದಸ್ಯರು ಇವುಗಳನ್ನು ಇಡಬೇಕು.

(2) ಯೋಜನೆ ಪೂರೈಸಿದ ನಂತರ ಕೊನೆಯಲ್ಲಿ ಲಾಭ ನಷ್ಟಗಳನ್ನು ಕಂಡು ಹಿಡಿದು ಸಂಘದ ಕಾರ್ಯದರ್ಶಿಯವರಿಗೆ ತಃಖ್ತೆಗಳನ್ನು ಮಂಡಿಸತಕ್ಕದ್ದು.

(3) ಒಂದಕ್ಕಿಂತಲೂ ಹೆಚ್ಚಾಗಿ ವೈಯಕ್ತಿಕ ಯೋಜನೆಯನ್ನು ಸದಸ್ಯರಿಗೆ ವಹಿಸಿಕೊಟ್ಟಿದ್ದರೆ ಯೋಜನೆಗಳ ವಿವರಗಳನ್ನು ಪ್ರತ್ಯೇಕವಾಗಿ ಬರೆಯಬೇಕು.

ಅನುಬಂಧ 5

ಗ್ರಾಮೀಣ ಯುವಕ ರೈತ ಸಂಘಗಳ ಸಾಧನೆಗಳ ದಿನಾಚರಣೆ ಮಾದರಿ

ಪ್ರತಿ ಸಂಘವೂ ಯುವಕ ಮೇಳದಲ್ಲಿ ಭಾಗವಹಿಸುವುದಕ್ಕೆ ಮುಂಚೆ ಸಾಧನೆಗಳ ದಿನಾಚರಣೆಯನ್ನು ಆಚರಣೆ ಮಾಡುವುದು ಅತ್ಯಾವಶ್ಯಕ. ವರ್ಷಕ್ಕೊಂದು ಸಾರಿ ಇದು ಆಚರಿಸಲ್ಪಡುತ್ತದೆ. ಇದರಿಂದ ವೈಯಕ್ತಿಕ ಹಾಗೂ ಸಾಮೂಹಿಕ ಕಾರ್ಯ ಚಟುವಟಿಕೆಗಳಲ್ಲದೆ ಸಂಘದ ಮಹತ್ಕಾರ್ಯಗಳನ್ನು ಸದಸ್ಯರು ತಿಳಿದುಕೊಳ್ಳಲು ಸಹಾಯವಾಗುವುದು. ಸಂಘದ ಚಟುವಟಿಕೆಗಳನ್ನು ಪ್ರಚುರಗೊಳಿಸಿ ಹೆಚ್ಚು ಸದಸ್ಯರನ್ನು ದಾಖಲು ಮಾಡಲು ಸಹಾಯಕವಾಗುವುದು; ಸಂಘದ ಚಟುವಟಿಕೆಗಳನ್ನು ಹಿರಿಯರು ಅರಿತುಕೊಂಡು ಬೆಂಬಲಕೊಡಲು ಸಹಾಯಕವಾಗುವುದು. ಸದಸ್ಯರು ಸಾಧಿಸಿರುವ ಕೆಲಸಗಳಿಗಾಗಿ ಸೂಕ್ತ ಮನ್ನಣೆಕೊಡಲು ಸಹಾಯಕವಾಗುವುದು ಹಾಗೂ ಸದಸ್ಯರಿಗೆ ತಮ್ಮ ಪ್ರತಿಭೆಗಳನ್ನು ಪ್ರದರ್ಶಿಸಲು ಅವಕಾಶಗಳನ್ನು ಕಲ್ಪಿಸಲು ಅವಕಾಶವಾಗುವುದು.

ಕಾರ್ಯಕ್ರಮಗಳು

ಪ್ರಾತಃಕಾಲ :	6 ರಿಂದ 7	ಸಾಮೂಹಿಕ ಪ್ರಾರ್ಥನೆ, **ಗ್ರಾಮ ಸಮೀಕ್ಷಣೆ**
	7 ರಿಂದ 7-30	ಸ್ಪರ್ಧೆಗಳು (i) ಭಾಷಣ (ii) ಹಾಡುಗಾರಿಕೆ (ಸಂಗೀತ) (iii) ಕ್ರೀಡೆಗಳು (ಇತ್ಯಾದಿ)
ಮಧ್ಯಾಹ್ನ :	4 ರಿಂದ 6-30	ಸಭೆ (ಹಿರಿಯರು ಹಾಗೂ ಸಂಘದ ಸದಸ್ಯರಲ್ಲದವರು ಆಹ್ವಾನಿತರಾಗುತ್ತಾರೆ) (i) ಸ್ವಾಗತ (ii) ಕಾರ್ಯದರ್ಶಿಯಿಂದ ವರದಿ (iii) ಸದಸ್ಯರ ವೈಯಕ್ತಿಕ ಮಹತ್ಕಾರ್ಯ ಸಾಧನೆ ವಿವರಣೆ (ಪ್ರತಿ ಸದಸ್ಯರಿಂದ)

(iv) ಸಾಂಸ್ಕೃತಿಕ ಕಾರ್ಯಕ್ರಮ
(ಅ) ಹಳ್ಳಿ ಕುಣಿತ, ಕೋಲಾಟ
(ಆ) ಪಂಡರಿ ಭಜನೆ
(ಇ) ಜಾನಪದ ಹಾಡು

(v) ಭಾಷಣಗಳು
ಗ್ರಾಮದ ಇಬ್ಬರು ಹಿರಿಯರು,
ಇಬ್ಬರು ಪ್ರಗತಿಪರ ರೈತರು,
ಸಂಘದ ಇಬ್ಬರು ಸದಸ್ಯರು,
ಒಬ್ಬರು ಅಥವಾ ಇಬ್ಬರು ಅಧಿಕಾರಿ
ಗಳು ಹಾಗೂ ಅಧ್ಯಕ್ಷರಿಂದ

(vi) ವಂದನಾರ್ಪಣೆ

ಸಾಯಂಕಾಲ : 7-30 ರಿಂದ 8-30 ಚಲನಚಿತ್ರ ಪ್ರದರ್ಶನ ಅಥವಾ ಸಾಂಸ್ಕೃತಿಕ ಕಾರ್ಯಕ್ರಮ

ಮಾಡಬೇಕಾದ ವ್ಯವಸ್ಥೆಗಳು :

(i) ಗ್ರಾಮದಲ್ಲಿ ತಮಟೆ ಬಾರಿಸುವ ಮೂಲಕ ಪ್ರಚಾರ ಮಾಡಬೇಕು.

(ii) ಸ್ಪರ್ಧೆಗಳನ್ನು ತೀರ್ಪುಕೊಡುವುದಕ್ಕಾಗಿ ಸಂಘದ ಸದಸ್ಯರಲ್ಲದವರನ್ನು ತೀರ್ಪುದಾರನನ್ನಾಗಿ ಗೊತ್ತುಪಡಿಸಬೇಕು.

(iii) ಸಭೆಯ ಅಧ್ಯಕ್ಷತೆಯನ್ನು ವಹಿಸಲು ಹಿರಿಯರೊಬ್ಬರನ್ನು ಗೊತ್ತು ಪಡಿಸಬೇಕು.

ಅನುಬಂಧ 6

ತಾಲ್ಲೂಕು ಮಟ್ಟದ ಗ್ರಾಮೀಣ ಯುವಕ ರೈತ ಮೇಳಕ್ಕೆ ಸೂಚಿಸಿದ ಒಂದು ಕಾರ್ಯಕ್ರಮದ ಮಾದರಿ

ಗ್ರಾಮೀಣ ಯುವಕ ರೈತ ಕಾರ್ಯಕ್ರಮಗಳ ಪ್ರಗತಿಯನ್ನು ಮುಖ್ಯ ದೃಷ್ಟಿಯನ್ನಾಗಿರಿಸಿಕೊಂಡು ಪ್ರತಿ ತಾಲ್ಲೂಕು ಮಟ್ಟದಲ್ಲೂ ವರ್ಷಕ್ಕೊಮ್ಮೆ ಮೇಳಗಳನ್ನು ನಡೆಯಿಸಬೇಕು. ಇದು ತಾಲ್ಲೂಕಿನಲ್ಲಿರುವ ಸಂಘದ ಸದಸ್ಯರು ಒಟ್ಟುಗೂಡಿ ಸಂಘಗಳ ಕಾರ್ಯ ನಿರ್ವಹಣೆಯಲ್ಲಿ ತಮ್ಮ ಅಭಿಪ್ರಾಯಗಳ ವಿನಿಮಯ ಮಾಡಿಕೊಳ್ಳಲು ಸಂಘಗಳ ಸದಸ್ಯರಲ್ಲಿ ಶಿಸ್ತಿನ ನಡವಳಿಕೆ, ಸಾಮೂಹಿಕ ಬಾಳ್ವೆ ಕಲಿಯಲು ಅವಕಾಶ ಕಲ್ಪಿಸಲು, ಸಂಘದ ಯೋಜನೆಗಳಿಗೂ, ಸಂಘದ ಸದಸ್ಯರು ನಡೆಸಿರುವ ಇತರ ಕೆಲಸಗಳಿಗೂ ಸೂಕ್ತವಾದ ಮಾನ್ಯತೆ ದೊರಕಿಸಿಕೊಡಲು, ಸಂಘದ ಸದಸ್ಯರಿಗೆ ಸಮಾಜಾಭಿವೃದ್ಧಿ ಕಾರ್ಯಗಳಲ್ಲಿ ಪ್ರಮುಖವಾದ ಪಾತ್ರವಹಿಸಲು ಉತ್ಸಾಹವನ್ನು ಹುಟ್ಟಿಸಲು ಹಾಗೂ ತಾಲ್ಲೂಕು ಗ್ರಾಮೀಣ ಯುವಕ ಕಾರ್ಯಕ್ರಮಗಳನ್ನು ಪ್ರಚಾರ ಪಡಿಸಲು ಆವಶ್ಯ.

ಮೂರು ದಿನಗಳ ಕಾರ್ಯಕ್ರಮಗಳು :

ಮೊದಲನೇ ದಿನ :	ಮಧ್ಯಾಹ್ನ	2 ಘಂಟೆ	ಸಂಘದ ಸದಸ್ಯರ ಆಗಮನ
		2 ರಿಂದ 4	ಪ್ರದರ್ಶನ ಹಾಗೂ ಪ್ರಾತ್ಯಕ್ಷಿಗಳ ವ್ಯವಸ್ಥೆ
		4 ರಿಂದ 7	ಗೌರವ ವಂದನೆ
	ಸಾಯಂಕಾಲ	7 ರಿಂದ 8	ಊಟ
		8 ರಿಂದ 10	ಮನರಂಜನೆ ಕಾರ್ಯಕ್ರಮ
ಎರಡನೇ ದಿನ :	ಪ್ರಾತಃಕಾಲ	5 ಘಂಟೆ	ಏಳುವುದು
		5 ರಿಂದ 6	ವೈಯಕ್ತಿಕ ಕಾರ್ಯ ಪೂರೈಸಿಕೊಳ್ಳುವಿಕೆ
		6 ರಿಂದ 6-15	ಸಾಮೂಹಿಕ ಪ್ರಾರ್ಥನೆ
		6-15 ರಿಂದ 7-15	ಸಾಮೂಹಿಕ ದುಡಿಮೆ
		7-15 ರಿಂದ 8-00	ಉಪಾಹಾರ
		8 ರಿಂದ 8-30	ಧ್ವಜಾರೋಹಣ
		8-30 ರಿಂದ 9-30	ಗೌರವ ವಂದನೆ
		10 ರಿಂದ 12	ಸಮ್ಮೇಳನದ ಉದ್ಘಾಟನೆ

(ಅ) ಗೌರವಾರ್ಪಣೆ ಮತ್ತು ಪ್ರದರ್ಶನ

(ಆ) ಸ್ವಾಗತ

(ಇ) ವಾರ್ಷಿಕ ವರದಿ

(ಈ) ಭಾಷಣಗಳು

(ಉ) ಸಮಾರೋಪ

(ಊ) ವಂದನಾರ್ಪಣೆ

ಮಧ್ಯಾಹ್ನ 12 ರಿಂದ 2 ಊಟ ಮತ್ತು ವಿಶ್ರಾಂತಿ
2 ರಿಂದ 6 ಸ್ಪರ್ಧೆ

ಬಾಲಕರಿಗಾಗಿ : (1) ಬಲಾಬಲ ಯುದ್ಧ
(2) ಓಟ
(3) ಪ್ರಯೋಗ ಪರೀಕ್ಷೆ

ಬಾಲಕಿಯರಿಗಾಗಿ : (1) ಕೋಲಾಟ
(2) ಪ್ರಯೋಗ ಪರೀಕ್ಷೆ

ಸಾಯಂಕಾಲ 6 ರಿಂದ 7 ವೈಯಕ್ತಿಕ ಕಾರ್ಯಪೂರೈಸಿಕೊಳ್ಳುವಿಕೆ
7 ರಿಂದ 7-15 ಸಾಮೂಹಿಕ ಪ್ರಾರ್ಥನೆ
7-15 ರಿಂದ 8 ರಾತ್ರಿ ಊಟ
8 ರಿಂದ 10 ಮನರಂಜನೆ ಕಾರ್ಯಕ್ರಮ

ಮೂರನೇ ದಿನ :

ಪ್ರಾತಃಕಾಲ 5 ಘಂಟೆ ಏಳುವುದು
5 ರಿಂದ 6 ವೈಯಕ್ತಿಕ ಕಾರ್ಯಪೂರೈಸಿಕೊಳ್ಳುವಿಕೆ
6 ರಿಂದ 6-15 ಸಾಮೂಹಿಕ ಪ್ರಾರ್ಥನೆ
6-15 ರಿಂದ 7 ಸಾಮೂಹಿಕ ದುಡಿಮೆ
7-15 ರಿಂದ 8 ಉಪಾಹಾರ
8 ರಿಂದ 8-15 ಧ್ವಜಾರೋಹಣ
8-15 ರಿಂದ 1 ಚರ್ಚೆಗಳು

ಮೊದಲನೆ ಗುಂಪು : ಯೋಜನೆ ಮತ್ತು ಕಾರ್ಯಕ್ರಮ
ಎರಡನೆ ಗುಂಪು : ಸದಸ್ಯರ ಮತ್ತು ಮುಖಂಡರ ತರಬೇತು
ಮೂರನೆ ಗುಂಪು : ಸ್ತ್ರೀಯರ ಕಾರ್ಯಕ್ರಮ

ನಾಲ್ಕನೆ ಗುಂಪು : ಸಮಾಜಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಯುವಕ ರೈತ ಸಂಘಗಳ ಪಾತ್ರ

ಮಧ್ಯಾಹ್ನ 1 ರಿಂದ 3 ಮಧ್ಯಾಹ್ನದ ಊಟ ಮತ್ತು ವಿಶ್ರಾಂತಿ

3 ರಿಂದ 4-30 (i) ಸಾಮಾನ್ಯ ಚರ್ಚೆಗಳು

(ii) ಸಾಮೂಹಿಕ ಶಿಫಾರಸ್ಸುಗಳನ್ನು ನಿರ್ಧರಿಸುವುದು.

4-30 ರಿಂದ 6 ಮುಕ್ತಾಯ ಸಮಾರಂಭ

(i) ಪ್ರಾರ್ಥನೆ

(ii) ಸ್ವಾಗತ

(iii) ಸದಸ್ಯರ ಭಾಷಣಗಳು

(iv) ಬಹುಮಾನಗಳ ವಿತರಣೆ

(v) ವಂದನಾರ್ಪಣೆ

(vi) ಸಂಘದ ಪ್ರತಿಜ್ಞೆ ಸಾಮೂಹಿಕವಾಗಿ ಉಗ್ಗಡಿಸುವಿಕೆ

(vii) ರಾಷ್ಟ್ರಗೀತೆ

ಪಾರಿಭಾಷಿಕ ಶಬ್ದಕೋಶ

ಅನುಸರಣಾ ಕಾರ್ಯ	Follow-up work
ಅಮೆರಿಕದ ಭಾವಿ ರೈತ ಸಂಸ್ಥೆ	Future Farmers of America
ಅಂತರ ರಾಷ್ಟ್ರೀಯ ಯುವಕ ವಿನಿಮಯ	International Exchange Programme
ಆರ್ಥಿಕ ಕಾರ್ಯ ಚಟುವಟಿಕೆಗಳು	Economic projects
ಉದ್ದೇಶಗಳು	Objectives
ಒಳವರಿ ವಸ್ತುಗಳು	Inputs
ಕರ್ನಾಟಕ ಯುವಕ ರೈತ ಸಮಾಜ	Young Farmers Association, Karnataka
ಕಾರ್ಯಕ್ರಮ	Programme
ಕ್ರೋಢೀಕರಣ	Coordination
ಗುರಿಗಳು	Aims
ಗುಂಪಿನ ಕಾರ್ಯಚಟುವಟಿಕೆಗಳು	Group projects
ಗೃಹ ನಿರ್ವಹಣೆಗಾರರು	Home makers
ಗ್ರಾಮೀಣ ಯುವಕ ಸಂಘ	Rural youth club
ಗ್ರಾಮೀಣ ಯುವಕ ಸಂಸ್ಥೆ	Rural youth organisation
ಘಟನಾವಳಿ	Constitution
ಚಟುವಟಿಕೆಗಳು	Activities
ಜನತಾ ಪ್ರೌಢಶಾಲೆಗಳು	Folk high schools
ದೃಕ್ ಸಾಧನಗಳು	Audio-visuals
ಧ್ಯೇಯ ಮಂತ್ರ	Motto
ಬಾಲಚಮೂದಳ	Scouts
ಭಾರತದ ಯುವಕ ರೈತ ಸಮಾಜ	Young Farmers Association, India
ಮುಂದಾಳತ್ವ	Leadership
ಮೇಳ	Ralley
ಮೌಲ್ಯಮಾಪನೆ	Evaluation
ಯುವಕ ಕ್ರೈಸ್ತ ಸಂಸ್ಥೆ	Young Men Christian Association (YMCA)
ರಾಷ್ಟ್ರೀಯ ವಿಸ್ತರಣ ಯೋಜನೆ	National Extension Service
ಲಾಂಛನ	Emblem
ವ್ಯವಸಾಯ ಕಾರ್ಯಚಟುವಟಿಕೆಗಳು	Agricultural projects
ವ್ಯವಸಾಯ	Farming, agriculture

ವೈಯಕ್ತಿಕ ಕಾರ್ಯಚಟುವಟಿಕೆಗಳು	Individual projects
ಶಿಕ್ಷಣ ಸಾಧನಗಳು	Teaching aids
ಶೈಕ್ಷಣಿಕ ಪ್ರವಾಸ	Educational tour
ಸಮಾಜ ಸೇವಾ ಕಾರ್ಯಚಟುವಟಿಕೆಗಳು	Social service projects
ಸಹಕಾರ ಮನೋಭಾವನೆ	Cooperative spirit
ಸಾಮುದಾಯಿಕ ಜೀವನ	Community life
ಸಾಧನೆಗಳ ದಿನಾಚರಣೆ	Achievement day
ಸುಧಾರಣೆ ಘಟನೆ	Factors of improvement
ಸೇವಾಸಂಸ್ಥೆಗಳು	Service organisations
ಸೃಜನಾತ್ಮಕ ಶಕ್ತಿ	Creative strength
ಹಿತಕರ ಸ್ಪರ್ಧೆ	Healthy competition

ಆಧಾರ ಗ್ರಂಥಗಳು

RECK, M. FRANKIN., *4-H Club Story.* Ames Iowa (U.A.S.): Iowa State University Press, 1959.

LEAGENS J. PAUL., *Training of Farmers Essential for National Development, Rural Youth*, Sept., 1960.

——*A Guide Book to Young Farmer's Clubs.* Travancore: Development Commissioner, Kerala, 1960.

——*Constitution of Young Farmer's* Association. New Delhi: YFA India, 1959.

——*Guide to Rural Youth Organisation.* Lucknow: Planning Action and Research Institute, 1959.

——*Manual of Community Development Part I.* Bangalore: Development Commissioner in Mysore, 1960.

——*Organisation and Development of Rural Youth Programme.* Washington: FES-USDA, 1955.

——*Recommendation of the Second World Assembly of Youth held at Lebanon.* Paris: World Assembly of Youth, 1958.

——*Social Welfare in India.* New Delhi: Publications Division, Govt. of India, 1958.

——*Young Farmer's Clubs- The countries used.* Bangalore: YFA of Mysore, 1959.

——**ಗೊತ್ತು-ಗುರಿ-ಘಟನೆ.** ಧಾರವಾಡ : ಗ್ರಾಮ ಸೇವಕರ ತರಬೇತಿ ಕೇಂದ್ರ.

ಕೃಷಿ ವಿಶ್ವವಿದ್ಯಾನಿಲಯದಲ್ಲಿ ಮಾರಾಟಕ್ಕೆ ದೊರೆಯುವ ಪುಸ್ತಕಗಳು

1.	ಕೀಟ ವಿಂಗಡಣೆ		12–00
2.	ಕೀಟ ಹತೋಟಿ	(ದ್ವಿತೀಯ ಮುದ್ರಣ)	10–00
3.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ—ಭಾಗ 1		5–00
4.	ಕೃಷಿ ರಸಾಯನಶಾಸ್ತ್ರ ಶಬ್ದಾರ್ಥ ನಿರೂಪಣಾವಳಿ	(ಸಾದಾಪ್ರತಿ)	3–75
		(ಕ್ಯಾಲಿಕೊ ಪ್ರತಿ)	5–00
5.	ಮಣ್ಣು ಮತ್ತು ನೀರು ಸಂರಕ್ಷಣಾ ಕೈಪಿಡಿ	(ಸಾದಾಪ್ರತಿ)	12–00
		(ಕ್ಯಾಲಿಕೊ ಪ್ರತಿ)	15–00
6.	ರೈತರ ನೆಚ್ಚುಮೆಚ್ಚಿನ ಮರಗಳು	(ಸಾದಾಪ್ರತಿ)	12–00
		(ಕ್ಯಾಲಿಕೊ ಪ್ರತಿ)	15–00
7.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ–ಭಾಗ 2	(ಸಾದಾಪ್ರತಿ)	9–00
8.	ಮಣ್ಣು ಮತ್ತು ನೀರು ನಿರ್ವಹಣೆ	(ಸಾದಾಪ್ರತಿ)	12–00
		(ಕ್ಯಾಲಿಕೊ ಪ್ರತಿ)	15–00
9.	ಮಣ್ಣು	(ಸಾದಾಪ್ರತಿ)	9–00
		(ಕ್ಯಾಲಿಕೊ ಪ್ರತಿ)	12–00
10.	ಕೃಷಿ ಸಹಕಾರ	(ಸಾದಾಪ್ರತಿ)	5–00
		(ಕ್ಯಾಲಿಕೊ ಪ್ರತಿ)	8–00
11.	ಕಳೆಗಳು ಮತ್ತು ಕಳೆಗಳ ನಿಯಂತ್ರಣ	(ಸಾದಾಪ್ರತಿ)	12–00
		(ಕ್ಯಾಲಿಕೊ ಪ್ರತಿ)	15–00
12.	ಗೋಸಂಪತ್ತು	(ಸಾದಾಪ್ರತಿ)	5–00
		(ಕ್ಯಾಲಿಕೊ ಪ್ರತಿ)	8–00
13.	ಧಾನ್ಯದಾಸ್ತಾನು ತತ್ವ ಮತ್ತು ಪದ್ಧತಿಗಳು	(ಸಾದಾಪ್ರತಿ)	6–00
		(ಕ್ಯಾಲಿಕೊ ಪ್ರತಿ)	9–00
14.	ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ	(ಸಾದಾಪ್ರತಿ)	14–00
		(ಕ್ಯಾಲಿಕೊ ಪ್ರತಿ)	17–00
15.	ಪಶುವೈದ್ಯಕೀಯ ವಿಜ್ಞಾನ	(ಸಾದಾಪ್ರತಿ)	6–00
		(ಕ್ಯಾಲಿಕೊ ಪ್ರತಿ)	9–00
16.	ಹೊಲದ ಬೆಳೆಗಳಿಗೆ ಬೀಳುವ ಕೆಲವು ಕೀಟಗಳು	(ಸಾದಾಪ್ರತಿ)	6–50
		(ಕ್ಯಾಲಿಕೊ ಪ್ರತಿ)	9–50
17.	ಟ್ರ್ಯಾಕ್ಟರುಗಳು ಹಾಗೂ ಅವುಗಳನ್ನು	(ಸಾದಾಪ್ರತಿ)	6–00
	ಸುಸ್ಥಿತಿಯಲ್ಲಿಡುವ ಕ್ರಮಗಳು	(ಕ್ಯಾಲಿಕೊ ಪ್ರತಿ)	10–10
18.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ–ಭಾಗ 3	(ಸಾದಾ ಪ್ರತಿ)	8–00
		(ಕ್ಯಾಲಿಕೊ ಪ್ರತಿ)	12–00
19.	ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು	(ಸಾದಾ ಪ್ರತಿ)	9–00
		(ಕ್ಯಾಲಿಕೊ ಪ್ರತಿ)	13–00

20.	ಕಣಜದ ಪೀಡೆಗಳು ಮತ್ತು ಅವುಗಳ ಹತೋಟಿ	(ಸಾದಾ ಪ್ರತಿ)	12–00
		(ಕ್ಯಾಲಿಕೊ ಪ್ರತಿ)	15–00
21.	ಸಸ್ಯ ವರ್ಗೀಕರಣಶಾಸ್ತ್ರ	(ಸಾದಾ ಪ್ರತಿ)	12–00
		(ಕ್ಯಾಲಿಕೊ ಪ್ರತಿ)	16–00
22.	ಪೌಷ್ಟಿಕ ಆಹಾರ	(ಸಾದಾ ಪ್ರತಿ)	7–00
		(ಕ್ಯಾಲಿಕೊ ಪ್ರತಿ)	11–00
23.	ಕಡಲ ಮೀನುಗಾರಿಕೆ	(ಸಾದಾ ಪ್ರತಿ)	4–00
		(ಕ್ಯಾಲಿಕೊ ಪ್ರತಿ)	8–00
24.	ಧಾನ್ಯದ ಬೆಳೆಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		8–50
25.	ಕಬ್ಬಿನ ಬೆಳೆಗೆ ಬೀಳುವ ಕೀಟಗಳಂ ಹಾಗೂ ಅವುಗಳ ಹತೋಟಿ		3–50
26.	ಶಿಶುವಿಹಾರ	(ಸಾದಾ ಪ್ರತಿ)	7–50
		(ಕ್ಯಾಲಿಕೊ ಪ್ರತಿ)	10–50
27.	ಬೇಳೆಕಾಳುಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳಹತೋಟಿ		6–00
28.	ಕೃಷಿ ಎಂಜಿನಿಯರಿಂಗ್ ಪಠ್ಯ ಪುಸ್ತಕ ಸಮೀಕ್ಷಣೆ	(ಸಾದಾ ಪ್ರತಿ)	7–50
		(ಕ್ಯಾಲಿಕೊ ಪ್ರತಿ)	11–00
29.	ಇಲಿಗಳು ಹಾಗೂ ಅವುಗಳ ನಿಯಂತ್ರಣ	(ಸಾದಾ ಪ್ರತಿ)	7–50
		(ಕ್ಯಾಲಿಕೊ ಪ್ರತಿ)	11–50
30.	ತರಕಾರಿ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		10–00
31.	ಹಣ್ಣಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		13–00
32.	'ಕ್ಯಾನಿಂಗ್'–ಆಹಾರ ಜೋಪಾಸನೆಯ	(ಸಾದಾ ಪ್ರತಿ)	13–00
	ಒಂದು ವಿಧಾನ	(ಕ್ಯಾಲಿಕೊ ಪ್ರತಿ)	17–00
33.	ಅಲಂಕಾರ ಸಸ್ಯಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳಹತೋಟಿ		8–50
34.	ಜೀವಕೋಶ ಕ್ರಿಯಾಶಾಸ್ತ್ರ ಮತ್ತು ಜೀವ	(ಸಾದಾಪ್ರತಿ)	16–00
	ರಸಾಯನಶಾಸ್ತ್ರ	(ಕ್ಯಾಲಿಕೊ ಪ್ರತಿ)	20–00
35.	ಎಲುಬು ಶಾಸ್ತ್ರ	(ಸಾದಾಪ್ರತಿ)	9–00
		(ಕ್ಯಾಲಿಕೊ ಪ್ರತಿ)	13–00
36.	ಕಡಲೆಕಾಯಿ (ಶೇಂಗಾ)	(ಸಾದಾಪ್ರತಿ)	8–00
		(ಕ್ಯಾಲಿಕೊ ಪ್ರತಿ)	12–00
37.	ಗಣಿತಶಾಸ್ತ್ರ ಪ್ರವೇಶಿಕೆ ಭಾಗ–1	(ಸಾದಾಪ್ರತಿ)	20–00
		(ಕ್ಯಾಲಿಕೊ ಪ್ರತಿ)	24–00
38.	ತೆಂಗು, ಅಡಿಕೆ, ಇತರ ಗರಿಮರಗಳ ಕೀಟಗಳು		7–00
39.	ಪ್ಲಾಂಟೇಶನ್‌ಬೆಳೆಗಳಿಗೆ ಬೀಳುವಕೀಟಗಳು ಹಾಗೂ ಅವುಗಳಹತೋಟಿ		9–50
40.	ಭಾರತದಲ್ಲಿ ಕೋಳಿಸಾಕಣೆ	(ಸಾದಾ ಪ್ರತಿ)	18–00
		(ಕ್ಯಾಲಿಕೊ ಪ್ರತಿ)	22–00
41.	ಎಣ್ಣೆ ಬೀಜ(ಕಾಳು)ಗಳ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		6–00
42.	ಕಲ್ಲುನಾರು(ಭೂತಾಳೆ)ಗಿಡಗಳು	(ಸಾದಾಪ್ರತಿ)	4–00
		(ಕ್ಯಾಲಿಕೊ ಪ್ರತಿ)	8–00

43. ಭಾರತೀಯ ಗ್ರಾಮೀಣ ಯುವಕ ರೈತ (ಸಾದಾಪ್ರತಿ) 6–50
ಸಂಘಗಳ ಸಂಘಟನೆ (ಕ್ಯಾಲಿಕೋ ಪ್ರತಿ) 10–50

44. ಹತ್ತಿ (ನೂಲು) ಹಾಗೂ ನಾರಿನ ಬೆಳೆಗಳಿಗೆ
ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ 8–00

45. ಸಸ್ಯಸಾಮ್ರಾಜ್ಯ (ಅಚ್ಚಿನಲ್ಲಿದೆ)

46. ಮೂಲ ಅರ್ಥಶಾಸ್ತ್ರ ......

47. ಜೇನು ಸಾಕಣೆ ......

48. ಭಾರತದಲ್ಲಿ ಜೇನು ಸಾಕಣೆ ......

49. ಪಶುರೋಗಗಳು ಮತ್ತು ಸಾರ್ವಜನಿಕ **ಆರೋಗ್ಯ** ......

50. ತರಕಾರಿ ಬೆಳೆಗಳ ಕೀಟ ನಿಯಂತ್ರಣ ......

51. ಮೀನುಗಾರಿಕೆ ......

52. ಸಾಕು ಪ್ರಾಣಿಗಳ ಭ್ರೂಣಶಾಸ್ತ್ರ ......

53. ಸಾವಯವ ರಸಾಯನ ಶಾಸ್ತ್ರ ......

54. ಬೀಜಗಣಿತ ಪರಿಚಯ ......

55. ಹಸುರೆಲೆ ಗೊಬ್ಬರ, ಮೇವು ಹಾಗೂ ಉಪ್ಪುನೇರಳೆ
ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ
ಹತೋಟಿ ......

56. ರೇಖಾತ್ಮಕ ಬೀಜಗಣಿತ ......

57. ಕೃಷಿ ರಸಾಯನಶಾಸ್ತ್ರ ಪಾರಿಭಾಷಿಕ ಶಬ್ದಕೋಶ ......

58. ಮಾದಕ (ಹೊಗೆಸೊಪ್ಪು, ಗಾಂಜ) ಹಾಗೂ ಸಾಂಬಾರ
(ಅರಿಶಿನ ಇತ್ಯಾದಿ) ಬೆಳೆಗಳಿಗೆ ಬೀಳುವ ಕೀಟಗಳು
ಹಾಗೂ ಅವುಗಳ ಹತೋಟಿ ......

59. ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ
ಹತೋಟಿ ......

60. ಸಾಕುಪ್ರಾಣಿ ಮೂಲದ ಸೋಂಕು ರೋಗಗಳು ......

61. ಸಂಸ್ಕೃತಿಯ ರೂಪಿಕೆಗಳು ......

62. ಹುಲಿ - ರಾಷ್ಟ್ರೀಯ ಮೃಗ ......

63. ಸಹಕಾರಿ ಬೇಸಾಯ ......

64. ಜೀವಕೋಶ ......

65. ಮಣ್ಣು ಶಿಲೀಂಧ್ರಗಳ ಕೈಪಿಡಿ ......

66. ನೀರಾವರಿ ತತ್ವ ಹಾಗೂ ಪದ್ಧತಿಗಳು ......

U. A. S. Kannada Text Book Publications

GRAMEENA YUVAKA RAITHA SANGAGALA SANGHATANE

(ORGANISATION OF RURAL YOUNG FARMERS' CLUBS)

BY

P. HANUMAPPA

Pulished with the Assistance of the Government of India in the Ministry of Education and Social Welfare under the Scheme for Production of University Level Literature in Indian Languages.

1977

UNIVERSITY OF AGRICULTURAL SCIENCES

BANGALORE - 560024